ಇತಿಹಾಸ ಪಾಠಗಳು

(ಭಾಗ-2)

✍ ಮೌ| ಅಫ್ಝಲ್ ಹುಸೈನ್

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಇತಿಹಾಸವು ನಿರ್ದಿಷ್ಟ ಕಾಲದ ಘಟನಾವಳಿ ಮತ್ತು ಸ್ಥಿತಿಗತಿಗಳ ಸ್ಮರಣೆಯಾಗಿದೆ. ದನ್ನು ಕ್ರೋಡೀಕರಿಸಿ ರಕ್ಷಿಸಿಡುವುದರಿಂದ ಮುಂದಿನ ಪೀಳಿಗೆಯು ಅದರಿಂದ ಪ್ರಯೋಜನ ಡೆಯುತ್ತದೆ. ಜನಾಂಗ, ರಾಷ್ಟ್ರ ಹಾಗೂ ವ್ಯಕ್ತಿಗಳ ಅನುಭವಗಳಿಂದ ಪಾಠ ಕಲಿಯುತ್ತದೆ. ದರ ಹಿನ್ನೆಲೆಯಲ್ಲಿ ವಿಚಾರ ವಿಮರ್ಶೆ ನಡೆಸಿ ಭವಿಷ್ಯವನ್ನು ರೂಪಿಸುತ್ತದೆ. ಈ ರೀತಿಯ ಖಲೆಗಳು ಸುಭದ್ರವಾಗಿದ್ದರೆ ಹಿಂದಿನವರ ಬಗ್ಗೆ ಸರಿಯಾದ ಕಲ್ಪನೆ ಹೊಂದಲು ತ್ತು ತಮ್ಮ ನೀತಿಯ ಬಗ್ಗೆ ಸರಿಯಾದ ನಿರ್ಧಾರ ಕೈಗೊಳ್ಳಲು ಸಹಕಾರಿಯಾಗುತ್ತದೆ.

ಇತಿಹಾಸವನ್ನು ನಿಷ್ಪಕ್ಷಪಾತವಾಗಿ ದಾಖಲಿಸಿದರೆ, ಅದರಿಂದ ಮುಂದಿನ ಪೀಳಿಗೆಗೆ ಚ್ಚಿನ ಪ್ರಯೋಜನವಾಗುವುದು. ಅದಕ್ಕೆ ವ್ಯತಿರಿಕ್ತವಾಗಿ ಕೋಮುಭಾವನೆಯಿಂದ ಖಲಿಸಿದರೆ ಅದರಿಂದ ಮುಂದಿನ ಪೀಳಿಗೆಯವರಲ್ಲಿ ಹಿಂದಿನವರ ಬಗ್ಗೆ, ದ್ವೇಷಭಾವನೆ ಟ್ಟಿಕೊಳ್ಳಬಹುದು. ಇದು ಅತ್ಯಂತ ಅಪಾಯಕಾರಿ ಮನೋಭಾವವಾಗಿದೆ. ಈಗ ಂತಹದೇ ಶ್ರಮ ನಡೆಯುತ್ತಾ ಇದೆ. ಅದರಿಂದ ಒಳಿತು ಕೆಡುಕಾಗಿಯೂ - ಕೆಡುಕು ಳಿತಾಗಿಯೂ, ಒಳ್ಳೆಯವರು ಕೆಟ್ಟವರಾಗಿಯೂ - ಕೆಟ್ಟವರು ಒಳ್ಳೆಯವರಾಗಿಯೂ ತ್ರೀಕರಿಸಲ್ಪಡುತ್ತಾರೆ. ಅಷ್ಟೇ ಅಲ್ಲ, ದೇಶದ್ರೋಹಿಗಳನ್ನು ದೇಶಪ್ರೇಮಿಗಳಾಗಿಯೂ- ೇಶಪ್ರೇಮಿಗಳನ್ನು ದೇಶದ್ರೋಹಿಗಳಾಗಿಯೂ ಬಿಂಬಿಸಲಾಗುತ್ತದೆ.

ಈ ಶ್ರಮವನ್ನು ತಡೆಗಟ್ಟಬೇಕಾದರೆ ನಿಷ್ಪಕ್ಷಪಾತಿ ಇತಿಹಾಸಗಾರರು ಖಲಿಸಿರುವ ಅಂಶಗಳನ್ನು ಹೆಕ್ಕಿ ತೆಗೆದು ಜನಸಾಮಾನ್ಯರ ಮುಂದಿಡಬೇಕಾಗಿದೆ. ಸ್ಲಾಮಿ ಇತಿಹಾಸಗಾರರು ಕೇವಲ ಇತಿಹಾಸಗಾರರಾಗಿರಲಿಲ್ಲ. ಅವರಲ್ಲಿ ದೇವಭಕ್ತಿ, ್ರಮಾಣಿಕತೆ ಹಾಗೂ ವಸ್ತುನಿಷ್ಠವಾಗಿ ದಾಖಲಿಸುವ ಸಾಮರ್ಥ್ಯಗಳಿದ್ದುವು. ೌಲಾನಾ ಅಫ್ಝಲ್ ಹುಸೈನ್ ಬರೆದ 'ಆಈನ-ಯೆ-ತಾರೀಖ್' ಎಂಬ ಉರ್ದು ಂಥವನ್ನು 'ಇತಿಹಾಸ ಪಾಠಗಳು' ಎಂಬ ಹೆಸರಲ್ಲಿ ಶಾಂತಿ ಪ್ರಕಾಶನ ಎರಡು ಾಗಗಳಲ್ಲಿ ಪ್ರಕಟಿಸುತ್ತಿದೆ. ಮೊದಲ ಭಾಗ ಈಗಾಗಲೇ ಪ್ರಕಟವಾಗಿದ್ದು, ಈಗ ನಿಮ್ಮ ುಮ್ಮಲ್ಲಿರುವ 'ಇತಿಹಾಸ ಪಾಠಗಳು ಭಾಗ-2' ಎಂಬ ಈ ಪುಸ್ತಕದಲ್ಲಿ ಭಾರತದ ುಸ್ಲಿಮ್ ಇತಿಹಾಸದ ನೈಜ ಘಟನಾವಳಿಗಳನ್ನು ಹಾಗೂ ವ್ಯಕ್ತಿಗಳ ನೈಜ ಚಿತ್ರಣವನ್ನೂ ್ನಾಡ ಜನತೆಯ ಮುಂದಿಡಲು ಪ್ರಯತ್ನಿಸಲಾಗಿದೆ. ಇದರ ಅಧ್ಯಯನವು ಇತಿಹಾಸ ಿಚುವ ಷಡ್ಯಂತ್ರಗಳನ್ನು ಅನಾವರಣಗೊಳಿಸಲು ಸಹಕಾರಿಯಾಗಲೆಂದು ಹಾರೈಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಅಧ್ಯಾಯ-1

ಬಾಬರ್ ಮತ್ತು ಮೊಗಲ್ ವಂಶ

ಅಧ್ಯಾಯ-2

ಶೇರ್‌ಷಾಹ್

ಅಧ್ಯಾಯ-3

ಅಕ್ಬರ್

ಅಧ್ಯಾಯ-4

ನೂರುದ್ದೀನ್ ಜಹಾಂಗೀರ್

ಅಧ್ಯಾಯ-5

ಅಕ್ಬರನ ಕಾಲದ ಧಾರ್ಮಿಕ ವಿದ್ವಾಂಸರು

ಅಧ್ಯಾಯ-6

ಶಾಹಜಹಾನ್

ಅಧ್ಯಾಯ-7

ಔರಂಗಝೇಬ್

ಅಧ್ಯಾಯ-8

ಮುಸ್ಲಿಮರ ಕೊಡುಗೆಗಳು

ಧ್ಯಾಯ-1

ಬಾಬರ್ ಮತ್ತು ಮೊಗಲ್ ವಂಶ

ಬಾಬರ್‌ನ ನಿಜನಾಮ ಝಹೀರುದ್ದೀನ್. ತುರ್ಕಿ ಭಾಷೆಯಲ್ಲಿ ಬಾಬರ್ ಎಂದರೆ . ಆತ ತನ್ನ ಅನುಪಮ ಶೌರ್ಯ ಪರಾಕ್ರಮಗಳಿಂದಾಗಿ ಅದೇ ಹೆಸರಿನಿಂದ ಬಲ್ಪಡುತ್ತಿದ್ದ. ಕ್ರಿ.ಶ. 1483ರಲ್ಲಿ ಹುಟ್ಟಿದ. ಆತ ತಂದೆಯ ಕಡೆಯಿಂದ ಕುಖ್ಯಾತ ೂರ್ ಮತ್ತು ತಾಯಿಯ ಕಡೆಯಿಂದ ಕ್ರೂರಿ ಮೊಗಲ್ ದೊರೆ ಚಂಗೀಝ್‌ಖಾನನ ಂಧಿಕನಾಗಿದ್ದ. ಬಾಬರ್‌ಗೆ ಇವರಿಬ್ಬರಿಂದ ಶೌರ್ಯ ಪರಾಕ್ರಮಗಳು ಪಿತ್ರಾರ್ಜಿತವಾಗಿ ್ತವಾಗಿತ್ತು. ಆದರೆ ಸ್ವಭಾವ ಚಾರಿತ್ರ್ಯದಲ್ಲಿ ಬಾಬರ್ ತನ್ನ ಪೂರ್ವಿಕರಿಗಿಂತ ತೀರಾ ವಾಗಿದ್ದ. ತೈಮೂರನಂತು ತುರ್ಕಿಸ್ತಾನದವನಾಗಿದ್ದನಷ್ಟೇ. ಆದರೂ ಆತ ಚಂಗೀಝ್‌ನಂತಹ ಯೊಂದಿಗೆ ತನ್ನನ್ನು ಗುರುತಿಸಿಕೊಳ್ಳುವುದನ್ನು ಹೆಮ್ಮೆಯ ಸಂಗತಿಯಾಗಿ ಭಾವಿಸುತ್ತಿದ್ದ. ವಿರುದ್ಧವಾಗಿ ಬಾಬರ್ ತನ್ನನ್ನು ತುರ್ಕನೆಂದು ಹೇಳುತ್ತಿದ್ದ. ಮೊಗಲನೆಂದು ಸಿಕೊಳ್ಳಲು ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಈ ಪದದಿಂದ ಹೊರಸೂಸುತ್ತಿದ್ದ ತನ, ಕೊಲೆಗಡುಕತನ, ಸತ್ಯನಿಷೇಧ ಮತ್ತು ವಿದ್ರೋಹದ ದುರ್ಗಂಧವು ಬಾಬರನಿಗೆ ೂ ಸಹ್ಯವಾಗಿರಲಿಲ್ಲ. ಇದರ ಹೊರತಾಗಿಯೂ ಆತ ಮೊಗಲನೆಂದೂ ಭಾರತದಲ್ಲಿ ಲ್ ಸಾಮ್ರಾಜ್ಯದ ಸ್ಥಾಪಕನೆಂದೂ ಪ್ರಸಿದ್ಧನಾದ.

ಭಿಕ ಸ್ಥಿತಿ:

ಬಾಬರ್‌ನ ತಂದೆ ಉಮರ್ ಶೈಖ್ ಮಿರ್ಝಾ, ಫರ್ಗಾನಾ ಎಂಬ ಸಣ್ಣ ದ ಆಡಳಿತಗಾರನಾಗಿದ್ದ. ಬಾಬರ್ ಹನ್ನೆರಡನೆಯ ವರ್ಷ ಪ್ರಾಯಕ್ಕೆ ಟ್ಟಿದ್ದನಷ್ಟೇ. ಆಟ- ಊಟ-ಪಾಠಗಳಲ್ಲಿ ಕಳೆಯುವ ಕಾಲವಾಗಿತ್ತದು. ಆಗಲೇ ಆತನ ಇಹಲೋಕ ತ್ಯಜಿಸಿದರು. ತುರ್ಕ್‌ನಂತಹ ಕಲಹಪ್ರಿಯ ಜನಾಂಗದ ವ್ಯವಸ್ಥೆಯು ್‌ನ ಬಲಹೀನ ಭುಜಗಳ ಮೇಲೆ ಬಿದ್ದಿತು. ಫರ್ಗಾನಾ ರಾಜ್ಯವು ಆ ದಿನಗಳಲ್ಲಿ ಕೆಗಳಿಂದಲೂ ತೊಂದರೆಗೆ ಸಿಲುಕಿತ್ತು.

ಸ್ವತಃ ಆತನ ಸಂಬಂಧಿಕರೂ ವೈರಿಗಳಾಗಿ ಮಾರ್ಪಡುತ್ತಿದ್ದರು. ಆತನನ್ನು ವೆಂದು ಭಾವಿಸಿ ರಾಜ್ಯವನ್ನು ಕಬಳಿಸಿಕೊಳ್ಳುವ ಯೋಚನೆಯಲ್ಲಿದ್ದರು. ಆದರೆ ್ ಧೈರ್ಯಶಾಲಿ, ಸಂಘಟಕ ಮತ್ತು ವೀರ ಹುಡುಗನಾಗಿದ್ದ. ಆತ ಆಡಳಿತ

ಚುಕ್ಕಾಣಿಯನ್ನು ನಿಯಂತ್ರಿಸ ತೊಡಗಿದ. ತನ್ನ ಕಾಲದ ಅತ್ಯಂತ ಬುದ್ಧಿವಂತ ಮ ಎಂದು ಪರಿಗಣಿಸಲ್ಪಡುತ್ತಿದ್ದ ತನ್ನ ಅಜ್ಜಿಯೊಂದಿಗೆ ಸಮಾಲೋಚಿಸಿ ಹ ನಿರ್ವಹಿಸತೊಡಗಿದ. ಈ ನಡುವೆ ನಡೆದ ಎಲ್ಲ ದಾಳಿಗಳನ್ನು ಧೂಳೀಪಟಗೊಳಿ ಅದರಿಂದಾಗಿ ಶತ್ರುಗಳ ಧೈರ್ಯಗುಂದಿತು. ಬಹುಬೇಗನೆ ಪರಿಸ್ಥಿತಿ ತಿಳಿಗೊಂಡಿತು.

ಸಮರ್‌ಕಂದ್‌ನ ಮೇಲೆ ದಾಳಿ

ತೈಮೂರನ ನಂತರ ಕ್ರಮೇಣ ಆತನ ವಿಶಾಲ ಸಾಮ್ರಾಜ್ಯವು ಹರಿಹಂಚಾಗಿ ಹೋ ಅದರ ವಾರೀಸುದಾರರು ತಮಗೆ ಸಿಕ್ಕಿದ್ದನ್ನೆಲ್ಲ ಸ್ವಾಧೀನ ಪಡಿಸುತ್ತಿದ್ದರು. ಸಾಮ ವಿಸ್ತರಣೆಗಾಗಿ ತಮ್ಮ ವಂಶದವರೊಂದಿಗೇ ಸಂಘರ್ಷಕ್ಕಿಳಿಯುತ್ತಿದ್ದರು. ಸಮರ್‌ಕಂ ಗದ್ದುಗೆಯನ್ನು ಸ್ವಾಧೀನಪಡಿಸಿ ತೈಮೂರನ ವಿಶಾಲ ಸಾಮ್ರಾಜ್ಯದ ಮೇಲೆ ಅಧಿ ಚಲಾಯಿಸಲು ಎಲ್ಲರೂ ಪ್ರಯತ್ನಿಸುತ್ತಿದ್ದರು. ಬೇರೆ ತೈಮೂರೀ ರಾಜಕುಮಾರರಂತೆ ಬಾ ಮನಸ್ಸಲ್ಲೂ ಇದೇ ಆಕಾಂಕ್ಷೆ ಗರಿಗೆದರುತ್ತಿತ್ತು.

ಬಾಬರ್ ಆಡಳಿತದ ಚುಕ್ಕಾಣಿ ಹಿಡಿದು ಕೆಲವೇ ದಿನಗಳಾಗಿರಬಹುದ ಸಮರ್‌ಕಂದ್‌ನ ಅರಸ ನಿಧನನಾದ. ಬಾಬರ್ ಈ ಸದವಕಾಶವನ್ನು ಬಳಸಿಕೊಳ್ಳಬಯ ಅಂತೆಯೇ ಫರ್ಗಾನಾದ ವ್ಯವಸ್ಥೆಯನ್ನು ತನ್ನ ಮಂತ್ರಿಗೆ ವಹಿಸಿದ. ಸ್ವತಃ ದಾಳಿ ಸಮರ್‌ಕಂದನ್ನು ವಶಪಡಿಸಿಕೊಂಡ. ಸಮರ್‌ಕಂದ್‌ನಲ್ಲಿ ಉಳಿದು ಕೆಲವೇ ದಿನಗಳಾ ಅನಾರೋಗ್ಯ ಪೀಡಿತನಾದ. ದಿನಗಳೆದಂತೆ ಸ್ಥಿತಿ ಬಿಗಡಾಯಿಸುತ್ತ ಹೋಯಿತು. ಮ ಈ ವಿಷಯ ತಿಳಿದಾಗ, ಆತ ಆರೋಗ್ಯವಂತನಾಗುವ ಬಗ್ಗೆ ಭರವಸೆಯಿಲ್ಲದೆ ಶತ್ರುಗಳೊ ಸೇರಿಕೊಂಡ. ಫರ್ಗಾನಾ ಸಾಮ್ರಾಜ್ಯ ಬಾಬರ್‌ನ ಕೈಯಿಂದ ಜಾರತೊಡಗಿತು. ಪರಿಸ್ಥಿತಿಯನ್ನು ಅಜ್ಜಿ ಆತನಿಗೆ ಮನಗಾಣಿಸಿದಳು. ಬಾಬರ್ ಅನಾರೋಗ್ಯವನ್ನು ಲೆ ಸಮರ್‌ಕಂದ್ ಬಿಟ್ಟು ಫರ್ಗಾನಾ ಕಡೆಗೆ ಧಾವಿಸಿದ. ಆದರೆ ನಿರರ್ಥಕ. ಅದು ಶತ ವಶವಾಗಿ ಬಿಟ್ಟಿತ್ತು.

ಈಗ ಬಾಬರ್ ವಿಚಿತ್ರ ಸಂಘರ್ಷಕ್ಕೆ ಗುರಿಯಾದ. ಸಮರ್‌ಕಂದ್ ಮತ್ತು ಫಗ ಎರಡೂ ಕೈ ತಪ್ಪಿತ್ತು. ಸಂಪತ್ಸೌಕರ್ಯಗಳನ್ನು ಕಳಕೊಂಡು ಆಚೀಚೆ ಅಲೆದಾಡತೊ ಇಪ್ಪತ್ತು ವರ್ಷಗಳ ಕಾಲ ಈ ನಿಟ್ಟಿನಲ್ಲಿ ನಿರಂತರ ಪ್ರಯತ್ನಿಸಿದ. ವಿವಿಧ ಸಂಕಷ್ಟ ಸಹಿಸಿದ. ಆದರೆ ಶತ್ರುಗಳ ಎದುರು ಒಂದೂ ನಡೆಯದಾಯಿತು. ಆತ ತನ್ನ ದೇಶದ ಬಹಳ ನಿರಾಶನಾದ.

ಕಾಬೂಲ್ ವಶ

ಅನಿರೀಕ್ಷಿತವಾಗಿ ಈ ಸಮಯದಲ್ಲಿ ಕಾಬೂಲ್‌ನಲ್ಲಿ ಬಹಳ ಅರಾಜಕತೆಯುಂಟಾ ಅಲ್ಲಿನ ಆಡಳಿತಗಾರರನ್ನು ಕೊಂದು ಖುಸ್ರೂ ಎಂಬ ವ್ಯಕ್ತಿ ಅದನ್ನು ವಶಪಡಿಸಿಕೊ ಸಾಮ್ರಾಜ್ಯದ ಸರದಾರರು ಅವನನ್ನು ಅಪಹಾರಕ ಎಂದು ಭಾವಿಸುತ್ತಿದ್ದರು. ಆದ

ಕ್ರಿ. 1504ರಲ್ಲಿ ಈ ಜನರು ಬಾಬರ್‌ನೊಂದಿಗೆ ಸಹಕರಿಸಿ ಕಾಬೂಲ್ ಬಾಬರನ ವಶವಾಗುವಂತೆ ಮಾಡಿದರು. ನಿಧಾನವಾಗಿ ಬಾಬರ್ ಗಝ್ನಿವಿ, ಕಂದಹಾರ್ ಮತ್ತು ಹೀರತ್ ಇತ್ಯಾದಿಗಳನ್ನು ಸ್ವಾಧೀನಪಡಿಸಿದ. ಈ ರೀತಿ ದೀರ್ಘ ಅವಧಿಯ ಅಲೆದಾಟದ ನಂತರ ವಿಶ್ವದೊಡೆಯನು ಆತನಿಗೆ ಸಾಮ್ರಾಜ್ಯವೊಂದರ ಆಧಿಪತ್ಯ ದಯಪಾಲಿಸಿದ. ಹತ್ತು ವರ್ಷಗಳ ನಿರಂತರ ಸಂಕಷ್ಟದ ನಂತರ ಆಡಳಿತ ದೊರೆತಿತ್ತು. ಆದ್ದರಿಂದ ಬಾಬರ್ ಅಲ್ಲಾಹನ ದಾಸನಾಗಿ ಮುಂದುವರಿಯಬಹುದೆಂದು ಭಾವಿಸಲಾಗಿತ್ತು. ಆದರೆ ಕೆಲವೇ ಸಮಯದೊಳಗೆ ಆತ ಭೋಗವಿಲಾಸಗಳಲ್ಲಿ ತೊಡಗಿದ. ಪ್ರಜೆಗಳ ಕಠಿಣ ಶ್ರಮದ ಸಂಪಾದನೆಯಿಂದ ತನಗಾಗಿ ಭವ್ಯ ಬಂಗಲೆಯನ್ನು ನಿರ್ಮಿಸಿದ. ಅದನ್ನು ವಿವಿಧ ವಸ್ತುಗಳಿಂದ ಅಲಂಕೃತಗೊಳಿಸಿದ. ತನ್ನ ಸಾಮ್ರಾಜ್ಯದ ಸರದಾರರೊಂದಿಗೆ ಮದ್ಯ ಮತ್ತು ಹಂದಿ ಮಾಂಸದ ರುಚಿ ಸವಿಯತೊಡಗಿದ. ಪರಲೋಕ ವಿಚಾರಣೆಯ ಬಗ್ಗೆ ನಿರ್ಲಕ್ಷ್ಯನಾಗಿ ಇಹಲೋಕದಲ್ಲೇ ಸ್ವರ್ಗದ ಸವಿಯನ್ನು ಅನುಭವಿಸ ಬಯಸಿರುವಂತೆ ಆತನ ವರ್ತನೆಗಳಿಂದ ಮಾತ್ರವಲ್ಲ ಮಾತುಗಳಿಂದಲೂ ವ್ಯಕ್ತವಾಗುತ್ತಿತ್ತು.

ಅಲ್ಲಾಹನು ದಯಾಮಯ ಮತ್ತು ಕರುಣಾನಿಧಿಯಾಗಿರುವನಷ್ಟೇ. ಆತ ತನ್ನ ದಾಸರನ್ನು ಹಿಡಿಯುವ ಮೊದಲು ಸಂಭಾಳಿಸಿಕೊಳ್ಳಲು ಕಾಲಾವಕಾಶ ನೀಡುತ್ತಾನೆ. ಅಂತೆಯೇ ಬಾಬರನಿಗೂ ಸಡಿಲು ಸಿಕ್ಕಿತು. ದೆಹಲಿಯ ಗದ್ದುಗೆಯನ್ನು ಆತ ಸ್ವಾಧೀನಪಡಿಸಿಕೊಂಡ.

ಬಾಬರನಿಗಿಂತ ಮುಂಚಿನ ದಾಳಿಕೋರರು ಸುಲಿಗೆಯ ಇರಾದೆಯಿಂದ ಬರುತ್ತಿದ್ದರೇ ಹೊರತು ಭಾರತದಲ್ಲಿ ಸ್ಥಿರವಾಸ ಹೂಡುವ ಉದ್ದೇಶದಿಂದಲ್ಲ. ಅವಕಾಶ ದೊರೆತಾಗಲೆಲ್ಲ ಬಹು ನಿಷ್ಕರುಣೆಯಿಂದ ದರೋಡೆ ನಡೆಸುತ್ತಿದ್ದರು. ಆದರೆ ಬಾಬರ್ ಶಾಶ್ವತವಾಗಿ ನೆಲೆ ಸುವ ಉದ್ದೇಶದಿಂದ ಬಂದಿದ್ದ. ಆದ್ದರಿಂದ ಸುಲಿಗೆಯ ಬದಲು ತನ್ನ ಸದ್ವರ್ತನೆ ಮತ್ತು ಔದಾರ್ಯದಿಂದ ಭಾರತೀಯರ ಮನ ಗೆಲ್ಲಲು ಪ್ರಯತ್ನಿಸತೊಡಗಿದ.

...ಟ್ಟ ಯುದ್ಧ

ದಾಳಿ ನಡೆಸಲು ಬಾಬರನನ್ನು ಆಹ್ವಾನಿಸಿದ ರಾಣಾ ಸಾಂಗಾ(ರಾಣಾ ಸಂಗ್ರಾಮ್ ಸಿಂಗ್), ಇತರ ಅಫ್‌ಘಾನ್ ಸರದಾರರು ಮತ್ತು ರಾಜಕುಮಾರರು ಈ ಮುಂಚಿನ ದಾಳಿಕೋರರಂತೆ ಬಾಬರ್ ಕೂಡಾ ಸುಲಿಗೆ ನಡೆಸಿ ಮರಳಿ ಹೋಗುವನೆಂದು ಭಾವಿಸಿದ್ದರು. ಇಬ್ರಾಹೀಮ್ ಸೋತ ನಂತರ ಸಸಂತೋಷ ಸ್ವಾಧೀನಪಡಿಸಿಕೊಳ್ಳಬಹುದೆಂದು ಯೋಚಿಸಿದ್ದರು. ಆದರೆ ಬಾಬರ್ ತನ್ನ ಸಂಗಾತಿಗಳನ್ನು ಸ್ಥಿರ ವಾಸಕ್ಕಾಗಿ ಸನ್ನದ್ಧ ಗೊಳಿಸಿಕೊಂಡಾಗ ಅವರಿಗೆ ಆಶಾಭಂಗವಾಯಿತು. ಈಗ ಅಫ್‌ಘಾನ್ ಸರದಾರರು ತಮ್ಮ ತಪ್ಪಿನ ಬಗ್ಗೆ ಪಶ್ಚಾತ್ತಾಪಪಟ್ಟರು. ಮೊಗಲರನ್ನು ಹೊಡೆದೋಡಿಸಲು ಒಳಸಂಚು ನಡೆಸಿದರು. ಆದರೆ ಬಾಬರ್ ಕೆಲವೇ ದಿನಗಳಲ್ಲಿ ತನ್ನ ಪುತ್ರ ಹುಮಾಯೂನ್‌ನ ಮೂಲಕ ಅವರ ಸಂಚನ್ನು ಉಡುಗಿಸಿಬಿಟ್ಟ. ಜೋನ್‌ಪುರದ ತನಕದ ಎಲ್ಲ ವಿರೋಧಿಗಳ ಕೋಟೆಗಳನ್ನು ವಶಗೊಳಿಸಿದ.

ಇತ್ತ ರಾಣಾ ಸಾಂಗಾನು ರಜಪೂತರ ಅನೇಕ ರಾಜರನ್ನು ನೆರವಿಗೆ ಪ್ರೇರೇ ಎಂಭತ್ತು ಸಾವಿರ ಕುದುರೆ ಸವಾರರು ಮತ್ತು ಐನೂರು ಯುದ್ಧದ ಗಜಗಳನ್ನು ಒದ ಬಾಬರ್‌ನನ್ನು ಎದುರಿಸಲು ಮುಂದಾದ. ಸಿಕಂದರ್ ಲೋದಿಯ ಪುತ್ರ ಮೆಹಮೂ ಮತ್ತು ಇತರ ಮುಸ್ಲಿಮ್ ಸರದಾರರು ಕೂಡಾ ತಂತಮ್ಮ ಸೇನೆಗಳೊಂದಿಗೆ ರಾಣಾ ಸಾ ನೊಂದಿಗೆ ಸೇರಿಕೊಂಡರು. ಎಲ್ಲರೂ ಐಕ್ಯ ಸೇನೆ ರಚಿಸಿ ಮೊಗಲರನ್ನು ಹೊರದೂ ನಿಶ್ಚಯಿಸಿದರು. ರಾಣಾ ಸಾಂಗಾನ ಶೌರ್ಯದ ಡಂಗುರ ಬಾರಿಸಲ್ಪಡುತ್ತಿತ್ತು. ಆತ ಬ ಕಲಹಪ್ರಿಯ ವೀರನಾಗಿದ್ದ. ಅನೇಕ ಯುದ್ಧಗಳಲ್ಲಿ ಭಾಗವಹಿಸಿ ತನ್ನ ಒಂದು ಕೈ, ಒ ಕಣ್ಣು ಮತ್ತು ಒಂದು ಕಾಲನ್ನು ರಣರಂಗಕ್ಕೆ ಬಲಿ ನೀಡಿದ್ದ. ಅವನ ಶರೀರದಲ್ಲಿ ಕ ಯೆಂದರೂ ಎಂಭತ್ತು ಗಾಯಗಳಿದ್ದವು. ಆತ ಇಷ್ಟೊಂದು ಸೇನಾ ಸರಂಜಾಮುಗಳೊಂ ಮುನ್ನಡೆದಾಗ ಮೊಗಲ್ ಸೈನಿಕರಲ್ಲಿ ಭೀತಿ ಮತ್ತು ಹತಾಶೆ ವ್ಯಾಪಿಸಿತು. ಪ್ರಾದೇ ಸೈನಿಕರು ಮತ್ತು ಸರದಾರರು ಒಂದೊಂದಾಗಿ ಸಮೂಹದಿಂದ ಬೇರ್ಪಡ ತೊಡಗಿದ ಕೇವಲ ಹನ್ನೆರಡು ಸಾವಿರದ ಸೈನ್ಯ ಹಿಡಿದು ಬಾಬರ್ ಬಂದಿದ್ದ. ಅದರಲ್ಲೂ ಸ್ವಲ್ಪ ಕೊ ಯುಂಟಾಗಿತ್ತು. ಸೈನಿಕರಲ್ಲೂ ಆ ದೃಢಚಿತ್ತತೆ ಇರಲಿಲ್ಲ. ಇಷ್ಟು ಪುಟ್ಟ ಸೇನೆಯಿಂದ ರ ಸಾಂಗಾನನ್ನು ಎದುರಿಸುವುದು ಕಷ್ಟದ ಕೆಲಸವಾಗಿತ್ತು. ಅಂತೆಯೇ ಬಾಬರನೂ ಭೋಗವಿಲಾಸಗಳನ್ನು ಮರೆಯಬೇಕಾಗಿ ಬಂತು. ದೇವ ಸನ್ನಿಧಿಯಲ್ಲಿ ರೋದಿಸ ಅಂಗಲಾಚಲೂ ತೊಡಗಿದ. ತನ್ನ ಗತ ಪಾಪಗಳಿಗಾಗಿ ಕ್ಷಮೆ ಯಾಚಿಸ ತೊಡಗಿದ

ಅಲ್ಲಾಹನು ಆತನಿಗೆ ಸುಧಾರಿಸಿಕೊಳ್ಳಲು ಅನುಗ್ರಹಿಸಿದ. ಆತ ಮದ್ಯಪಾನ ತ್ಯಜಿಸಿ ಶರಾಬಿನ ಎಲ್ಲ ಬೆಲೆ ಬಾಳುವ ಪಾತ್ರೆಗಳನ್ನು ಒಡೆದು ಹಾಕಿ ಚಿನ್ನ ಬೆಳ್ಳಿಯ ಬಡವರಲ್ಲಿ ಹಂಚಿದ. ಆಗಷ್ಟೆ ಗಝ್ನಿವಿಯಿಂದ ಕೆಲವು ಒಂಟೆಗಳಲ್ಲಿ ದ್ರಾಕ್ಷಾ ಮದಿರೆಯ ತರಿಸಲಾಗಿತ್ತು. ಅದರಲ್ಲಿ ಉಪ್ಪು ಬೆರೆಸಿ ಹುಳಿರಸವಾಗಿ ಪರಿವರ್ತಿಸಲಾಯಿತು. ಭೋಗವಿಲಾಸಕ್ಕಾಗಿ ಶರೀಅತ್‌ಗೆ ವಿರುದ್ಧವಾದ ಕೆಲವು ತೆರಿಗೆಗಳನ್ನು ವಸೂಲು ಮಾಡುತ್ತಿ ಅದನ್ನೂ ವರ್ಜಿಸಿದ. ಮುಂದೆ ಶುದ್ಧ ಬದುಕು ಸಾಗಿಸಲು ನಿರ್ಧರಿಸಿದ. ಅನಂತರ ಅಧಿಕಾರಿಗಳು ಮತ್ತು ಸರದಾರರನ್ನು ಸೇರಿಸಿ ಈ ರೀತಿ ಭಾಷಣ ಮಾಡಿದ-

"ನನ್ನ ವೀರ ಸಂಗಾತಿಗಳೇ! ಶಾಶ್ವತತೆಯೆಂಬುದು ಅಲ್ಲಾಹನಿಗೆ ಮಾತ್ರ ಮೀ ಎಲ್ಲವೂ ನಾಶ ಹೊಂದಲೇ ಬೇಕಾಗಿದೆ. ತಾಯಿಯ ಉದರವನ್ನು ಕಂಡವನು ಗೋ ಹೊಟ್ಟೆಯನ್ನು ಸೇರಬೇಕಾಗಿದೆ. ಈ ಲೋಕಕ್ಕೆ ಬಂದವನು ನಿಶ್ಚಯವಾಗಿಯೂ ಒ ದಿನ ಮರಳಬೇಕಾಗಿದೆ. ಅಪಮಾನಿತನಾಗಿ ಬದುಕುವುದಕ್ಕಿಂತ ಸುಪ್ರಸಿದ್ಧನಾಗಿ ಮ ಹೊಂದುವುದು ಸಾವಿರ ಪಾಲು ಉತ್ತಮ. ಅಂದರೆ ದೇವಮಾರ್ಗದಲ್ಲಿ ಅಂತ್ಯ ಕ ಹುತಾತ್ಮತೆಯ ಪದವಿ ಮತ್ತು ಬದುಕುಳಿದರೆ ವೀರನ ಪಟ್ಟ. ಇಂತಹ ಸುದೈವ ನ ಪ್ರಾಪ್ತವಾಗಿರುವುದು ಅಲ್ಲಾಹನ ಬಹುದೊಡ್ಡ ಉಪಕಾರವಾಗಿದೆ. ಮರಣ ಓಡಿಹೋಗಲಾರೆವು ಮತ್ತು ಜೀವವಿರುವ ತನಕ ಯುದ್ಧದಿಂದ ಮುಖ ತಿರುಗಿಸಲ ಎಂದು ಎಲ್ಲರೂ ಪ್ರತಿಜ್ಞೆಗೈಯಿರಿ."

ಈ ಭಾಷಣ ಸೇನೆಯ ಮೇಲೆ ಮಾಂತ್ರಿಕ ಪ್ರಭಾವ ಬೀರಿತು. ಎಲ್ಲರ ಆತ್ಮ ಸ್ಥೈರ್ಯ ಚ್ಚಿತು. ಹಿರಿಯ-ಕಿರಿಯರೆಲ್ಲರೂ ಕುರ್‌ಆನನ್ನು ಹಿಡಿದು ಯುದ್ಧ ಮಾಡುವ ಸಂಕಲ್ಪಗೈದರು. ಗಲ್ ಸೇನೆಯು ದೇವಮಾರ್ಗದ ಹೋರಾಟದ ಸ್ಫೂರ್ತಿಯೊಂದಿಗೆ ಮುನ್ನಡೆಯಿತು. ಗ್ರಾದಿಂದ ಸುಮಾರು ಇಪ್ಪತ್ತು ಮೈಲು ದೂರದಲ್ಲಿ ಕನ್ವಾದ ಬಳಿ ಕಾದಾಟ ನಡೆಯಿತು. ಗಲರು ಆತ್ಮ ಸಮರ್ಪಣೆಯಿಂದ ಹೋರಾಡಿದರು. ಅವರ ಬಳಿ ಸೈನ್ಯವಿದ್ದುದು ಬಹಳ ಮೆ. ಆದರೆ ತೋಪು, ಗಾಳಿ ಕೋವಿ ಮತ್ತು ನವೀನ ಸಿಡಿಮದ್ದು ಅಸ್ತ್ರಗಳ ಎದುರು ಸ್ತ್ರಿಗಳ ಒಂದೂ ನಡೆಯದಾಯಿತು. ಸಾವಿರಾರು ಮಂದಿ ಹತ್ಯೆಗೈಯಲ್ಪಟ್ಟರು. ಕೊನೆಗೆ ನರ ಧೈರ್ಯ ಉಡುಗಿತು. ಎದುರಿಸಲಾಗದೆ ಎಲ್ಲರೂ ಓಡಹತ್ತಿದರು. ರಾಣಾ ಸಾಂಗಾ ವ್ರವಾಗಿ ಗಾಯಗೊಂಡ. ಆದರೆ ಸಂಗಾತಿಗಳ ನೆರವಿನಿಂದ ಬದುಕುಳಿದ. ಎರಡು ವರ್ಷಗಳ ತರ ಆತನ ಸಂಗಾತಿಯೊಬ್ಬನು ವಿಷ ಕೊಟ್ಟು ಆತನನ್ನು ಸಾಯಿಸಿದ. ದೇವೇಚ್ಛೆಯಂತೆ ಖ್ಯಾ ಕೊರತೆಯ ಹೊರತಾಗಿಯೂ ಬಾಬರನಿಗೆ ವಿಜಯ ಪ್ರಾಪ್ತವಾಯಿತು. ಆದರೆ ಗೆಲುವಿನ ರುಷದಲ್ಲಿ ಆತ ಕೆಲವು ಅತಿರೇಕಗಳನ್ನು ಆರಂಭಿಸಿದ. ಉದಾಹರಣೆಗೆ, ಕೊಲೆಯಾದವರ ಗಳಿಂದ ಯುದ್ಧ ರಂಗದಲ್ಲೇ ಮಿನಾರ ನಿರ್ಮಿಸಿದ. ಈ ರೀತಿ ತನ್ನ ಪೂರ್ವಿಕನಾದ ಕ್ರೂರಿ ಗೀಸ್‌ಖಾನನ ರೂಢಿಯನ್ನು ಜೀವಂತಗೊಳಿಸಿದ.

ಜಪೂತ ಮತ್ತು ಅಫ಼ಘಾನರೊಂದಿಗೆ ಮುಂದುವರಿದ ಘರ್ಷಣೆ

ಈ ಯುದ್ಧವು ವೈರಿಗಳ ಬೆನ್ನು ಮುರಿಯಿತು. ಅಫ಼ಘಾನರ ಪ್ರತಿಷ್ಠೆ ಈ ಮುಂಚೆಯೇ ಣ್ಣುಮುಕ್ಕಿತ್ತು. ರಜಪೂತರ ವಿಶ್ವಾಸಾರ್ಹತೆಯೂ ಅಂತ್ಯ ಕಂಡಿತು. ಕನ್ವಾದಿಂದ ರ್ಗಮಿಸಿದ ಬಾಬರ್ ಆಗ್ರಾ ಮತ್ತು ದೆಹಲಿ ಪರಿಸರದ ಜಿಲ್ಲೆಗಳ ವ್ಯವಸ್ಥೆಗಳನ್ನು ಪಡಿಸುವಲ್ಲಿ ನಿರತನಾದ. ಈ ಮಧ್ಯೆ ರಜಪೂತರ ಸೈನ್ಯವು ಚಂದ್ರಗಿರಿಯ ರಾಜ ದನಿರಾಸೆಯ ನೇತೃತ್ವದಲ್ಲಿ ತನ್ನ ಶಕ್ತಿಗಳನ್ನೆಲ್ಲ ಒಗ್ಗೂಡಿಸಿ ಮತ್ತೆ ಯುದ್ಧಕ್ಕಾಗಿ ಯಾರಿ ನಡೆಸುತ್ತಿರುವ ಬಗ್ಗೆ ಬಾಬರ್‌ನಿಗೆ ಮಾಹಿತಿ ಸಿಕ್ಕಿತು. ಅವರ ಅಳಿದುಳಿದ ಯನ್ನೂ ಮುರಿಯುವುದಕ್ಕಾಗಿ ಬಾಬರ್ ಆಕ್ರಮಣ ನಡೆಸಿದ. ರಜಪೂತರು ಆತನನ್ನು ದುರಿಸದಾದರು. ಗೆಲುವಿನ ಬಗ್ಗೆ ಹತಾಶರಾಗಿ ಎಂದಿನಂತೆ ತಮ್ಮ ಕೈಯಾರೆ ಸ್ವಕುಟುಂಬದ ತ್ಯವನ್ನು ಕಂಡುಕೊಂಡರು. ಮೃತ್ಯುವಿನೆಡೆಗೆ ಧಾವಿಸಿದರು. ಕೆಲವು ಸಮಯದಲ್ಲೇ ಜಯ ಬಾಬರನ ಪರವಾಯಿತು.

ಇತ್ತ ಮೆಹಮೂದ್ ಲೋದಿ ಕನ್ವಾದಿಂದ ಓಡಿಹೋಗಿ ಉತ್ತರ ಬಿಹಾರ ತಲುಪಿದ. ಣ ಸರದಾರರನ್ನು ಸೇರಿಸಿ ಆಕ್ರಮಣಕ್ಕಾಗಿ ಸಿದ್ಧತೆ ನಡೆಸತೊಡಗಿದ. ಬಂಗಾಳದ ರಾಜ ಸ್ರತ್‌ಶಾಹ್, ಮೆಹಮೂದ್‌ನ ಭಾವನಾಗಿದ್ದ. ಆತ ಮೆಹ್‌ಮೂದ್‌ನಿಗೆ ಸಹಕರಿಸುತ್ತಿದ್ದ. ಬರನಿಗೆ ಮಾಹಿತಿ ದೊರೆತಾಗ ಆತ ಚಂದ್ರಗಿರಿಯಿಂದ ನೇರವಾಗಿ ಬಿಹಾರ ತಲುಪಿದ. ಗರ್ ಮತ್ತು ಗಂಗಾನದಿಯ ಸಂಗಮ ಪ್ರದೇಶದಲ್ಲಿ ಸೈನ್ಯಗಳೆರಡು ಎದುರುಗೊಂಡವು. ಡು ದಿನಗಳ ಘೋರ ಯುದ್ಧದ ನಂತರ ಮೆಹಮೂದ್ ಪರಾಜಿತನಾಗಿ ಹಿಂದೆ ಸರಿದ.

ನುಸ್ರತ್ ಶಾಹ್ ಕೂಡಾ ವಿಧೇಯತೆ ಕೈಗೊಳ್ಳಲು ನಿರ್ಬಂಧಿತನಾದ. ಆಕಸ್ಮಿಕವೆಂಬ
ಬಾಬರನ ಆರೋಗ್ಯ ಹದಗೆಟ್ಟಿತು. ಆಗ್ರಾಕ್ಕೆ ಮರಳಬೇಕಾಯಿತು. ಇಲ್ಲಿ ಕೆಲವು ತಿಂ
ಅಸ್ವಸ್ಥತೆಯ ನಂತರ ಕ್ರಿ.ಶ. 1530 ಡಿಸೆಂಬರ್‌ನಂದು ಮರಣವನ್ನಪ್ಪಿದ.

ಬಾಬರನ ಮರಣ

ಬಾಬರ್‌ನ ಮರಣದ ಬಗ್ಗೆ ಒಂದು ಅಪೂರ್ವ ಐತಿಹ್ಯ ಪ್ರಸಿದ್ಧವಿದೆ. ಆಗ
ಮರಳಿದ ಆತನಿಗೆ ತನ್ನ ಪ್ರಿಯ ಪುತ್ರ ಹುಮಾಯೂನ್ ಸಂಭಲ್‌ನಲ್ಲಿ ತಿ
ಅಸ್ವಸ್ಥನಾಗಿರುವುದು ತಿಳಿದುಬಂತು. ಆತ ಚಿಕಿತ್ಸೆಗಾಗಿ ಮಗನನ್ನು ಆಗ್ರಾಕ್ಕೆ ಕರೆಸಿಕೊಂ
ಹೆಚ್ಚಿನ ಪ್ರಯಾಣವನ್ನು ದೋಣಿಯ ಮೂಲಕ ನಡೆಸಬೇಕಾಗಿದ್ದರಿಂದ ಚಳಿಯಿಂದ
ಆಗ್ರಾದ ಹಾದಿಯಲ್ಲಿಯೇ ಆತನಿಗೆ ರೋಗ ಬಾಧಿಸಿತು. ದಿನಗಳೆದಂತೆ ಪರಿ
ಬಿಗಡಾಯಿಸುತ್ತ ಹೋಯಿತು. ಬಾಬರ್ ಸಾಧ್ಯವಾದ ಎಲ್ಲ ಚಿಕಿತ್ಸೆಗಳನ್ನು ನಡೆಸಿದ. ಆ
ಸ್ವಲ್ಪವೂ ಗುಣವಾಗಲಿಲ್ಲ. ಕೊನೆಯ ಚಿಕಿತ್ಸೆಯಾಗಿ ಅವನಿಗೆ ಕಂಡದ್ದು ಅಲ್ಲಾಹನ
ಪ್ರಾರ್ಥನೆ ಮತ್ತು ಅವನ ಮಾರ್ಗದಲ್ಲಿ ಅತ್ಯಂತ ಪ್ರೀತಿಪಾತ್ರ ವಸ್ತುವಾದ ಪ್ರಾಣದ
ಮಾತ್ರ. ಬಾಬರ್ ಉಪವಾಸ ಆಚರಿಸಿದ. ವಿನಮ್ರವಾಗಿ ಪ್ರಾರ್ಥಿಸಿದ. ರೋಗಪೀ
ಪುತ್ರನ ಮಂಚದ ಸುತ್ತ ಪ್ರದಕ್ಷಿಣೆ ಬಂದು ಹೀಗೆ ಅಂಗಲಾಚಿದ, 'ಓ ಅಲ್ಲಾಹ್!
ಮಗನಿಗೆ ಆರೋಗ್ಯ ದಯಪಾಲಿಸು. ಅವನು ಎದ್ದು ನಿಲ್ಲುವಂತೆ ಮಾಡು. ಅವನ ಬದ
ನನ್ನ ಪ್ರಾಣವನ್ನು ತೆಗೆದುಕೋ.'

ಆ ದಿನದಿಂದಲೇ ಹುಮಾಯೂನನ ಆರೋಗ್ಯ ಸ್ಥಿತಿ ನಿಧಾನವಾಗಿ ಸುಧಾರಿಸು
ಬಂತು. ಬಾಬರನ ಆರೋಗ್ಯ ದಿನಗಳೆದಂತೆ ಹದಗೆಡುತ್ತ ಹೋಯಿತು. ಕೊನೆಗೆ ಇ
ಅನಾರೋಗ್ಯದಿಂದ ಬಾಬರ್ ಲೋಕಕ್ಕೆ ವಿದಾಯ ಕೋರಬೇಕಾಯಿತು ಎಂದು ಹೇಳಲಾಗುತ್ತಿ
ಈ ರೀತಿ ಬೇರೆಯವರ ಪ್ರಾಣ ರಕ್ಷಣೆಗಾಗಿ ತನ್ನನ್ನು ಆಪತ್ತಿಗೆ ದೂಡುತ್ತಿದ್ದ ರಾ
ಕೊನೆಗೆ ತನ್ನ ಪ್ರಿಯ ಪುತ್ರನ ಪ್ರಾಣ ರಕ್ಷಣೆಗಾಗಿ ಸಮರ್ಪಿತನಾದ.

ಬಾಬರನ ಅಂತ್ಯೋಪದೇಶ

ನಿಧನದ ವೇಳೆ ಬಾಬರನು ಹುಮಾಯೂನನಿಗೆ ಈ ರೀತಿ ಅಂತ್ಯೋಪದ
ಮಾಡಿದ:

ಆತ್ಮೀಯ ಪುತ್ರಾ! ಭಾರತದಲ್ಲಿ ವಿವಿಧ ಧರ್ಮಗಳ ಜನರು ವಾಸಿಸುತ್ತಿದ್ದಾ
ಅಲ್ಲಾಹನು ನಿನ್ನನ್ನು ಈ ದೇಶದ ರಾಜನಾಗಿ ಮಾಡಿರುವುದು ಆತನ ಮಹದುಪಕಾರವಾ
ನಿನ್ನ ದೊರೆತನದ ಅವಕಾಶ ಕಾಲದಲ್ಲಿ ಈ ಕೆಳಗಿನ ವಿಷಯಗಳ ಕಡೆಗೆ ಗಮನವಿ

1. ನಿನ್ನ ಹೃದಯದಲ್ಲಿ ಧಾರ್ಮಿಕ ಪಕ್ಷಪಾತಕ್ಕೆ ಅವಕಾಶ ನೀಡಬೇಡ. ಜ
ಧಾರ್ಮಿಕ ಭಾವನೆ ಮತ್ತು ಧಾರ್ಮಿಕ ಆಚರಣೆಗಳ ಕಡೆಗೆ ಗಮನವಿರಿಸುತ್ತ ವ
ಧರ್ಮದವರೊಂದಿಗೆ ನಿಷ್ಪಕ್ಷವಾಗಿ ನ್ಯಾಯಪಾಲಿಸು.

2. ವಿಶೇಷವಾಗಿ ಗೋವಧೆಯಿಂದ ದೂರವಿರು. ಏಕೆಂದರೆ ಈ ಮೂಲಕ ಜನರ ನಸ್ಸಿನಲ್ಲಿ ನಿನಗೆ ಸ್ಥಾನ ದೊರೆಯಬಹುದು. ಈ ರೀತಿ ಸೌಜನ್ಯ ಮತ್ತು ಕೃತಜ್ಞತೆಯ ಪಳಿಯಿಂದ ಅವರು ನಿನಗೆ ವಿಧೇಯರಾಗಬಹುದು.

3. ಯಾವುದೇ ಸಮುದಾಯದ ಆರಾಧನಾಲಯಗಳನ್ನು ನೀನು ಧ್ವಂಸಗೊಳಿಸಬಾರದು. ವಾಗಲೂ ಎಲ್ಲರೊಂದಿಗೂ ಪೂರ್ಣ ನ್ಯಾಯ ಪಾಲಿಸಬೇಕು. ರಾಜ ಮತ್ತು ಪ್ರಜೆಗಳ ಬಂಧವು ಸ್ನೇಹಪರವಾಗಿರಬೇಕು. ದೇಶದಲ್ಲಿ ಶಾಂತಿ ಸಮಾಧಾನವಿರಬೇಕು.

4. ಇಸ್ಲಾಮಿನ ಪ್ರಚಾರವು ಅಕ್ರಮ ಹಿಂಸೆಗಳ ಬದಲು ಸೌಜನ್ಯದ ಖಡ್ಗದಿಂದ ಹೆಚ್ಚು ಕ್ರಮ ರೀತಿಯಲ್ಲಿ ನಡೆಯಬಹುದು.

5. ಶಿಯಾ-ಸುನ್ನಿ ಭಿನ್ನಾಭಿಪ್ರಾಯಗಳನ್ನು ಸದಾ ನಿರ್ಲಕ್ಷಿಸುತ್ತಿರು. ಅನ್ಯಥಾ ಇದರಿಂದ ಸ್ಲಾಮ್ ದುರ್ಬಲವಾದೀತು.

6. ಪ್ರಜೆಗಳ ವಿವಿಧ ವಿಶೇಷತೆಗಳನ್ನು ವರ್ಷದ ವಿವಿಧ ಋತುಗಳೆಂದುಕೊಳ್ಳು. ಇದರಿಂದ ಳಿತವು ಅಸ್ವಸ್ಥತೆ ಮತ್ತು ನಿಶ್ಶಕ್ತಿಯಿಂದ ಸುರಕ್ಷಿತವಾಗಿರಬಹುದು.

ಈ ಅಂತ್ಯೋಪದೇಶದಿಂದ ಬಾಬರನ ಚಿಂತನೆಯ ರೀತಿ ಹೇಗಿತ್ತೆಂದು ಸ್ಪಷ್ಟವಾಗಿ ಯುತ್ತದೆ. ಸೋದರರೊಂದಿಗೆ ಸದ್ವರ್ತನೆ ತೋರುವಂತೆಯೂ ಆತ ತಾಕೀದು ಮಾಡಿದ್ದ.

ಚಿತ್ರ ಘಟನೆ

ಇಂದಿನಿಂದ ಸುಮಾರು ನಾಲ್ನೂರು ವರ್ಷ ಹಿಂದಿನ ಘಟನೆ. ಬೆಳಗ್ಗಿನ ಸಮಯ. ಹಾರ ಮುಗಿಸಿ ಜನರು ತಮ್ಮ ಕೆಲಸಗಳಲ್ಲಿ ತೊಡಗಿಕೊಂಡಿದ್ದರು. ಆಗ್ರಾದ ಮಹಲ್ ಬಳಿಯ ರಸ್ತೆಯಲ್ಲಿ ಝಾಡಮಾಲಿ ಮಹಿಳೆಯೊಬ್ಬಳು ಮಡಿಲಲ್ಲಿ ಮಗುವನ್ನಿರಿಸಿ ಗುಡಿಸುತ್ತಿದ್ದಳು. ರಸ್ತೆ ಬದಿಯಲ್ಲಿ ಶಸ್ತ್ರಧಾರಿ ರಜಪೂತನೊಬ್ಬ ಗಸ್ತು ತಿರುಗುತ್ತಿದ್ದ. ತ್ತವದಲ್ಲಿ ಆತ ಆ ಕಾಲದ ಅರಸನ ಮೇಲೆ ದಾಳಿ ನಡೆಸಲು ಹೊಂಚು ಹಾಕುತ್ತಿದ್ದ. ದರೆ ಈ ಅರಸನೊಂದಿಗಿನ ಯುದ್ಧದಲ್ಲಿ ಆತನ ತಂದೆ ಮರಣವನ್ನಪ್ಪಿದ್ದ. ಅದರೊಂದಿಗೆ ನ ರಾಜ್ಯವೂ ಮುಟ್ಟುಗೋಲು ಹಾಕಲ್ಪಟ್ಟಿತ್ತು. ಹಠಾತ್ತಾಗಿ ಮದಗಜವೊಂದು ಸಿಕೊಂಡಿತ್ತು. ಆನೆಯ ಭೀತಿಯಿಂದ ದಾರಿಹೋಕರು ಅಲ್ಲಲ್ಲಿ ಅಡಗಿಕೊಳ್ಳತೊಡಗಿದರು. ರಲ್ಲೇ ಆನೆಯು ಝಾಡಮಾಲಿಯ ಕಡೆಗೆ ನುಗ್ಗಿತು. ಮಮತಾಮಯಿ ಬಡಪಾಯಿ ಡಮಾಲಿ ತೀರಾ ಗಾಬರಿಗೊಂಡಳು. ಅವಳಿಗೆ ತನಗಿಂತ ಮಗುವಿನ ಚಿಂತೆ ಕಾಡಿತು. ಳ ಬಾಯಿಯಿಂದ ತನ್ನಷ್ಟಕ್ಕೆ ದುಃಖ ಮಿಶ್ರಿತ ಬೊಬ್ಬೆಯೊಂದು ಹರಡಿತು, 'ಅಯ್ಯೋ ಮಗು! ನನ್ನ ಮಗುವನ್ನು ರಕ್ಷಿಸುವವರು ಯಾರಾದರೂ ಇದ್ದಾರೆಯೇ?'

ನೊಂದ ಮಾನವತೆಯ ಈ ಕೂಗು ರಜಪೂತ ಯುವಕನನ್ನು ಪ್ರಭಾವಿತಗೊಳಿಸಿತು ಆದರೆ ಅಸ್ಪೃಶ್ಯತೆಯ ಪೊಳ್ಳು ಅಂತರವು ಅವನ ಅಂತರಾಳದ ಧ್ವನಿಯನ್ನು ಗಿಸಿತು. ಆದ್ದರಿಂದ 'ನಾನು ಉನ್ನತ ಜಾತಿಯ ರಜಪೂತ. ಝಾಡಮಾಲಿಯ ಮಗುವನ್ನು ಕಾಗಿ ಮುಟ್ಟಬೇಕು?' ಎಂದು ಯೋಚಿಸಿದ. ಹಾಗೆಯೇ ನಿಂತು ತಮಾಷೆ ನೋಡ ತಗಿದ. ಝಾಡಮಾಲಿಯ ಕೂಗು ಆಗಿನ ಅರಸನ ಕಿವಿಗೂ ಬಿತ್ತು. ಆತ ಗದೆ ಹಿಡಿದು

ಮಹಲಿನಿಂದ ಹೊರಹಾರಿದ. ಆನೆಯ ತಲೆಗೆ ಎಷ್ಟು ಬಲವಾಗಿ ಹೊಡೆದನೆಂದರೆ ಅದ ತಾಳಲಾರದೆ ಆನೆ ದಿಕ್ಕು ಬದಲಿಸಿ ಓಡಹತ್ತಿತು. ಅರಸ ಮಗುವನ್ನು ಮಡಿಲಲ್ಲಿ ಅರಮನೆಯ ಒಳ ನಡೆದ. ರಜಪೂತ ಯುವಕ ಅರಸನ ಶೌರ್ಯ ಮತ್ತು ಪ್ರ ಪೋಷಣೆಯನ್ನು ಕಂಡು ತನ್ನ ಉದ್ದೇಶದಿಂದ ಹಿಂದೆ ಸರಿದ. ಅರಸನ ಎದುರು ಶರಣ ಆತನನ್ನು ಕ್ಷಮಿಸಿದ ಅರಸ ತಂದೆಯ ರಾಜ್ಯವನ್ನು ಆತನಿಗೆ ಹಿಂದಿರುಗಿಸಿದ. ಆ ಭಾರತದಲ್ಲಿನ ಪ್ರಥಮ ಮೊಗಲ್ ದೊರೆ ಬಾಬರ್.

ಬಾಲ್ಯದಲ್ಲಿ ಆತ ಪ್ರಾಣ ಪಣಕ್ಕಿಟ್ಟು ನದಿಯಲ್ಲಿ ಮುಳುಗುತ್ತಿದ್ದ ತನ್ನ ಸೇ ಪುತ್ರನನ್ನು ರಕ್ಷಿಸಿದ್ದ. ಆ ಘಟನೆ ಹೀಗಿದೆ - ಬಾಬರ್ ಇನ್ನೂ ಮಗುವಾಗಿದ್ದ. ಆ ಪ್ರಾಮಾಣಿಕ ಸೇವಕ ಅವನನ್ನು ವಿಹಾರಕ್ಕಾಗಿ ನದಿಯ ಬಳಿಗೆ ಕರೆದೊಯ್ದಿದ್ದ. ಬಾ ನೊಂದಿಗೆ ಸೇವಕನ ಮಗುವಿತ್ತು. ಮಕ್ಕಳಿಬ್ಬರೂ ನದಿಯಲ್ಲಿ ಕಾಲು ಚಾಚಿ ಆಡುತ್ತಿದ್ದ ಅಕಸ್ಮಾತ್ ಸೇವಕನ ಮಗ ನದಿಗೆ ಜಾರಿದ. ಸೇವಕ ದೂರದಲ್ಲಿದ್ದ. ಬಾಬರ್ ಆತ ಕರೆದ. ಸ್ವಯಂ ನದಿಗೆ ಹಾರಿ ಮಗುವನ್ನು ನಿಯಂತ್ರಿಸ ತೊಡಗಿದ. ಅವನನ್ನು ರಕ್ಷಿ ಚಿಂತೆಯಲ್ಲಿ ಬಾಬರನಿಗೆ ತನ್ನ ಜೀವದ ಕಡೆಗೆ ಗಮನವೇ ಇರಲಿಲ್ಲ. ಬಹಳ ಪ್ರಯ ನಂತರ ಮಗುವನ್ನು ನೀರಿನಿಂದ ಹೊರತಂದ. ಮತ್ತೆ ಸೇವಕ ಸಹಕರಿಸಿದ. ಈ ಇಬ್ಬರೂ ಸಕ್ಷೇಮ ಹೊರಬಂದರು.

ಬಾಬರನ ಸದ್ಗುಣಗಳು

ಇಸ್ಲಾಮಿನ ಒರೆಗಲ್ಲಿನಲ್ಲಿ ಹಚ್ಚಿ ನೋಡಿದಾಗ ಬಾಬರನಿಗೆ ವಿಶಿಷ್ಟವಾದ ಯ ಸ್ಥಾನವೂ ಇಲ್ಲ. ಆದರೂ ಮುಸ್ಲಿಮ್ ದೊರೆಗಳಲ್ಲಿ ಆತ ಒಂದು ಉನ್ನತ ಸ್ಥಾನ ಹೊಂದಿದ್ದಾನೆ. ಆತ ಎಷ್ಟು ಶಕ್ತಿಶಾಲಿಯಾಗಿದ್ದನೆಂದರೆ ತನ್ನೆರಡು ಕಂಕುಳಲ್ಲಿ ಒಬ್ಬೊ ವ್ಯಕ್ತಿಯನ್ನು ಬಲವಾಗಿ ಹಿಡಿದು ಕೋಟೆಯ ಗೋಡೆಯ ಮೇಲೆ ಓಡಬಲ್ಲವನಾಗಿ ಬಾಲ್ಯದಲ್ಲೇ ಕಷ್ಟಗಳನ್ನು ಎದುರಿಸುತ್ತ ಎಷ್ಟು ಶೂರನಾಗಿ ಬಿಟ್ಟಿದ್ದನೆಂದರೆ ಮಹ ಯುದ್ಧಗಳಿಗೂ ಕೈ ಹಾಕುತ್ತಿದ್ದ. ತುಚ್ಛ ಸಾಮಾನು ಸರಂಜಾಮುಗಳ ಹೊರತಾಗಿಯೂ ವಿ ಪ್ರಾಪ್ತವಾಗುತ್ತಿತ್ತು. ಶ್ರಮಶೀಲತೆ ಎಷ್ಟಿತ್ತೆಂದರೆ ಒಂದೊಂದು ದಿನದಲ್ಲಿ ಕುದುರೆಯ ನೂರಾರು ಮೈಲು ಪ್ರಯಾಣ ನಡೆಸುತ್ತಿದ್ದ. ಆದರೂ ದಣಿಯುತ್ತಿರಲಿಲ್ಲ. ಎಷ್ಟೇ ಅಗ ನದಿ ಎದುರಾದರೂ ಸರಿ, ಅದನ್ನು ಈಜಿ ದಡ ಸೇರುವುದು ಅವನ ಎಡಗೈ ಆಟವಾಗಿತ್ತು.

ಶಕ್ತಿ ಮತ್ತು ಶೌರ್ಯದೊಂದಿಗೆಯೇ ಆತ ಮಹಾನ್ ವಿದ್ವಾಂಸ, ಕವಿ ಮ ಗ್ರಂಥಕರ್ತನಾಗಿದ್ದ. 'ತುರುಖಿ ಬಾಬರೀ' ತುರ್ಕಿ ಭಾಷೆಯಲ್ಲಿರುವ ಆತನ ಪ್ರಸಿದ್ಧ ಗ್ರ ಅನೇಕ ಭಾಷೆಗಳಿಗೆ ಅದು ಅನುವಾದಗೊಂಡಿದೆ. ಈಗಲೂ ಇದನ್ನು ಜನ ತುಂಬಾ ಆಸಕ್ತಿಯಿ ಓದುತ್ತಾರೆ. ಈ ಗ್ರಂಥದಲ್ಲಿ ಆತ ತನ್ನ ಆತ್ಮಕಥನವನ್ನು ತುಂಬಾ ಆಕರ್ಷಕ ಶೈಲಿಯ ಬರೆದಿದ್ದಾನೆ.

ಬಾಬರ್ ಯುದ್ಧ ಪ್ರಿಯ ವೀರ ಮಾತ್ರವಾಗಿರಲಿಲ್ಲ. ಬದಲಾಗಿ ತನ್ನೊಳಗೆ ಒಂದು ಾನುಭೂತಿಯ ಮನಸ್ಸನ್ನೂ ಹೊಂದಿದ್ದ. ತನ್ನ ಸಂಬಂಧಿಕರು ಮತ್ತು ನಿಕಟ ಬಂಧುಗಳ ್ಗೆ ಹಿತಚಿಂತನೆ ನೈಸರ್ಗಿಕ ಸಂಗತಿಯೇ. ಆದರೆ ಆತ ಬೇರೆಯವರ ಪ್ರಾಣರಕ್ಷಣೆಗಾಗಿ ಸಂಕೋಚವಾಗಿ ತನ್ನ ಪ್ರಾಣವನ್ನೇ ಪಣಕ್ಕಿಡುತ್ತಿದ್ದ.

ಆತ ಸುಂದರ ಬರವಣಿಗೆಯಲ್ಲೂ ಪಾಂಡಿತ್ಯ ಹೊಂದಿದ್ದ. ಸುಂದರ ಲಿಪಿಯ ಮೂಲಕ ್‌ಆನಿನ ಕೆಲವು ಕೈಬರಹ ಪ್ರತಿಗಳನ್ನು ಮಾಡಿ ಮಕ್ಕಾಕ್ಕೆ ಕಳಿಸಿದ್ದ. ಕನ್ವಾ ಯುದ್ಧಕ್ಕೆ ದಲಂತು ಅವನ ವಿಶ್ವಾಸ ಕರ್ಮಗಳಲ್ಲಿ ಬಹಳಷ್ಟು ದೌರ್ಬಲ್ಯಗಳು ಕಂಡುಬರುತ್ತಿದ್ದುವು. ರೆ ಅಂದು ಸನ್ಮನಸ್ಸಿನಿಂದ ಮಾಡಿದ ಪಶ್ಚಾತ್ತಾಪದಿಂದಾಗಿ ಮಿಕ್ಕುಳಿದ ಜೀವನದಲ್ಲಿ ಬಹಳ ಟ್ಟಿಗೆ ದೌರ್ಬಲ್ಯಗಳಿಂದ ವಿರಹಿತನಾಗಿದ್ದ. ನಮಾಝ್, ಉಪವಾಸಗಳನ್ನು ಸರಿಯಾಗಿ ರ್ವಹಿಸುತ್ತಿದ್ದ.

ಭಾರತದಲ್ಲಿ ಆತ ಸ್ಥಿರವಾಸ ಹೂಡಿದ್ದು ನಿಜ. ಆದರೆ ಇಲ್ಲಿನ ಪ್ರಕೃತಿ, ಜನಜೀವನ ು, ಗುಣನಡತೆ ಮತ್ತು ಹವಾಗುಣ ಇತ್ಯಾದಿಗಳನ್ನು ಯಾವಾಗಲೂ ದೂರುತ್ತಿದ್ದ. ಆತನ ೇರ ಭಾರತದಲ್ಲಿದ್ದರೂ ಮನಸ್ಸು ಮಾತ್ರ ಕೊನೆಯುಸಿರಿನ ವರೆಗೂ ತನ್ನ ದೇಶದಲ್ಲಿತ್ತು. ನಾನಂತರ ಆತನ ಉಯಿಲಿನಂತೆ ಮೃತದೇಹವನ್ನು ಕಾಬೂಲ್‌ಗೆ ಕಳಿಸಲಾಯಿತು. ಅಲ್ಲಿ ರವ ಮರ್ಯಾದೆಯೊಂದಿಗೆ ಆತನನ್ನು ದಫನ ಮಾಡಲಾಯಿತು.

ಬರನ ನಂತರ

ಭಾರತದಲ್ಲಿನ ಬಾಬರನ ನಾಲ್ಕು ವರ್ಷಗಳು ಕೇವಲ ಯುದ್ಧಗಳಲ್ಲೇ ಕಳೆದು ೋಯಿತು. ಆತ ತನ್ನೆರಡು ದೊಡ್ಡ ಶತ್ರುಗಳಾದ ಲೋದಿ ಮತ್ತು ರಜಪೂತರನ್ನು ೋಲಿಸಿದನಾದರೂ ಈ ಯಶಸ್ಸಿನಲ್ಲಿ ಸ್ವತಃ ಶತ್ರುಗಳ ಆಂತರಿಕ ದೌರ್ಬಲ್ಯಗಳು ಮತ್ತು ಫಘಾನ್ ಸರದಾರರ ನಿರ್ಲಕ್ಷತೆಯು ಪ್ರಮುಖ ಪಾತ್ರ ವಹಿಸಿತ್ತು. ಅಧಿಕಾರ ಕಳಕೊಂಡ ತರ ಅಫಘಾನರ ಕಣ್ತೆರೆಯಿತು. ಅವರು ದೆಹಲಿಯಿಂದ ದೂರದ ಗುಜರಾತ್ ಮತ್ತು ಾರ ಇತ್ಯಾದಿಗಳಲ್ಲಿ ಆಶ್ರಯ ಪಡೆದು ಮೊಗಲರನ್ನು ಹೊರದಬ್ಬುವ ಸಿದ್ಧತೆ ಸತೊಡಗಿದರು. ಬಾಬರನಿಗೆ ಇನ್ನೂ ಅನೇಕ ವೈರಿಗಳು ಉಳಿದಿದ್ದರು. ಆದರೆ ಆತನೇ ್ಲವಾದ.

ಅವನ ನಂತರ ಆತನ ಯುವಪುತ್ರ ಹುಮಾಯೂನ್ ಸಿಂಹಾಸನಾರೂಢನಾದ. ಶದೆಲ್ಲೆಡೆ ಗೊಂದಲದ ವಾತಾವರಣ. ನಾಲ್ದೆಸೆಯಲ್ಲಿ ಶತ್ರುಗಳ ಹೊಂಚು. ಹುಮಾಯೂನ್ ಾವತ್ತಮೂರು ವರ್ಷ ಪ್ರಾಯದ ಅನನುಭವಿಯಾಗಿದ್ದ. ಆದ್ದರಿಂದ ಆತನಿಗೆ ಅಧಿಕಾರ ಟ್ಟದಗೆಯ ಮುಳ್ಳಿನ ಹಾಸಿಗೆಯಾಗಿ ಮಾರ್ಪಟ್ಟಿತು. ಶತ್ರುಗಳಂತು ವೈರಿಗಳೇ. ಆದರೆ ಮಾಯೂನನ ಸೋದರರೂ ಬೇರೆ ತಲೆನೋವಾಗಿ ಪರಿಣಮಿಸಿದ್ದರು.

ಹುಮಾಯೂನನ ಓರ್ವ ಸೋದರ ಕಾಮ್ರಾನ್. ಬಾಬರ್ ಆತನನ್ನು ಕಾಬೂಲ್ ತ್ತು ಕಂದಹಾರ್‌ನ ಅಧಿಪತಿಯಾಗಿ ನೇಮಿಸಿದ್ದ. ಹುಮಾಯೂನ್ ಸಿಂಹಾಸನವನ್ನೇರುತ್ತಲೇ

ಆತ ಸೈನ್ಯ ಕಟ್ಟಿಕೊಂಡು ಅಭಿನಂದಿಸುವ ನೆಪದಲ್ಲಿ ಬಂದ. ಮೋಸದಿಂದ ಪಂಜಾಬ
ಸ್ವಾಧೀನಪಡಿಸಿದ. ಹುಮಾಯೂನನು ತಂದೆಯ ಉಪದೇಶವನ್ನು ಸ್ಮರಿಸಿ ವಿನಾಯಿ
ತೋರಿದ. ಯುದ್ಧ ಮಾಡುವ ಬದಲು ಪಂಜಾಬ್‌ನ ಮೇಲಿನ ಆತನ ಸ್ವಾಧೀನತೆಯ
ಒಪ್ಪಿಕೊಂಡ. ಇತ್ತ ಗುಜರಾತ್‌ನ ರಾಜ ಬಹಾದೂರ್ ಷಾಹ, ಲೋದಿ ಸರದಾರರು ಮ
ಕೆಲವು ಮೊಗಲ್ ಬಂಡಾಯಗಾರರಿಗೆ ಆಶ್ರಯ ನೀಡಿದ್ದ. ಹುಮಾಯೂನನ ವಿರು
ಅವರನ್ನು ಬೆಂಬಲಿಸುತ್ತಿದ್ದ. ಬಾಬರನನ್ನು ದಾಳಿಗೆ ಪ್ರೇರೇಪಿಸಿದ್ದ ಇಬ್‌ರಾಹೀಮ
ಲೋದಿಯ ಚಿಕ್ಕಪ್ಪನೂ ಈಗ ಬಹಾದೂರ್ ಷಾಹನ ನೆರವಿನಿಂದ ಮೊಗಲರ
ಒದ್ದೋಡಿಸಲು ಪ್ರಯತ್ನಿಸುತ್ತಿದ್ದ. ಎಲ್ಲಿಯವರೆಗೆಂದರೆ ಆತನ ಪುತ್ರ ತಾತಾರ್‌ಖಾ
ಒಂದು ಸೇನೆಯೊಂದಿಗೆ ಆಗ್ರಾದ ಬಳಿಯ ಬಯಾನಾದ ವರೆಗೆ ನುಗ್ಗಿ ಬಂದಿ
ಹುಮಾಯೂನ್ ಪ್ರಥಮವಾಗಿ ಈ ಶತ್ರುಗಳನ್ನೇ ಎದುರಿಸುವ ದೃಢ ನಿಶ್ಚಯ ಮಾಡಿ

ಆ ವರೆಗೆ ಬಹಾದೂರ್ ಷಾಹ್ ಮಾಳ್ವ ಮತ್ತು ಚಿತ್ತೂರನ್ನು ವಶಪಡಿಸಿ ತ
ಸಾಮ್ರಾಜ್ಯವನ್ನು ಬಹಳ ವಿಸ್ತರಿಸಿದ್ದ. ಹುಮಾಯೂನನು ಬಹಾದೂರ್ ಷಾಹನ ಮೇ
ದಾಳಿ ನಡೆಸಿದ. ಮಿಂಡಸೋರ್‌ನ ಬಳಿ ಘರ್ಷಣೆ ನಡೆಯಿತು. ಬಹಾದೂರ್ ಷಾಹ್ ಭಾ
ಸಿದ್ಧತೆ ನಡೆಸಿದ್ದ. ಆದರೆ ಮೊಗಲರು ರಸ್ತೆ ತಡೆ ನಡೆಸಿ ದವಸಧಾನ್ಯಗಳನ್ನು ತಡೆದ
ಗುಜರಾತ್‌ನ ಹಸಿವು ಬಾಯಾರಿಕೆಗೆ ಬಲಿಯಾದ ಸೈನ್ಯವು ಕ್ರಮೇಣ ಚದುರತೊಡಗಿ
ಬಹಾದೂರ್ ಷಾಹ್ ಎದುರಿಸಲಾಗದೆ ರಾತ್ರಿಯ ಕಾರ್ಗತ್ತಲಲ್ಲಿ ಮರೆಯಾ
ಹುಮಾಯೂನ್ ಬೆನ್ನಟ್ಟಿದ. ಮಾಳ್ವಾದ ಮೇಲೆ ಹತೋಟಿ ಸಾಧಿಸಿದ ನಂತರ ಇ
ಗುಜರಾತನ್ನು ವಶಪಡಿಸಿಕೊಂಡ. ಬಹಾದೂರ್ ಷಾಹ್ ಓಡಿ ಹೋಗಿ ದಿಯೂ ದ್ವೀಪದ
ಆಶ್ರಯ ಪಡೆದ. ಈ ದ್ವೀಪವನ್ನು ಆತ ಪೋರ್ಚುಗೀಸ್ ವ್ಯಾಪಾರಿಗಳಿಗೆ ನೀಡಿ
ಪೋರ್ಚುಗೀಸರು ಆಶ್ರಯ ನೀಡಿ ಅನಂತರ ಮೋಸದಿಂದ ಅವನನ್ನು ಕೊಲೆಗೈದರು.

ಹುಮಾಯೂನ್‌ಗೆ ಈ ಯುದ್ಧದಲ್ಲಿ ಹೆಚ್ಚು ಕಡಿಮೆ ಐದು ವರ್ಷ ತಗುಲಿ
ಇಷ್ಟೊಂದು ಅವಧಿಯ ತನಕ ನಿರ್ಲಕ್ಷಿತನಾಗಿರುವುದನ್ನು ಕಂಡು ಬಿಹಾರದ ಅಫಘಾ
ಶೇರ್‌ಷಾಹನು ಬಿಹಾರ ಮತ್ತು ಬಂಗಾಳಗಳನ್ನು ಸ್ವಾಧೀನಪಡಿಸಿ ಮೊಗಲರ
ಒದ್ದೋಡಿಸುವ ಯೋಜನೆ ರೂಪಿಸತೊಡಗಿದ. ಹುಮಾಯೂನನು ಗುಜರಾತನ್ನು ತ
ದ್ವಿತೀಯ ಸೋದರ ಅಸ್ಕರಿಯ ವಶಕ್ಕೊಪ್ಪಿಸಿದ. ಸ್ವತಃ ಒಂದು ಭಾರೀ ಸೇನೆಯೊಂ
ಬಂಗಾಳದ ಮೇಲೆ ಏರಿಹೋದ. ಶೇರ್‌ಷಾಹ್ ಹಿಂದೆ ಸರಿದ. ಮೊಗಲ್ ಸೇ
ಅಡೆತಡೆಯಿಲ್ಲದೆ ಬಂಗಾಳದ ರಾಜಧಾನಿ ಗೋಡನ್ನು ವಶಪಡಿಸಿಕೊಂಡಿತು. ವಿಜಯ
ಸಂಭ್ರಮದಲ್ಲಿ ಭೋಗವಿಲಾಸದ ಮೊರೆಹೊಕ್ಕಿತು. ಮತ್ತೆ ಹಿಂತಿರುಗಿದ ಶೇರ್‌ಷಾ
ಮಾರ್ಗದಲ್ಲಿನ ಎಲ್ಲ ಕೋಟೆಗಳನ್ನು ವಶಪಡಿಸಿಕೊಂಡ. ಅರಸನ ಸೈನ್ಯ ಬರುವುದ
ಹೊಂಚು ಹಾಕಿ ಕುಳಿತ. ಮರಳುವ ಸಂದರ್ಭದಲ್ಲಿ ಕ್ರಿ.ಶ. 1539ರಲ್ಲಿ ಚೌಸಾ ಎಂ
ಸ್ಥಳದಲ್ಲಿ ಮೊಗಲರನ್ನು ಸುತ್ತುವರಿದು ಭಾರೀ ಸೋಲಿನ ರುಚಿ ಉಣಿಸಿದ. ಹುಮಾಯೂ
ಪ್ರಾಣ ರಕ್ಷಿಸಿ ಓಡಿದ. ಅವನ ಗೈರುಹಾಜರಿಯಲ್ಲಿ ಅಸ್ಕರಿಯು ತನ್ನ ಅಯೋಗ್ಯತೆಯಿಂದ

ಜರಾತನ್ನು ಕಳೆದುಕೊಂಡಿದ್ದ. ಇತ್ತ ದೋಆಬ್‌ನ ಅರಸನಾಗಿದ್ದ ಆತನ ತೃತೀಯ ೀದರ ಹಿಂದಾಲನೂ ವಿಶ್ವಾಸದ್ರೋಹವೆಸಗಿದ. ಹುಮಾಯೂನ್ ಆಚೀಚೆ ಅಲೆದಾಡ ಡಗಿದ. ಎಲ್ಲಿಯೂ ಆಶ್ರಯ ಸಿಗಲಿಲ್ಲ. ಕಟ್ಟಕಡೆಗೆ ಓಡಿ ಹೋಗಿ ಇರಾನ್ ಸೇರಿದ. ರತ ಶೇರ್‌ಷಾಹನ ಸ್ವಾಧೀನವಾಯಿತು.

ನ್ಯಾಸ:

1. ಭಾರತದಲ್ಲಿ ಮೊಗಲ್ ಸಾಮ್ರಾಜ್ಯದ ಸ್ಥಾಪಕ ಯಾರು? ಭಾರತವನ್ನು ಆತ ಯಾವ ರೀತಿ ಸ್ವಾಧೀನಪಡಿಸಿದ?
2. ಬಾಬರನ ಆರಂಭಿಕ ಬದುಕು ಯಾವ ರೀತಿ ಸಾಗಿತು? ಆತ ಕಾಬೂಲನ್ನು ಹೇಗೆ ವಶಪಡಿಸಿಕೊಂಡ?
3. ಕನ್ವಾ ಯುದ್ಧದ ಬಗ್ಗೆ ಒಂದು ಪ್ರಬಂಧ ಬರೆಯಿರಿ. ಈ ಕೆಳಗಿನ ವಿಷಯಗಳು ಗಮನದಲ್ಲಿರಲಿ:
   ಪ್ರಾಯ, ಉಭಯ ಬಣಗಳು, ಕಾರಣಗಳು, ಪರಿಸ್ಥಿತಿ, ಫಲಿತಾಂಶ.
4. ರಜಪೂತರ ಶಕ್ತಿ ಮುರಿಯಲಿಕ್ಕಾಗಿ ಬಾಬರ್ ಏನೆಲ್ಲ ಮಾಡಿದ?
5. ಅಫಘಾನರೊಂದಿಗಿನ ಆತನ ಹೆಚ್ಚಿನ ಸಂಘರ್ಷವನ್ನು ವಿವರಿಸಿರಿ.
6. ಬಾಬರನ ಮರಣ ಯಾವ ರೀತಿಯಲ್ಲಾಯಿತು?
7. ಮರಣದ ವೇಳೆ ಬಾಬರ್ ಯಾವ ಅಂತ್ಯೋಪದೇಶ ಮಾಡಿದ್ದ? ಬಾಬರನ ಚಾರಿತ್ರ್ಯದ ಮೇಲೆ ಇದು ಯಾವ ರೀತಿಯ ಬೆಳಕು ಚೆಲ್ಲುತ್ತದೆ?
8. ಬೇರೆಯವರ ಪ್ರಾಣರಕ್ಷಣೆಗಾಗಿ ಬಾಬರನು ತನ್ನನ್ನು ನಿಸ್ಸಂಕೋಚವಾಗಿ ಪ್ರಾಣಾಪಾಯಕ್ಕೆ ಒಡ್ಡುತ್ತಿದ್ದ ಘಟನೆಗಳ ಮೂಲಕ ಈ ವಾಸ್ತವಿಕತೆಗೆ ಪುರಾವೆ ಒದಗಿಸಿರಿ.
9. ಬಾಬರನ ಚಾರಿತ್ರ್ಯ ಮತ್ತು ಮಹತ್ಕಾರ್ಯಗಳ ಮೇಲೆ ಬೆಳಕು ಚೆಲ್ಲಿರಿ.
10. ಬಾಬರನ ನಂತರ ಏನಾಯಿತು? ತನ್ನ ಸೋದರರೊಂದಿಗೆ ಹುಮಾಯೂನನ ವರ್ತನೆ ಹೇಗಿತ್ತು? ಸಹೋದರರು ಆತನೊಂದಿಗೆ ಯಾವ ರೀತಿ ವ್ಯವಹರಿಸಿದರು?
11. ಹುಮಾಯೂನ್ ಮತ್ತು ಶೇರ್‌ಷಾಹನ ನಡುವಿನ ಸಂಘರ್ಷವನ್ನು ವಿವರಿಸಿರಿ.
12. ಈ ಕೆಳಗಿನ ಇಸವಿಗಳು ಯಾಕೆ ಪ್ರಸಿದ್ಧವಾಗಿವೆ?
    ಕ್ರಿ.ಶ. 1423, ಕ್ರಿ.ಶ. 1504, ಕ್ರಿ.ಶ. 1530, ಕ್ರಿ.ಶ. 1536, ಕ್ರಿ.ಶ. 1540.
13. ಮುಂಚೆ ಬಂದ ಮೊಗಲರಿಗಿಂತ ಭಿನ್ನವಾಗಿ ಬಾಬರ್ ಭಾರತದಲ್ಲಿ ವಾಸ ಹೂಡಲೆಂದು ದಾಳಿ ನಡೆಸಿದ್ದ. ವಿವರಣೆ ನೀಡಿರಿ.

●●

ಅಧ್ಯಾಯ-2

ಶೇರ್‌ಷಾಹ

(ಕ್ರಿ.ಶ. 1486-15

ಬಾಬರನ ಗೌರವಾರ್ಥ ಔತಣಕೂಟವೊಂದು ಏರ್ಪಾಡಾಗಿತ್ತು. ಊಟದ ಹ ಹಾಸಲ್ಪಟ್ಟಿತ್ತು. ಊಟ ಬಡಿಸುವವರಲ್ಲಿ ಒಬ್ಬ ಅಫಘಾನ್ ಯುವಕನೂ ಇದ್ದ. ಹ ಕತ್ತರಿಸಲು ಬಾಬರನಿಗೆ ಚೂರಿಯ ಅಗತ್ಯವಿತ್ತು. ವೀರ ಅಫಘಾನನು ತಕ್ಷಣ ಒರೆಯಿ ಖಡ್ಗ ಹೊರತೆಗೆದ. ಅದರಿಂದ ಹಣ್ಣು ಕತ್ತರಿಸಿ ಸಮರ್ಪಿಸಿದ. ಬಾಬರನಂತು ಅಫಘಾ ಮತ್ತು ರಜಪೂತರನ್ನು ಮಣ್ಣು ಮುಕ್ಕಿಸಿ ಬಿಟ್ಟಿದ್ದ. ಅಂತಹವನ ಎದುರು ಅಫಘ ಸೈನಿಕ ಪುತ್ರನೊಬ್ಬ ಈ ರೀತಿ ನಿರ್ಭಯನಾಗಿ ಒರೆಯಿಂದ ಖಡ್ಗ ಎತ್ತಿಕೊಳ್ಳುವನೆಂದು ಊಹಿಸಲೂ ಸಾಧ್ಯವಿರಲಿಲ್ಲ. ಬಾಬರ್ ತನ್ನಷ್ಟಕ್ಕೆ ನುಡಿದ, 'ನಾನು ಈ ಯುವಕ ಬಂಡಾಯದ ವಾಸನೆಯನ್ನು ಕಾಣುತ್ತಿದ್ದೇನೆ. ಈತ ತನ್ನ ಪ್ರಸಕ್ತ ಸ್ಥಿತಿಯಲ್ಲೇ ಎಂ ಸಂತೃಪ್ತನಾಗಿರಲಾರ!' ಇತಿಹಾಸ ಸಾಕ್ಷಿಯಾಗಿದೆ; ಬಾಬರನ ಈ ಸಂದೇಹ ನಿಜವಾಯಿ ಬಾಬರನ ನಿಧನಾನಂತರ ಕೆಲವೇ ವರ್ಷಗಳ ಬಳಿಕ ಈ ಯುವ ಸೈನಿಕ ಶೇರ್‌ಷಾ ಹೆಸರಲ್ಲಿ ಭಾರತ ಸಾಮ್ರಾಜ್ಯದ ಒಡೆಯನಾದ. ಆತ ನಡೆಸಿದ ಪ್ರಮುಖ ಕಾರ್ಯ ಸಾಟಿಯಾದ ಇನ್ನೊಂದು ಉದಾಹರಣೆ ಭಾರತದ ಇತಿಹಾಸದಲ್ಲಿ ಕಂಡು ಬರುವುದಿ

ಆರಂಭಿಕ ಸ್ಥಿತಿ

ಶೇರ್‌ಷಾಹನ ನಿಜನಾಮ ಫರೀದ್. ಆತ ಘೋರಿ ಸುಲ್ತಾನರ ಕೊಂಬೆಯ ಸೂರ್ ಗೋತ್ರದೊಂದಿಗೆ ಸಂಬಂಧ ಹೊಂದಿದ್ದ. ಆತನ ತಾತ ಕುದುರೆಯ ವ್ಯಾ ಮಾಡುತ್ತ ಭಾರತಕ್ಕೆ ಬಂದಿದ್ದರು. ಆದರೆ ಫರೀದ್‌ನ ತಂದೆ ಹಸನ್‌ಖಾನ್ ವ್ಯಾ ತೊರೆದು ಸಿಪಾಯಿ ಕೆಲಸ ಮಾಡತೊಡಗಿದ. ತನ್ನ ಸೈನಿಕ ಸೇವೆಯ ಪ್ರತಿಫಲ ಸಹಸ್ರಾಮ್‌ನ ಪುಟ್ಟ ಜಾಗೀರಿನ ಒಡೆಯನಾದ. ಫರೀದ್‌ಖಾನ್ ಅಲ್ಲೇ ಕ್ರಿ.ಶ. 1486 ಜನಿಸಿದ. ಕುಟುಂಬದ ಈ ಕಣ್ಮಣಿ ಬಾಲ್ಯದಿಂದಲೇ ತುಂಬಾ ಬುದ್ಧಿವಂತನಾಗಿದ್ದ. ಮೂರ್ಖ ತಂದೆ ಈ ವಜ್ರದ ಬೆಲೆಯನ್ನು ಸರಿಯಾಗಿ ಅರಿಯಲಿಲ್ಲ. ಹಸನ್‌ಖ ಭಾರತೀಯ ದಾಸಿಯೊಬ್ಬಳನ್ನು ವಿವಾಹವಾದ. ಅವಳ ಮೇಲೆ ಎಷ್ಟು ಮೋಹಿತನಾದನೆ ಫರೀದ್ ಖಾನ್ ಮತ್ತು ಆತನ ತಾಯಿಯೊಂದಿಗೆ ನಿರ್ದಯವಾಗಿ ವರ್ತಿಸತೊಡ

:ದ್‌ಖಾನ್ ತನ್ನ ಮಲತಾಯಿಯ ಕೆಟ್ಟ ನಡವಳಿಕೆ ಮತ್ತು ತನ್ನ ತಂದೆಯ ಘೋರ :ಕ್ಷ್ಯದಿಂದ ಜಿಗುಪ್ಸೆಗೊಂಡಿದ್ದ. ಅವನ ಬದುಕು ದುರ್ಭರವಾಗಿತ್ತು. ಆತನ ಪಾಲನೆ-ಷಣೆ ಮತ್ತು ಶಿಕ್ಷಣ ತರಬೇತಿಯ ಸೂಕ್ತ ವ್ಯವಸ್ಥೆಯಿರಲಿಲ್ಲ.

ಬುದ್ಧಿವಂತ ಪುತ್ರ ತನ್ನ ಒಳಿತು ಕೆಡುಕುಗಳನ್ನು ಅರಿಯತೊಡಗಿದ್ದ. ತನ್ನ ಬದುಕಿನ ಅಮೂಲ್ಯ ಕ್ಷಣಗಳನ್ನು ವ್ಯರ್ಥಗೊಳಿಸುವುದು ಆತನಿಗೆ ಇಷ್ಟವಾಗಲಿಲ್ಲ. ಅದೃಷ್ಟ :ಕ್ಷಿಸಲೆಂದು ಮನೆಯಿಂದ ಹೊರನಡೆದ. ಆ ಕಾಲದಲ್ಲಿ ಜೋನ್‌ಪುರ ಶಿಕ್ಷಣ ಬೇತಿಯ ಬಹು ದೊಡ್ಡ ಕೇಂದ್ರವಾಗಿತ್ತು. ಒಬ್ಬರಿಗಿಂತ ಒಬ್ಬರು ಅರ್ಹ ವಿದ್ವಾಂಸರು ರಿಗೆ ಪ್ರಯೋಜನ ದೊರಕಿಸಿ ಕೊಡುವುದಕ್ಕಾಗಿ ಶ್ರಮಿಸುತ್ತಿದ್ದರು. ಫರೀದ್ ಖಾನ್ ಹೋಗಿ ಜೋನ್‌ಪುರ ತಲುಪಿದ. ಧಾರ್ಮಿಕ ಪಾಠಶಾಲೆಯ ಬಡ ಮಕ್ಕಳಂತೆ ತರಬೇತಿ ಪತೊಡಗಿದ. ಬುದ್ಧಿವಂತ ಮತ್ತು ಪರಿಶ್ರಮಿಯಾಗಿದ್ದರಿಂದ ಕೆಲವೇ ದಿನಗಳಲ್ಲಿ 'ಆನ್, ಹದೀಸ್ ಮತ್ತು ವಿವಿಧ ಜ್ಞಾನಕಲೆಗಳಲ್ಲಿ ಪರಿಣತಿ ಹೊಂದಿದ. ಇತಿಹಾಸ ಂದಿಗೆ ಆತನಿಗೆ ಅಮಿತ ಒಲವಿತ್ತು. ಜನಾಂಗಗಳ ಉತ್ಥಾನ-ಪತನ ಮತ್ತು ಸಾಮ್ರಾಜ್ಯಗಳ ನೆ-ನಾಶಗಳ ನೈಸರ್ಗಿಕ ನಿಯಮಗಳ ಗಾಢ ಅಧ್ಯಯನ ಮಾಡಿದ್ದ. ಆತನ ಬುದ್ಧಿವಂತಿಕೆ ಸ್ತ ಹೊಣೆಗಾರಿಕೆಯ ಪ್ರಜ್ಞೆಯನ್ನು ಕಂಡ ಜೋನ್‌ಪುರದ ಆಡಳಿತಾಧಿಕಾರಿಯು ತನ್ನಲ್ಲಿ ಕನಾಗಿ ಇರಿಸಿದ. ಹತ್ತು ವರ್ಷ ನಂತರ ಆತನ ತಂದೆಯ ಕಣ್ತೆರೆಯಿತು. ಭಾರತೀಯ ಯ ವಂಚನೆಗೆ ಸಿಲುಕಿ ಆತ ತನ್ನ ಜಾಗೀರಿನ ವ್ಯವಸ್ಥೆಯನ್ನು ಕೆಡಿಸಿಬಿಟ್ಟಿದ್ದ. ಪರಿಸ್ಥಿತಿ ಾರಿದಾಗ ಜೋನ್‌ಪುರಕ್ಕೆ ಬಂದು ಪುತ್ರನ ಮನವೊಲಿಸಿ ಕರೆದ. ಜಾಗೀರಿನ ಪೂರ್ಣ ಸ್ಥೆಯನ್ನು ಆತನ ವಶಕ್ಕೊಪ್ಪಿಸಿದ.

ೀವನ:

ಆತನಿಗೆ ಈಗ ತನ್ನ ಯೋಗ್ಯ ಕೌಶಲ್ಯಗಳನ್ನು ತೋರಿಸುವ ಅವಕಾಶ ದೊರೆಯಿತು. ನ ಸದ್ವರ್ತನೆ ಮತ್ತು ಯೋಗ್ಯ ವ್ಯವಸ್ಥೆಯಿಂದಾಗಿ ಕೆಲವೇ ದಿನಗಳಲ್ಲಿ ಕೃಷಿಕರು ತಕ್ಕೆ ಬಂದರು. ಅನಂತರ ಸಣ್ಣದೊಂದು ಸೈನ್ಯವನ್ನು ಸಿದ್ಧಗೊಳಿಸಿದ. ವಿದ್ರೋಹಿ ಾನ್ದಾರರು ವಿಧೇಯರಾಗುವಂತೆ ವಿವಶಗೊಳಿಸಿದ. ಏಳೆಂಟು ವರ್ಷಗಳಲ್ಲಿ ಆತ ಆ ೀರಿನ ಎಷ್ಟು ಸೂಕ್ತ ವ್ಯವಸ್ಥೆ ಮಾಡಿದನೆಂದರೆ, ಜನರು ಸುಖ ಸಂತುಷ್ಟಿಯನ್ನು ರು. ಬೆಳೆ ಮತ್ತು ಆದಾಯ ಬಹಳ ಹೆಚ್ಚಿತು. ಶಾಂತಿ ನೆಮ್ಮದಿ ಯಥಾಸ್ಥಿತಿಗೆ ಳಿತು. ಈ ರೀತಿ ಬಹುಶಃ ಪ್ರಕೃತಿಯು ಫರೀದ್‌ಖಾನ್‌ಗೆ ಮುಂದೆ ಕೆಲವು ವರ್ಷಗಳ ರ ಭಾರತದ ಅರಸನ ನೆಲೆಯಲ್ಲಿ ನಿರ್ವಹಿಸಬೇಕಾದ ಹೊಣೆಗಾರಿಕೆಗೆ ಸಣ್ಣ ಪ್ರಮಾಣದಲ್ಲಿ ಬೇತಿಯ ಅವಕಾಶ ನೀಡಿತ್ತು. ಕೃತಜ್ಞದಾಸನು ಈ ಅವಕಾಶವನ್ನು ಸಂಪೂರ್ಣ ಪಯೋಗಿಸಿ ತನ್ನ ಸಾಮರ್ಥ್ಯಗಳನ್ನು ಪ್ರಕಟಪಡಿಸಿದುದರಲ್ಲಿ ಸಂದೇಹವಿಲ್ಲ.

ತಂದೆ ವೃದ್ಧರಾಗಿದ್ದರು. ಮಲ ಸೋದರರು ಫರೀದ್‌ಖಾನನ್ನು ಮತ್ತೆ ದೇಶ ರೆಯಲು ನಿರ್ಬಂಧಿಸಿದರು. ಪ್ರವಾದಿ ಯೂಸುಫರ(ಅ) ಸೋದರರಂತೆ ಈ ಜನರಂತು

ಸೋದರನ ಪಾಲಿಗೆ ಕೆಡುಕನ್ನು ಬಗೆದರು. ಆಸ್ತಿಯಿಂದ ವಂಚಿತಗೊಳಿಸ ಬಯಸಿದರು. ಬಾರಿ ಮನೆ ತೊರೆಯುವುದು ಫರೀದ್‌ನ ಪಾಲಿಗೆ ಉಜ್ವಲ ಭವಿಷ್ಯದ ಒ ಸೋಪಾನವಾಗಿ ಪರಿಣಮಿಸಿತು. ಆತ ದೆಹಲಿಯ ಕಡೆಗೆ ಹೊರಟ.

ಇಬ್‌ರಾಹೀಮ್ ಲೋದಿಯ ಕಾಲವಾಗಿತ್ತದು. ಇಬ್‌ರಾಹೀಮ್‌ನ ಕಠೋರ ಸ್ವಭ ಮತ್ತು ಸರದಾರರ ಅತೃಪ್ತಿಯಿಂದಾಗಿ ದೇಶದಲ್ಲಿ ಅರಾಜಕತೆ ವ್ಯಾಪಿಸಿತ್ತು. ಎ ಗಲಭೆಕೋರರು ತಲೆ ಎತ್ತಿದ್ದರು. ರಾಯಸೇನದ ದರೋಡೆಕೋರ ಪೂರ್ಣಮಲ್ಲ ಎಲ್ಲರ ಮೀರಿಸಿದ್ದ. ಆತ ಸುಲಿಗೆಗೈದು ಸಾವಿರಾರು ಕುಟುಂಬಗಳ ವಿನಾಶಕ್ಕೆ ಕಾರಣನಾಗಿ ಎರಡು ಸಾವಿರ ಹಿಂದೂ ಮತ್ತು ಮುಸ್ಲಿಮ್ ಮಹಿಳೆಯರನ್ನು ನರ್ತಕಿಯರನ್ನಾಗಿಸಿ ಮರ್ದನಗಳಿಂದ ಬೇಸತ್ತ ಸಂತ್ರಸ್ತ ಮಂದಿ ದೆಹಲಿಗೆ ಬಂದು ಅರಸನಲ್ಲಿ ದು ಸಲ್ಲಿಸುತ್ತಿದ್ದರು. ಆದರೆ ಅವರ ಫಿರ್ಯಾದು ಅರಣ್ಯ ರೋದನವಾಗಿ ಬಿಡುತ್ತಿದ್ದು ಇಬ್‌ರಾಹೀಮ್ ನಿರ್ಲಕ್ಷಿಸುತ್ತಿದ್ದ. ವಿಚಾರಣೆ ನಡೆಸುತ್ತಿರಲಿಲ್ಲ. ಈ ವೇದನಾ ದೃಶ್ಯವು ಶೇರ್‌ಷಾಹ್‌ನನ್ನು ಬಹಳ ಪ್ರಭಾವಿತಗೊಳಿಸಿತು. ಅವನ ಅಂತರಾಳದ ತನ್ನಷ್ಟಕ್ಕೆ ಧ್ವನಿ ಹೊರಡಿತು, 'ಒಂದು ವೇಳೆ ಅಲ್ಲಾಹನು ನನಗೆ ಶಕ್ತಿಯನ್ನು ದಯಪಾಲಿಸಿ ಈ ಮರ್ದಿತರ ಪ್ರತೀಕಾರವನ್ನು ಮರ್ದಕರಿಂದ ಪಡೆದೇ ತೀರುತ್ತೇನೆ.' ಆದರೆ ಯ ಸೈನಿಕನೊಬ್ಬ ಏಕಾಂಗಿಯಾಗಿ ಏನು ತಾನೆ ಮಾಡಲು ಸಾಧ್ಯ. ಅಲ್ಲಿಂದ ಹಿಂತಿರುಗಿ ಬಿಹಾ ಪ್ರಾಂತ್ಯಾಧಿಕಾರಿಯ ಬಳಿ ಕೆಲಸ ಮಾಡತೊಡಗಿದ. ಪರಿಸ್ಥಿತಿ ಅನುಕೂಲಕರವಾಗುವುದ ಕಾಯುತ್ತಿದ್ದ. ಅನಿರೀಕ್ಷಿತವಾಗಿ ಈ ನಡುವೆಯೇ ಇಬ್‌ರಾಹೀಮ್ ಲೋದಿ ಕೊಲೆಯ ದೆಹಲಿಯ ಗದ್ದುಗೆ ಬಾಬರ್‌ನ ವಶವಾಯಿತು.

ಬಾಬರನಿಗೆ ಕನ್ವಾ ಯುದ್ಧದಲ್ಲಾದ ಭಾರೀ ವಿಜಯ, ಆ ಸಂದರ್ಭದಲ್ಲಿ ಪಶ್ಚಾತ್ತಾಪ ಮತ್ತು ಮುಂದೆ ಪಾವನ ಬದುಕು ಸಾಗಿಸುವುದಾಗಿ ಮಾಡಿದ ನಿಶ್ಚ ಗಳೆಲ್ಲವೂ ಫರೀದ್‌ಖಾನ್‌ಗೆ ತಿಳಿಯಿತು. ಈಗ ಬಾಬರ್ ರಜಪೂತರ ಅಳಿದು ಶಕ್ತಿಯನ್ನು ಕೊನೆಗೊಳಿಸಲು ಚಂದ್ರಗಿರಿಯ ಮೇಲೆ ದಾಳಿ ನಡೆಸಲು ನಿರ್ಧರಿಸಿ ಫರೀದ್‌ಖಾನ್ ಮಹತ್ವಾಕಾಂಕ್ಷೆಗಳೊಂದಿಗೆ ಬಾಬರನ ಸೈನ್ಯದಲ್ಲಿ ಸೇರಿದ. ಇಲ್ಲಿ ಆ ಮೊಗಲರನ್ನು ಹತ್ತಿರದಿಂದ ಕಾಣುವ ಅವಕಾಶ ದೊರೆಯಿತು. ಮೊಗಲರ ಸ್ವೇ ಭೋಗಾಸಕ್ತಿ ಮತ್ತು ಇಸ್ಲಾಮೇತರ ಜೀವನ ಶೈಲಿಯು ಫರೀದ್‌ಖಾನನ್ನು ತ ಹತಾಶನನ್ನಾಗಿಸಿತು. ಇಂತಹ ದುರಾಚಾರಿ ವ್ಯಕ್ತಿಗಳ ಕೈಯಲ್ಲಿ ಅಲ್ಲಾಹನ ಈ ಭೂಮಿಯ ಯಾವುದೇ ಸತ್‌ಕ್ರಾಂತಿ ಬರುವ ಬಗ್ಗೆ ಆತನಿಗೆ ಕೊಂಚ ಭರವಸೆಯೂ ಇಲ್ಲದಾಯಿ ಮೊಗಲರ ಬಗ್ಗೆ ಬೇಸರ ಹುಟ್ಟಿತು. ಅವರನ್ನು ಒದ್ದೋಡಿಸಿ ಸ್ವಯಂ ಆಡಳಿತ ಚು ಹಿಡಿಯುವ ಸ್ಫೂರ್ತಿ ಸೃಷ್ಟಿಯಾಯಿತು. ಆಗ್ರಾದಿಂದ ಮರಳಿದ ಆತ ಬಿಹಾರ ತಲು ಬಿಹಾರದ ಆಡಳಿತಾಧಿಕಾರಿ ಮೆಹಮೂದ್ ಖಾನ್ ಲೋಹಾನಿ ಆತನನ್ನು ಹೃತ್ಪೂರ್ವಕ ಸ್ವಾಗತಿಸಿದ. ಅವನನ್ನು ತನ್ನ ವಿಶೇಷ ಒಡನಾಡಿಗಳಲ್ಲಿ ಸೇರಿಸಿಕೊಂಡ. ಇಲ್ಲಿಯೇ ಘಟನೆ. ಒಂದು ದಿನ ಈತ ಲೋಹಾನಿಯೊಂದಿಗೆ ಬೇಟೆಗೆ ಹೊರಟ. ಹಠಾ

ಲಿಯೊಂದು ಲೋಹಾನಿಯ ಮೇಲೆರಗಿತು. ಫರೀದ್‌ಖಾನ್ ಕಾಲ್ಬಡಿಗೆಯಲ್ಲಿದ್ದ. ಆತ ಡಲೇ ಖಡ್ಗ ಹೊರತೆಗೆದ. ಹುಲಿಯನ್ನು ಎರಡು ತುಂಡಾಗಿಸಿಬಿಟ್ಟ. ವೀರ ಫರೀದ್‌ನ ರ್ಯವನ್ನು ಮೆಚ್ಚಿದ ಲೋಹಾನಿ ಆತನಿಗೆ ಶೇರ್‌ಖಾನ್ ಎಂಬ ಬಿರುದು ನೀಡಿದ. ತನ್ನ ಧ್ಯಮಯ ಗುಣಗಳಿಂದಾಗಿ ಶೇರ್‌ಖಾನ್ ಭಾರೀ ಪ್ರಭಾವ ಗಳಿಸಿಕೊಂಡ.

ಾರದ ವಶ

ಮೆಹಮೂದ್ ಖಾನ್ ಲೋಹಾನಿಯ ನಿಧನಾನಂತರ ಆತನ ಪುತ್ರ ಜಲಾಲುದ್ದೀನ್ ಾರದ ಅರಸನಾದ. ಆದರೆ ಆತ ಇನ್ನೂ ಪ್ರೌಢಾವಸ್ಥೆಗೆ ತಲುಪಿರಲಿಲ್ಲ. ಆದ್ದರಿಂದ ನ ತಾಯಿ ಶೇರ್‌ಖಾನನನ್ನು ಗುರುವಾಗಿಸಿ ಸಾಮ್ರಾಜ್ಯದ ವ್ಯವಸ್ಥೆಯನ್ನು ಆತನ ರ್ದಿ ಗೊಪ್ಪಿಸಿದಳು. ಈಗ ಕಾರ್ಯತಃ ಶೇರ್‌ಖಾನ್ ಅಲ್ಲಿನ ಎಲ್ಲದರ ಒಡೆಯನಾಗಿದ್ದ. ಕ್ರಮ ವ್ಯವಸ್ಥೆಯ ಮೂಲಕ ಆತ ಶಕ್ತಿಯನ್ನು ಬಹಳ ವೃದ್ಧಿಸಿಕೊಂಡ. ಅಫಘಾನ್ ಾರರಂತು ಆತನ ಹಿಡಿತದಲ್ಲಿ ಬಂದಿದ್ದರು. ಆತನ ನಾಯಕತ್ವದಲ್ಲಿ ತಮ್ಮ ುಕೊಂಡ ಅಧಿಕಾರವನ್ನು ಮರಳಿ ಗಳಿಸುವ ಬಗ್ಗೆ ಚಿಂತಿಸತೊಡಗಿದರು.

ಇತ್ತ ಹುಮಾಯೂನ್‌ನ ಅಲಕ್ಷ್ಯದಿಂದಲೂ ಶೇರ್‌ಖಾನನು ಬಹಳ ಲಾಭ ಗಳಿಸಿದ. ಘಾನರ ಶಕ್ತಿ ಇನ್ನೂ ಮುರಿದಿರಲಿಲ್ಲ. ಆಗಲೇ ಬಾಬರ್ ಮರಣವನ್ನಪ್ಪಿದ. ಅಫಘಾನರು ದಿಂದ ಹಿಂದೆ ಸರಿದಂತೆ ಗೋಚರಿಸಿದ್ದರಿಂದ ಹುಮಾಯೂನ್ ಅವರ ಬಗ್ಗೆ ಅಲಕ್ಷ್ಯನಾಗಿ ದಲು ಗುಜರಾತ್ ಮತ್ತು ಮಾಳ್ವಾದ ರಾಜನೊಂದಿಗೆ ಜಗಳ ಕಾದ. ಈ ಯುದ್ಧದಲ್ಲಿ ಕನಿಷ್ಠವೆಂದರೂ ಐದು ವರ್ಷ(ಕ್ರಿ.ಶ. 1532-37) ವ್ಯಯಿಸಬೇಕಾಯಿತು. ಶೇರ್‌ಖಾನನು ಕ್ತ ಅವಕಾಶವೆಂದು ಕೊಂಡು ಅಫ್‌ಘಾನರಲ್ಲಿ ಹೊಸ ಹುರುಪು ತುಂಬಿ ತನ್ನ ಶಕ್ತಿ ್ಸಲು ಮತ್ತು ಸಾಮ್ರಾಜ್ಯವನ್ನು ವಿಸ್ತರಿಸಲು ತೊಡಗಿದ. ಆಕಸ್ಮಿಕವೆಂಬಂತೆ ಅದೇ ಯದಲ್ಲಿ ಬಂಗಾಳದ ದೊರೆ ನುಸ್ರತ್‌ಶಾಹ್ ತೀರಿಕೊಂಡ. ಉತ್ತರಾಧಿಕಾರಕ್ಕಾಗಿ ೀಸುದಾರರೊಳಗೆ ಒಳ ಜಗಳ ನಡೆಯತೊಡಗಿತು. ಶೇರ್‌ಖಾನ್ ಈ ಅವಕಾಶವನ್ನು ಪಯೋಗ ಪಡಿಸಿಕೊಂಡ. ಪೂರ್ವದಲ್ಲಿ ವಿದೂರದ ವರೆಗೂ ಸ್ವಾಧೀನ ಮಾಡಿಕೊಂಡ.

ಗಾಳದ ವಶ

ಜಲಾಲ್‌ಖಾನ್ ಈಗ ಪ್ರೌಢಾವಸ್ಥೆಗೆ ಬಂದಿದ್ದ. ಆಡಳಿತ ವ್ಯವಸ್ಥೆಯಲ್ಲಿ ್‌ಖಾನ್‌ನ ಅಸಾಧಾರಣ ಹಸ್ತಕ್ಷೇಪವು ಆತನಿಗೆ ಹಿಡಿಸಲಿಲ್ಲ. ಆತ ಓಡಿ ಹೋಗಿ ಾಳ ತಲಪಿದ. ನುಸ್ರತ್‌ಶಾಹ್‌ನ ಉತ್ತರಾಧಿಕಾರಿ ಮೆಹಮೂದ್ ಷಾಹ್‌ನಿಂದ ನೆರವು ದ. ಶೇರ್‌ಷಾಹ್‌ನಿಗೆ ಹಾದಿ ಸುಗಮವಾಯಿತು. ಆತನೀಗ ಇಡಿಯ ಬಿಹಾರದ ುನಾದ. ಮೆಹಮೂದ್ ಶಾಹ್ ಆತನ ಮೇಲೆ ಮುಗಿಬಿದ್ದ. ಶೇರ್‌ಖಾನ್ ದಿಟ್ಟವಾಗಿ ರಿಸಿದ. ಮೆಹಮೂದ್ ಷಾಹ್ ಸೋಲುಂಡು ಬಂಗಾಳಕ್ಕೆ ದೌಡಾಯಿಸಿದ. ಈ ವಿನಿಂದ ಶೇರ್‌ಖಾನನ ಸ್ಥೈರ್ಯ ಹೆಚ್ಚಿತು. ಆತ ಮೆಹಮೂದ್ ಷಾಹ್‌ನಿಂದ

ಪ್ರತೀಕಾರ ಪಡೆಯಲಾರಂಭಿಸಿದ. ಕ್ರಿ.ಶ. 1538ರಲ್ಲಿ ಆಕ್ರಮಣ ನಡೆಸಿ ಬಂಗಾ ರಾಜಧಾನಿ ಗೋಡನ್ನು ವಶಪಡಿಸಿಕೊಂಡ. ಈ ರೀತಿ ಶೇರ್‌ಖಾನ್ ಬಂಗಾಳದ ಹುಲಿಯ ಘರ್ಜಿಸತೊಡಗಿದ.

ಹುಮಾಯೂನ್‌ನೊಂದಿಗೆ ಮುಖಾಮುಖಿ

ಶೇರ್‌ಖಾನನ ಘರ್ಜನೆಯು ಈಗ ಹುಮಾಯೂನನನ್ನು ಬೆಚ್ಚಿ ಬೀಳುವ ಮಾಡಿತು. ಆತ ನಿರ್ಲಕ್ಷ್ಯದ ನಿದ್ರೆಯಿಂದ ಎಚ್ಚೆತ್ತ. ಆದರೆ ಈ ಹುಲಿಯು ಪಂಜರದಿ ಹೊರಬಂದಾಗಿತ್ತು. ಮೆಹ್‌ಮೂದ್ ಷಾಹ್ ಅಸಹಾಯಕನಾಗಿ ಹುಮಾಯೂನನ ಆಶ್ರ ಪಡೆದ. ಆತ ಬಂಗಾಳದ ಮೇಲೆ ಆಕ್ರಮಣ ನಡೆಸುವಂತೆ ಮಾಡಿದ. ಹುಮಾಯೂ ಒಂದು ಭಾರೀ ಸೈನ್ಯದೊಂದಿಗೆ ಆಕ್ರಮಣ ನಡೆಸಿದ. ಶೇರ್‌ಖಾನನು ಅಫ್‌ಘಾ ಸರದಾರರ ದೌರ್ಬಲ್ಯಗಳನ್ನು ಅರಿತಿದ್ದ. ಅವನಲ್ಲಿ ಶಸ್ತ್ರಾಸ್ತ್ರಗಳು ಮತ್ತು ಸೈನ ಅಭಾವವಿತ್ತು. ಆದ್ದರಿಂದ ಬಹಿರಂಗ ಹೋರಾಟದ ಬದಲು ಯುದ್ಧ ತಂತ್ರವೊಂದ ರೂಪಿಸಿದ. ಯಾವುದೇ ತಡೆಯನ್ನು ನಿರ್ಮಿಸದೆ ದಾರಿ ಬಿಟ್ಟು ಬದಿಗೆ ಸರಿದ. ಮೊಗ ಸೇನೆಯು ಅಡೆತಡೆಯಿಲ್ಲದೆ ಗೋಡ್ ತನಕ ತಲುಪಿತು. ಬಂಗಾಳ ಮತ್ತು ಬಿಹಾರದಂ ಎರಡು ವಿಶಾಲ ಸಾಮ್ರಾಜ್ಯಗಳು ಸುಲಭದಲ್ಲಿ ಕೈ ಸೇರುವುದೆಂದರೆ ಖುಷಿಯೇ ಸರಿ. ಹ ಮೊಗಲರು ತಮ್ಮ ಮಹಾವಿಜಯದಿಂದ ಆನಂದ ತುಂದಿಲರಾದರು. ಗೋಡ್ ತೇ ಭೋಗ ವಿಲಾಸಗಳಲ್ಲಿ ತೊಡಗಿಕೊಂಡರು. ಮಧುಪಾತ್ರೆ ಮತ್ತು ಕರಗಿದ ಅಫೀ ಗುಟುಕು ಬಾಯಿ ಸೇರಿತು. ಶೇರ್‌ಖಾನ್ ಹಿಂತಿರುಗಿ ರಹತಾಸ್‌ಗಢದ ಕೋಟೆಯ ವಶಪಡಿಸಿಕೊಂಡ. ರಸ್ತೆಯಲ್ಲಿ ಹೊಂಚು ಹಾಕಿ ಕುಳಿತ. ಕೆಲವು ತಿಂಗಳ ವಿಷಯಾ ಮತ್ತು ಬಂಗಾಳದ ತೇವ ವಾಯುಗುಣವು ತನ್ನ ಪ್ರಭಾವ ತೋರಿತು. ಮೊಗ ಸೇನೆಯಲ್ಲಿ ಮಲೇರಿಯಾ ಹಬ್ಬಿತು. ಅನೇಕ ಮಂದಿ ಸಾವನ್ನಪ್ಪಿದರು. ಸಾವಿರಾರು ವೀ ಸುಸ್ತಾದರು. ಇತ್ತ ರಾಜಧಾನಿಯಲ್ಲಿನ ಗೈರುಹಾಜರಿಯು ಸೋದರರ ಮನಸ್ಸನ್ನು ಕೆಡಿಸಿ ಅವರು ಬಂಡಾಯವೆದ್ದರು. ಆಗ್ರಾ ದೋಅಬ್‌ನಲ್ಲಿ ಇಬ್ಬರು ಸೋದರರು ತಂತ ಪ್ರಭುತ್ವವನ್ನು ಘೋಷಿಸಿಕೊಂಡರು. ಇವರ ಬಂಡಾಯದಿಂದ ನಾಯಕರು ಮ ಸೈನಿಕರಲ್ಲಿ ಗೊಂದಲ ಸೃಷ್ಟಿಯಾಯಿತು.

ಈ ಸುದ್ದಿ ತಿಳಿದ ಹುಮಾಯೂನ್ ಖಿನ್ನನಾಗಿ ಕೂಡಲೇ ಮರಳಬಯಸಿದ. ಶೇರ್‌ಖಾನ್ ರಹತಾಸ್‌ಗಢದಿಂದ ಕನೌಜ್ ತನಕದ ದಾರಿಯ ಅನೇಕ ಕೋಟೆಗಳ ಸ್ವಾಧೀನಪಡಿಸಿದ್ದ. ಒಂದು ರಾತ್ರಿ ಹುಮಾಯೂನನ ಸೈನ್ಯವು ಗಂಗಾ ತೀರದಲ್ಲಿ ಚೌಸ ಬಳಿಯಲ್ಲಿ ಬೀಡುಬಿಟ್ಟಿತ್ತು. ಶೇರ್‌ಖಾನ್ ದಾಳಿ ನಡೆಸಿದ. ಮೊಗಲರು ನಾಲ್ದೆಸೆಗಳ ಸುತ್ತುವರಿಯಲ್ಪಟ್ಟರು. ಸೈನಿಕರು ಮೊದಲೇ ದಣಿದಿದ್ದರು. ಎದುರಿಸದಾದರು. ಓಟಕ್ಕಿತ್ತ ಆದರೆ ಅಲ್ಲಿ ಓಡಿ ಹೋಗಲೂ ದಾರಿಯಿರಲಿಲ್ಲ. ಎದುರುಗಡೆ ಗಂಗಾನದಿ. ಹಿ ಅಫ್‌ಘಾನ್ ಸೈನಿಕರು. ಕೊನೆಗೆ ಗಂಗಾ ನದಿಗೆ ಹಾರಿ ಕೆಲವು ಸಾವಿರ ಮೊಗಲರು ಮು

ೇದರು. ಸ್ವತಃ ಹುಮಾಯೂನನೂ ಮುಳುಗುತ್ತಿದ್ದ. ಆದರೆ ಜಲ ತುಂಬಿಸಿಕೊಳ್ಳುತ್ತಿದ್ದ ್ಯನ ನೀರಿನ ಚರ್ಮದ ಚೀಲದ ನೆರವಿನಿಂದ ಹೊರಬಂದ. ಈ ಉಪಕಾರಕ್ಕೆ ಫಲವಾಗಿ ಆತನಿಗೆ ತೀನ್‌ಗಢದ ಆಡಳಿತ ದೊರೆಯಿತೆಂದು ಹೇಳಲಾಗುತ್ತದೆ. ಇಲ್ಲಿಂದ ಹೋಗಿ ಹುಮಾಯೂನ್ ಆಗ್ರಾ ತಲುಪಿದ. ಪುನಃ ಹೋರಾಟಕ್ಕಾಗಿ ಸಿದ್ಧತೆ ಸತೊಡಗಿದ. ಆದರೆ ಶೇರ್‌ಖಾನ್ ಅವಕಾಶವನ್ನೇ ನೀಡಲಿಲ್ಲ. ಬೆನ್ನಟ್ಟಿ ಮುಂದುವರಿದ ಶ. 1540ರಲ್ಲಿ ಕನೋಜ್ ಬಳಿ ಮತ್ತೆ ಯುದ್ಧ ನಡೆಯಿತು. ಶೇರ್‌ಖಾನ್ ಇಲ್ಲಿಯೂ ರೀ ಸೋಲುಣಿಸಿದ. ಈ ಬಾರಿ ಹುಮಾಯೂನ್ ಮೂಲ ಸಮೇತ ಕಿತ್ತೊಗೆಯಲ್ಪಟ್ಟ. ಂತರ ಭಾರತದಲ್ಲೆಲ್ಲೂ ಆತನ ಪಾದ ನೆಲೆಯೂರದಂತಾಯಿತು. ಆತ ದೆಹಲಿ ಮೂಲಕ ಹೋರ್ ತಲುಪಿದ. ಶೇರ್‌ಖಾನನ ಭಯವು ಸೋದರ ಕಾಮ್ರಾನ್‌ನ ಮೇಲೆ ಪ್ರಬಲವಾಗಿ ರಿಸಿದ್ದರಿಂದ ಹುಮಾಯೂನನಿಗೆ ಆತ ಯಾವುದೇ ನೆರವು ನೀಡಲಿಲ್ಲ. ಶೇರ್‌ಖಾನನಿಗಾಗಿ ಜಾಬನ್ನು ಕೈಬಿಟ್ಟು ಕಾಬೂಲಿಗೆ ಹೊರಟ. ಶೇರ್‌ಖಾನ್ ಮುನ್ನಡೆದು ಪಂಜಾಬನ್ನು ಪಡಿಸಿಕೊಂಡ. ಪಂಜಾಬ್‌ನ ಬಂಡುಕೋರರು ಭಾರೀ ಗೊಂದಲ ಹಬ್ಬಿಸಿ ಬಿಟ್ಟಿದ್ದರು. ರನ್ನು ದಮನಿಸಿದ. ಅಲ್ಲಿ ತನ್ನೊಬ್ಬ ಸಹಾಯಕನನ್ನು ನೇಮಿಸಿದ.

ಸಹೋದರರ ನಿರ್ಲಕ್ಷ್ಯದಿಂದ ನಿರಾಶನಾದ ಹುಮಾಯೂನ್ ಮೊದಲು ರಜಪೂತಾನ, ತರ ಸಿಂಧ್‌ಗೆ ಹೋದ. ಆದರೆ ಯಾರೂ ಲೆಕ್ಕಿಸಲಿಲ್ಲ. ಯಾರದೇ ಸಹಾಯ ದೊರೆಯದೆ ನೆಗೆ ಅಲೆದಾಡುತ್ತ ಇರಾನ್ ತಲುಪಿದ. ಅಲ್ಲಿನ ಶಿಯಾ ಆಡಳಿತಗಾರನ ಆಶ್ರಯ ಿದ.

ಫರೀದ್‌ಖಾನನ ಹಳೆಯ ಆಶೆ ಈಡೇರಿತು. ಮೊಗಲರ ಶಸ್ತ್ರಾಸ್ತ್ರಗಳು ಯಾವುದೇ ನಿ ಮಾಡದಾಯಿತು. ಅವರು ತಮ್ಮ ವಿಷಯಾಸಕ್ತಿ, ಸ್ವೇಚ್ಛೆ ಮತ್ತು ಪರಸ್ಪರ ಕಿನಿಂದಾಗಿ ರಂಗದಿಂದ ಹೊರಕ್ಕೆಸೆಯಲ್ಪಟ್ಟರು. ಆಡಳಿತವು ಸೈನಿಕ ಪುತ್ರನ ಕೈಸೇರಿತು. ೇದ್‌ಖಾನ್ ಈಗ ಶೇರ್‌ಷಾಹ್ ಎಂಬ ಬಿರುದಿನಿಂದ ದೆಹಲಿ ಸಾಮ್ರಾಜ್ಯದ ಗದ್ದುಗೆಯನ್ನು ಂಕರಿಸಿದ. ಅಧಿಕಾರದ ಅಮಲು ಸಾಮಾನ್ಯವಾಗಿ ಮನುಷ್ಯನನ್ನು ಭ್ರಾಂತಗೊಳಿಸುತ್ತದೆ. ರೆ ಶೇರ್‌ಷಾಹ್ ಅಂತಹ ನೀಚರಲ್ಲಿ ಸೇರಿರಲಿಲ್ಲ. ಆತ ಶಕ್ತಿ ಅಧಿಕಾರವನ್ನು ಡುಸಿದ್ದು ಭೋಗ ವಿಲಾಸಕ್ಕಾಗಿ ಅಲ್ಲ. ಬದಲಾಗಿ ದೇಶವನ್ನು ಕ್ಷೋಭೆ ಗೊಂದಲಗಳಿಂದ ಕ್ತಗೊಳಿಸಲು ಮತ್ತು ಮರ್ದಕರಿಂದ ಮರ್ದಿತರ ಪ್ರತೀಕಾರ ಪಡೆಯಲು ಆಗಿತ್ತು. ತನ್ನ ಈ ಕರ್ತವ್ಯವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿದ್ದುದಕ್ಕೆ ಇತಿಹಾಸ ್ಷಿಯಾಗಿದೆ.

ಂಭೆಕೋರರ ದಮನ

ಆಡಳಿತ ಚುಕ್ಕಾಣಿ ಕೈಗೆತ್ತಿಕೊಂಡ ಕೂಡಲೇ ಆತ ಗಲಭೆಕೋರರ ದಮನ ಮತ್ತು ಶದಲ್ಲಿ ಶಾಂತಿ ನೆಮ್ಮದಿಯನ್ನು ಯಥಾಸ್ಥಿತಿಗೆ ತರುವ ಕಡೆಗೆ ಗಮನ ಹರಿಸಿದ. ಕೆಲವೇ ಗಳ ಹೋರಾಟದಿಂದ ದೀರ್ಘಾವಧಿಯ ಗೊಂದಲ ಮತ್ತು ಅವ್ಯವಸ್ಥೆಯನ್ನು ಅಳಿಸುವಲ್ಲಿ

ಯಶಸ್ವಿಯಾದ. ಆತ ಮೊಟ್ಟಮೊದಲಾಗಿ ಹುಮಾಯೂನನನ್ನು ಮರಳಿ ತ ಯೋಚಿಸುತ್ತಿದ್ದ ಮೊಗಲ ಸರದಾರರನ್ನು ನಿಸ್ಸಹಾಯಕಗೊಳಿಸಿದ. ಗ್ವಾಲಿಯರ್‌ನ ಕೋಟೆ ಆಶ್ರಯ ಪಡೆದ ಮೊಗಲ್ ಸರದಾರರು ಆಕ್ರಮಣಕ್ಕೆ ಸನ್ನದ್ಧರಾಗಿದ್ದರು. ಪ್ರಯತ್ನಗಳನ್ನು ಶೇರ್‌ಷಾಹ್ ವಿಫಲಗೊಳಿಸಿದ ಮತ್ತು ಕೋಟೆಯನ್ನು ಸ್ವಾಧೀನಪಡಿ ಮತ್ತೆ ಮಾಳ್ವಾ ಮತ್ತದರ ಸುತ್ತಮುತ್ತಲ ಗಲಭೆಕೋರರ ದಮನಕ್ಕಾಗಿ ಮುಂದುವ ಅವರನ್ನು ವಿಧೇಯಗೊಳಿಸಿ ರಾಯಸೇನೆ ತಲುಪಿದ. ಅಲ್ಲಿ ಪ್ರಯತ್ನಿಸಿ ಪೂರ್ಣ ಮತ್ತವನ ಸಂಗಾತಿಗಳನ್ನು ನಾಮಾವಶೇಷಗೊಳಿಸಿದ. ಈ ಗಲಭೆಕೋರರು ರಾಯಸೇ ಕೋಟೆಯನ್ನು ತಮ್ಮ ಚಟುವಟಿಕೆಗಳ ಕೇಂದ್ರವಾಗಿಸಿ ಮಾಳ್ವಾ ಮತ್ತು ಸುತ್ತಮುತ್ತ ಪ್ರಜೆಗಳ ನೆಮ್ಮದಿಯನ್ನು ಹಾಳುಗೈದಿದ್ದರು. ಅಧಿಕಾರ ಪ್ರಾಪ್ತವಾಗುತ್ತಲೇ ಶೇರ್‌ಷ ಬಹಳ ಕಾಲದಿಂದ ಪ್ರಜೆಗಳಿಗೆ ತೊಂದರೆ ನೀಡುತ್ತಿದ್ದ ಗಲಭೆಕೋರರನ್ನು ದಮನಿ ಈ ಮರ್ದಕರಿಂದ ಮರ್ದಿತರ ಪೂರ್ಣ ಪ್ರತೀಕಾರ ಪಡೆದ.

ಸಾಮ್ರಾಜ್ಯ ವಿಸ್ತರಣೆ

ಅನಂತರ ಶೇರ್‌ಷಾಹ್ ತನ್ನ ವಿರುದ್ಧ ಮೊಗಲರಿಗೆ ನೆರವು ನೀಡಿದ ಅಥವಾ ಅಸ್ತಿತ್ವವು ಸ್ವತಃ ಅವರದೇ ಸಾಮ್ರಾಜ್ಯಕ್ಕೆ ಅಪಾಯಕಾರಿಯಾಗಿದ್ದ ರಜಪೂತಾನದ ರಾಜ ದಮನಿಸಲು ನಿರ್ಧರಿಸಿದ. ಆತ ಜೋಧ್‌ಪುರದ ರಾಜ ಮಾಲ್‌ದೇವ್‌ನ ಮೇಲೆ ನಡೆಸಿದ. ಈ ಅರಸ ಶೇರ್‌ಷಾಹ್‌ನ ವಿರುದ್ಧ ಹುಮಾಯೂನನಿಗೆ ನೆರವು ನೀಡುವ ವಾ ಮಾಡಿದ್ದ. ಆದರೆ ಹುಮಾಯೂನ್ ಅಸಹಾಯಕನಾಗಿ ಅಲ್ಲಿ ತಲುಪಿದಾಗ ತಿರುಗಿಸಿಕೊಂಡಿದ್ದ. ಆತ ಮೊಗಲರು ಹಾಗೂ ಅಫಘಾನರ ವೈಮನಸ್ಸಿನಿಂದ ಲಾಭ ಪ ತನ್ನ ಸಾಮ್ರಾಜ್ಯವನ್ನು ವಿಸ್ತರಿಸುವ ಯೋಜನೆ ರೂಪಿಸುತ್ತಿದ್ದ. ಮಾಲ್‌ದೇವನ ಶಕ್ತಿಯ ಮುರಿದ ನಂತರ ಶೇರ್‌ಷಾಹ್ ಚಿತ್ತೂರ್‌ನೆಡೆಗೆ ಧಾವಿಸಿದ. ಅದನ್ನು ಸುಲಭ ಜಯಿಸಿದ. ಮತ್ತೆ ಕ್ರಿ.ಶ. 1545ರಲ್ಲಿ ಕಳಿಂಗದ ಮೇಲೆ ಆಕ್ರಮಣ ನಡೆಸಿದ. ಕೆ ವಶವಾಗುವುದರಲ್ಲಿತ್ತು. ಸಿಡಿಮದ್ದಿನ ಬುಗುರಿಯೊಂದು ನಗರ ಗೋಡೆಗೆ ಹೊ ಹಿಂದಿರುಗಿತು. ಅದು ಶೇರ್‌ಷಾಹನ ಬಳಿಯಿದ್ದ ಸಿಡಿಮದ್ದಿನ ಬುಟ್ಟಿಯ ಮೇಲೆ ಬ ಬಿತ್ತು. ಬುಗರಿ ಬೀಳುತ್ತಲೇ ಸಿಡಿಮದ್ದು ಸಿಡಿಯಿತು. ಶೇರ್‌ಷಾಹ್‌ನ ತಲೆಯಿಂದ ಪ ತನಕ ಸುಟ್ಟುಹೋಯಿತು. ದುರ್ದೈವಿ ನೋವಿನಿಂದ ವ್ಯಾಕುಲನಾಗಿ ತನ್ನ ಡೇರೆಯೆ ದೌಡಾಯಿಸಿದ. ಪ್ರಜ್ಞಾಹೀನನಾಗಿ ಬಿಟ್ಟ. ಈ ಸ್ಥಿತಿಯಲ್ಲಿ ಕೋಟೆಯನ್ನು ಜಯಿ ಚಿಂತೆಯೇ ಪ್ರಬಲವಾಗಿತ್ತು. ಪ್ರಜ್ಞೆ ಬಂದಾಗಲೆಲ್ಲ ಆತ ಸೈನಿಕರಲ್ಲಿ ಉತ್ಸಾಹ ತುಂಬುತ್ತಿ ಸಂಜೆಗೆ ಕೋಟೆ ಸ್ವಾಧೀನಗೊಂಡ ಸುದ್ದಿ ಸಿಕ್ಕಿತು. ಶೇರ್‌ಷಾಹ್ ಈ ಶುಭವಾರ್ತೆ ಅಲ್‌ಹಮ್ದುಲಿಲ್ಲಾಹ್(ಅಲ್ಲಾಹನಿಗೆ ಸರ್ವಸ್ತುತಿಗಳು) ಎಂದು ಉದ್ಗರಿಸಿದ. ಅದರ ನ ಮೂರು ಬಾರಿ ಸತ್ಯ ಸಾಕ್ಷ್ಯ ವಚನ ಪುನರುಚ್ಚರಿಸುತ್ತ ಪ್ರಾಣವನ್ನು ಪ್ರಭುವಿಗೆ ಸಮ ಬಿಟ್ಟ. (ಇನ್ನಾಲಿಲ್ಲಾಹಿ....)

ವ್ರತೆ ಮತ್ತು ವ್ಯವಸ್ಥೆ

ಶೇರ್‌ಷಾಹ್ ಸಾಮ್ರಾಜ್ಯದ ವಿಸ್ತೀರ್ಣತೆಯೊಂದಿಗೇ ಅದರ ಭದ್ರತೆ ಮತ್ತು ವಸ್ಥೆಯ ಕಡೆಗೂ ಹೆಚ್ಚಿನ ಗಮನ ಹರಿಸಿದ. ಆತ ಇಡಿಯ ಭೂಮಿಯ ಮಾಪನ ಸಿದ. ಫಸಲನ್ನು ಅಂದಾಜಿಸಿ 1/4 ಭೂಕಂದಾಯ ವಿಧಿಸಿದ. ಆಡಳಿತ ವ್ಯವಹಾರಕ್ಕಾಗಿ ಯ ಸಾಮ್ರಾಜ್ಯವನ್ನು ಅನೇಕ ವಿಭಾಗಗಳಲ್ಲಿ ವಿಭಜಿಸಿದ. ಪ್ರತಿ ವಿಭಾಗಕ್ಕೆ ಒಬ್ಬ ಾಗಾಧಿಕಾರಿ, ಒಬ್ಬ ಅಮೀನ್/ವಿಶ್ವಸ್ಥ ನಿಧಿಗಾರ, ಒಬ್ಬ ಕೋಶಾಧಿಕಾರಿ, ಒಬ್ಬ ಯಾಧೀಶ ಮತ್ತು ಲೆಕ್ಕ ಬರೆಯಲು ಇಬ್ಬರು ಸಿಬ್ಬಂದಿಗಳನ್ನು ನೇಮಿಸಲಾಯಿತು. ಒಬ್ಬ ರಸಿಯಲ್ಲಿ, ಇನ್ನೊಬ್ಬ ಹಿಂದಿಯಲ್ಲಿ ಲೆಕ್ಕ ಬರೆದಿಡುತ್ತಿದ್ದ.

ತನ್ನ ವಿಭಾಗದಲ್ಲಿ ಶಾಂತಿ ಸಮಾಧಾನವನ್ನು ಯಥಾಸ್ಥಿತಿಯಲ್ಲಿಡುವುದು ಮತ್ತು ರಾಜಾಜ್ಞೆ ನ್ನು ಜಾರಿಗೊಳಿಸುವುದು ವಿಭಾಗಾಧಿಕಾರಿಯ ಕರ್ತವ್ಯವಾಗಿತ್ತು. ಅದಕ್ಕಾಗಿ ಆತನೊಂದಿಗೆ ಕರ ತುಕಡಿಯೊಂದು ಇರುತ್ತಿತ್ತು. ಅಮೀನನು ವಿಭಾಗದ ಭೂಕಂದಾಯ ವಸೂಲು ಡುತ್ತಿದ್ದ. ಕೋಶಾಧಿಕಾರಿ ಇಡಿಯ ಖಜಾನೆಯ ಹೊಣೆಗಾರನಾಗಿರುತ್ತಿದ್ದ. ನ್ಯಾಯಾಧೀಶನು ಜ್ಯ ತೀರ್ಮಾನಗೈಯುತ್ತಿದ್ದ. ಈ ಸರಕಾರೀ ಅಧಿಕಾರಿಗಳ ಹೊರತಾಗಿ ಶಾನುಭೋಗ/ ವಾರಿ, ಗ್ರಾಮದ ಮುಖಂಡ/ಚೌಧರಿ ಮತ್ತು ಮುಖಂಡ/ಮುಖ್ಯಾ ಇರುತ್ತಿದ್ದರು. ಇವರು ರವರೊಂದಿಗೆ ಸಮಾಲೋಚನೆಯಿಂದ ನಾಮಕರಣ ಮಾಡಲ್ಪಡುತ್ತಿದ್ದರು. ಕ್ಷೇತ್ರ ವಸ್ಥೆಯಲ್ಲಿ ಈ ಜನರಿಂದ ಹೆಚ್ಚಿನ ನೆರವು ದೊರೆಯುತ್ತಿದ್ದುವು. ಕೆಲವು ವಿಭಾಗಗಳಿಗೆ ದು ಸರಕಾರವಿರುತ್ತಿತ್ತು. ಶೇರ್‌ಷಾಹ್‌ನ ಕಾಲದ ಸರಕಾರ ಇಂದಿನ ಜಿಲ್ಲೆಗಳಿಗಿಂತ ಡ್ಡದು. ಆದರೆ ಘಟಕಕ್ಕಿಂತ ಸ್ವಲ್ಪ ಸಣ್ಣದು. ಪ್ರತಿ ಸರಕಾರದಲ್ಲಿ ಆಡಳಿತದ ವತಿಯಿಂದ ್ಬರು ಉನ್ನತ ಅಧಿಕಾರಿಗಳಿರುತ್ತಿದ್ದರು. ಒಬ್ಬನ ಹೊಣೆ ಶಾಂತಿ ಸಮಾಧಾನವನ್ನು ಾಡುವುದು, ಇನ್ನೊಬ್ಬನ ಜವಾಬ್ದಾರಿ ವ್ಯಾಜ್ಯಗಳನ್ನು ತೀರ್ಮಾನಿಸುವುದು. ಈ ಅಧಿಕಾರಿ ತಮ್ಮ ಕ್ಷೇತ್ರದ ಎಲ್ಲ ವಿಭಾಗಗಳಲ್ಲಿ ಕಾರ್ಯನಿರ್ವಹಿಸುವ ಸರಕಾರೀ ಅಧಿಕಾರಿಗಳು ತ್ತು ನಾಗರಿಕರ ಮೇಲ್ವಿಚಾರಕರೂ ಆಗಿದ್ದರು. ಇವರೆಲ್ಲರ ಮೇಲೆ ಸ್ವತಃ ಶೇರ್‌ಷಾಹ್ ತ್ರವನ ನಂಬಿಗಸ್ಥ ಸರದಾರರ ಹದ್ದಿನ ಕಣ್ಣಿರುತ್ತಿತ್ತು. ಇದರಿಂದ ಗಲಭೆಕೋರರ ಹುಟ್ಟಿಗೆ ಕಾಶವಿರಲಿಲ್ಲ. ಸರಕಾರೀ ಸಿಬ್ಬಂದಿಗಳು ಕರ್ತವ್ಯದಲ್ಲಿ ಅಲಕ್ಷ್ಯ ತೋರಿಸಲು ಮತ್ತು ೆಗಳ ಮೇಲೆ ಅಕ್ರಮ ಹಿಂಸೆ ಎಸಗಲು ಸಾಧ್ಯವಾಗುತ್ತಿರಲಿಲ್ಲ. ಶೇರ್‌ಷಾಹ್‌ನ ಈ ವ್ಯವಸ್ಥೆ ಬಹಳ ಕಡಿಮೆ ಅವಧಿಯಲ್ಲಿ ಶಾಂತಿ ಸುಭಿಕ್ಷೆಯನ್ನು ಯಥಾಸ್ಥಿತಿಗೆ ವುದರೊಂದಿಗೇ ರಾಷ್ಟ್ರದ ಸಮೃದ್ಧಿ ಮತ್ತು ಸಂತುಷ್ಟಿಯಲ್ಲೂ ಬಹಳ ವೃದ್ಧಿಯಾಯಿತು. ೆಗಳಿಗೆ ಶಾಂತಿ ಸಮಾಧಾನ ಪ್ರಾಪ್ತವಾಯಿತು. ಸರಕಾರೀ ಆದಾಯ ಬಹಳ ಹೆಚ್ಚಿತು.

ರಾಧ ತಡೆ

ಆಡಳಿತಾಧಿಕಾರಿಯ ಪ್ರಪ್ರಥಮ ಕರ್ತವ್ಯ ಒಳಿತಿನ ಸಂಸ್ಥಾಪನೆ ಮತ್ತು ಕೆಡುಕಿನ ೂರ್ಲನವಾಗಿದೆ. ಈ ನಿಟ್ಟಿನಲ್ಲೂ ಶೇರ್‌ಷಾಹನ ಪಂಚವಾರ್ಷಿಕ ಆಡಳಿತ ಕಾಲವು

ಭಾರೀ ಯಶಸ್ವಿಯಾಗಿತ್ತು. ಆತ ಸ್ವಯಂ ಬಹಳ ಸರಳ ಮತ್ತು ಪರಿಶುದ್ಧ ಬದುಕ
ಸಾಗಿಸುತ್ತಿದ್ದ. ತನ್ನ ಸಿಬ್ಬಂದಿಗಳಿಗೂ ಅದನ್ನು ಬೋಧಿಸುತ್ತಿದ್ದ. ಜನರ ಶಿಕ್ಷಣ ತರಬೇತಿ
ಎಲ್ಲಾ ಕಡೆಗಳಲ್ಲೂ ಶಾಲೆಗಳನ್ನು ಆರಂಭಿಸಿದ. ಖಾಸಗೀ ಸಂಸ್ಥೆಗಳಿಗೆ ಆರ್ಥಿಕ ನೆ
ನೀಡಿದ. ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಿದ. ದೊಡ್ಡ ಪ್ರಮಾಣದ
ಹಸಿದವರಿಗೆ ಹೊಟ್ಟೆ ತುಂಬುವ ಮತ್ತು ನಗ್ನರಿಗೆ ದೇಹ ಮುಚ್ಚುವ ಏರ್ಪಾಟು ಮಾಡಿ
ವಿಚಾರಣಾ ನ್ಯಾಯಾಲಯ ಸ್ಥಾಪಿಸಿ ಜನರ ಆಚಾರ ವಿಚಾರಗಳನ್ನು ಸುಧಾರಿಸಿದ. ಇ
ಹೆಚ್ಚಿಗೆ ನಡೆಯಬಹುದಾದ ಅಪರಾಧಗಳ ತಡೆಗಾಗಿ ಬಹಳ ಅರ್ಥಪೂರ್ಣ ಮತ್ತು ವ್ಯಾ
ವ್ಯವಸ್ಥೆ ಮಾಡಿದ. ಅಪರಾಧಗಳು ಸಾಮಾನ್ಯವಾಗಿ ಕ್ಷೇತ್ರದ ಹೊಣೆಗಾರರ ಮ
ಸಿಬ್ಬಂದಿಗಳ ಅಲಕ್ಷ್ಯ ಅಥವಾ ಅವರ ಪ್ರೇರಣೆಯಿಂದ ನಡೆಯುತ್ತದೆ. ತನ್ನ ಕ್ಷೇತ್ರದ
ನಡೆಯುವ ಘಟನೆಗಳನ್ನು ತಿಳಿಯಲು ಮತ್ತು ಅಪರಾಧಿಗಳನ್ನು ನ್ಯಾಯಾಲಯದ
ಹಾಜರುಪಡಿಸಲು ಆತ ನಗರದ ಮುಖ್ಯ ಠಾಣೆದಾರ ಮತ್ತು ಊರಿನ ಮುಖ್ಯಸ್ಥ ಅಥ
ವಿಭಾಗಗಳ ಸಿಬ್ಬಂದಿಗಳಿಗೆ ಹೊಣೆ ವಹಿಸಿದ. ಅವರು ಈ ಕೆಲಸ ಮಾಡದಿದ್ದರೆ ಅವ
ಶಿಕ್ಷೆ ವಿಧಿಸಲು ನಿರ್ಧರಿಸಿದ. ಇದರಿಂದಾಗಿಯೇ ಆತನ ಆಡಳಿತ ಕಾಲದಲ್ಲಿ ಯಾ
ಅಪರಾಧಿ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಅಪರಾಧ ಸಾಬೀತಾದ ಅಪರಾಧಿಗ
ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು. ಈ ಉಪಾಯಗಳ ಒಟ್ಟು ಪರಿಣಾಮವಾಗಿ ಅಪರಾಧ
ಬಹಳವಾಗಿ ಕ್ಷೀಣಿಸಿದುವು.

ನ್ಯಾಯಪಾಲನೆ

ಶೇರ್‌ಷಾಹ್ ಬಹಳವೇ ನ್ಯಾಯಪ್ರಿಯ ಅರಸನಾಗಿದ್ದ. ಅವನ ದೃಷ್ಟಿಯಲ್ಲಿ ತನ್ನವ
ಪರರು, ಸಣ್ಣವರು-ದೊಡ್ಡವರು, ಶ್ರೀಮಂತರು-ಬಡವರು ಎಲ್ಲರೂ ಸಮಾನರಾಗಿದ್ದರು.
ತನ್ನ ಸಾಮ್ರಾಜ್ಯದಲ್ಲಿ ನ್ಯಾಯಾಲಯಗಳ ಒಂದು ಜಾಲವನ್ನೇ ಹರಡಿದ್ದ. ಅದ
ನ್ಯಾಯಾಧೀಶರು ಮೊಕದ್ದಮೆಗಳ ತೀರ್ಮಾನ ಮಾಡುತ್ತಿದ್ದರು. ಜನಸಾಮಾನ್ಯರಿಗೆ ಶೀ
ಮತ್ತು ಉಚಿತವಾದ ನ್ಯಾಯ ದೊರೆಯುತ್ತಿತ್ತು. ಅಧಿಕಾರಿಗಳು ಮತ್ತು ರಾಜಕುಟುಂ
ಮಂದಿಯ ವಿರುದ್ಧವೂ ಮೊಕದ್ದಮೆ ಹೂಡುವ ಮುಕ್ತ ಅವಕಾಶವಿತ್ತು.

ಒಮ್ಮೆ ಶೇರ್‌ಷಾಹನ ಪುತ್ರ ಆದಿಲ್‌ಖಾನ್ ಆನೆಯ ಮೇಲೆ ಕುಳಿತು ಒ
ಓಣಿಯಿಂದ ಸಾಗುತ್ತಿದ್ದ. ಗಲ್ಲಿಯಲ್ಲಿ ಒಬ್ಬ ಬಣಜಿಗನ ಮನೆಯಿತ್ತು. ಬಣಜಿಗನ
ಸ್ನಾನ ಮಾಡುತ್ತಿದ್ದಳು. ಮನೆಯ ಆವರಣ ಗೋಡೆ ತಗ್ಗಿನಲ್ಲಿತ್ತು. ರಾಜಕುಮಾರನ ದ
ಆಕೆಯ ಮೇಲೆ ಬಿತ್ತು. ರಾಜಕುಮಾರ ಆಕೆಯ ಮೇಲೆ ಎಲೆಬೀಡ ಎಸೆದ. ಆ
ರಾಜಕುಮಾರನ ಈ ಕೆಟ್ಟ ವರ್ತನೆಯಿಂದ ಬಹಳ ದುಃಖವಾಯಿತು. ಆಕೆ ತನ್ನ ಪ
ಮೂಲಕ ಶೇರ್‌ಷಾಹನಿಂದ ನ್ಯಾಯ ಬಯಸಿದಳು. ಶೇರ್‌ಷಾಹ್‌ನ ದೃಷ್ಟಿಯಲ್ಲಿ ರಾಜಕು
ಮತ್ತು ಬಣಜಿಗನ ಸ್ಥಾನದಲ್ಲಿ ಯಾವುದೇ ಅಂತರವಿರಲಿಲ್ಲ. ಆದ್ದರಿಂದ ಬಣಜಿ
ರಾಜಕುಮಾರನ ಪತ್ನಿಯೊಂದಿಗೆ ಇದೇ ರೀತಿ ವರ್ತಿಸಿ ಪ್ರತೀಕಾರ ತೀರಿಸಿಕೊಳ್ಳಬೇಕೆ

ಹೊರಡಿಸಿದ. ಜನ ಬಹಳ ಅಂಗಲಾಚಿದರು. ಆದರೆ ಅರಸ ತನ್ನ ನಿರ್ಣಯದಲ್ಲೇ ಾಗಿದ್ದ. ಕೊನೆಗೆ ರಾಜಕುಮಾರ ಕ್ಷಮೆ ಯಾಚಿಸಿ ಬಣಜಿಗನನ್ನು ಓಲೈಸಿಕೊಂಡ. 'ಷಾಹನ ಇದೇ ನಿಷ್ಪಕ್ಷಪಾತ ನ್ಯಾಯದಿಂದಾಗಿಯೇ ಆತನ ಆಡಳಿತ ಕಾಲದಲ್ಲಿ ನ್ಯಾಯ ಳ ವ್ಯಾಪಕವಾಗಿತ್ತು.

ರ್ಮಾಣ ಕಾರ್ಯ

ಗಲಭೆಕೋರರ ದಮನ ಮತ್ತು ಅಪರಾಧಗಳ ತಡೆಯೊಂದಿಗೆ ಶೇರ್‌ಷಾಹ್ ನಿರ್ಮಾಣ ್ತು ರಕ್ಷಣಾ ಕಾರ್ಯಗಳ ಕಡೆಗೂ ಹೆಚ್ಚಿನ ಗಮನ ನೀಡಿದ. ಸಾರಿಗೆ ಸೌಲಭ್ಯಕ್ಕಾಗಿ ಯ ರಸ್ತೆಗಳನ್ನು ದುರಸ್ತಿಗೊಳಿಸಿದ. ಹೊಸ ರಸ್ತೆಗಳನ್ನು ನಿರ್ಮಿಸಿದ. ಅದರಲ್ಲಿ ಒಂದು ಯು ಪಂಜಾಬ್‌ನಿಂದ ಬಂಗಾಳದ ತನಕ ಸುಮಾರು 1,500 ಮೈಲು ಉದ್ದವಾಗಿತ್ತು. ರಸ್ತೆಗಳ ಇಕ್ಕೆಡೆಗಳಲ್ಲಿ ಮರಗಳನ್ನು ನೆಡಿಸಿದ. ಪ್ರತಿ ಎರಡು ಮೈಲಿಗೆ ಧರ್ಮಶಾಲೆಗಳನ್ನು ್ಸಿದ. ಅದರಲ್ಲಿ ಆಹಾರ ಪಾನೀಯ, ಪ್ರಯಾಣಿಕರ ವಿಶ್ರಾಂತಿ ಮತ್ತು ಸುರಕ್ಷತೆಯ ಸಾಮಗ್ರಿ, ಸಾಮಾನುಗಳಿರುತ್ತಿದ್ದುವು. ಪ್ರಯಾಣದ ಈ ಸೌಕರ್ಯಗಳಿಂದಾಗಿ ವ್ಯಾಪಾರಕ್ಕೆ ಳ ಉತ್ತೇಜನ ದೊರೆಯಿತು. ಪ್ರಜೆಗಳು ಸಂಪದ್ಭರಿತರಾದರು. ಆತ ಸಾಮ್ರಾಜ್ಯದ ನ ಭಾಗಗಳಲ್ಲಿ ಛತ್ರಗಳನ್ನು ಸ್ಥಾಪಿಸಿದ. ಅಲ್ಲಿ ಬಡವರಿಗೆ ಉಚಿತ ಊಟ ವಿತರಣೆ ಗುತ್ತಿತ್ತು. ಅನಾಥ ಮತ್ತು ವಿಧವೆಯರಿಗೆ ಸ್ಥಿರ ಪಿಂಚಣಿ ದೊರೆಯುತ್ತಿತ್ತು. ಪಾಠಶಾಲೆ, ದಿ ಮತ್ತು ಧಾರ್ಮಿಕ ಕಾರ್ಯಗಳಿಗೆ ದತ್ತಿ ಭೂಮಿಗಳು ದೊರೆಯುತ್ತಿತ್ತು. ಬಡ ್ಯರ್ಥಿಗಳು ಮತ್ತು ಅಧ್ಯಾಪಕರಿಗೆ ಆರ್ಥಿಕ ನೆರವು ದೊರೆಯುತ್ತಿತ್ತು. ಬಡವರು, ಾಯಕರು ಮತ್ತು ವಿದ್ವಾಂಸರ ಕಡೆಗೆ ಹೆಚ್ಚಿನ ಗಮನವಿತ್ತು. ನೀರಾವರಿಗಾಗಿ ಡ್ಡದೊಡ್ಡ ಕೆರೆಗಳನ್ನು ತೋಡಿಸಲಾಗಿತ್ತು. ಕಾಲುವೆಗಳನ್ನು ನಿರ್ಮಿಸಲಾಗಿತ್ತು.

ಹ್ಯ ಆಕ್ರಮಣಗಳಿಂದ ರಕ್ಷಣೆ

ಶೇರ್‌ಷಾಹ್ ಬಾಹ್ಯ ಆಕ್ರಮಣಗಾರರಿಂದ ದೇಶವನ್ನು ರಕ್ಷಿಸುವ ನಿಟ್ಟಿನಲ್ಲೂ ಾ ಸೂಕ್ತ ವ್ಯವಸ್ಥೆ ಮಾಡಿದ. ವಾಯುವ್ಯ ಮೂಲೆಯು ಯಾವಾಗಲೂ ಅಪಾಯದ ಯಲ್ಲಿತ್ತು. ಶೇರ್‌ಷಾಹನ ಕಾಲದಲ್ಲಂತೂ ಈ ಅಪಾಯ ಇನ್ನೂ ಹೆಚ್ಚಿತ್ತು. ಏಕೆಂದರೆ ಹಾಯೂನ್ ಮತ್ತವನ ಸಹೋದರರು ಗಡಿಯಾಚೆಯಲ್ಲೇ ವಾಸವಾಗಿದ್ದರು. ಅವರ ಯಿಂದ ಪ್ರತಿಕ್ಷಣ ದಾಳಿಯ ಭೀತಿಯಿತ್ತು. ಆತ ಈ ದಾಳಿಗಳ ತಡೆಗಾಗಿ ರಹ್ತಕ್‌ನ ಪದಲ್ಲಿ ಒಂದು ಸುಭದ್ರ ಕೋಟೆಯನ್ನು ನಿರ್ಮಿಸಿದ. ಬಿಹಾರದ ಪ್ರಸಿದ್ಧ ಕೋಟೆಯಾದ ್ಸ್‌ಗಢದ ಹೆಸರಿನಲ್ಲಿ ರಹ್ತಾಸ್‌ನೌ ಎಂದು ಅದಕ್ಕೆ ಹೆಸರಿಟ್ಟ. ಅದರ ರಕ್ಷಣೆಗಾಗಿ ನಂಬಿಗಸ್ಥ ಹುಮಾಯೂನ್ ಆರ್ಝುಮ್‌ನ ನೇತೃತ್ವದಲ್ಲಿ ಒಂದು ಭಾರೀ ಸೈನ್ಯವನ್ನು ಸ್ತಪಡಿಸಿದ. ಅದೇ ವೇಳೆ ಸಿಯಾಲ್‌ಕೋಟ್‌ನಿಂದ ನಗರಕೋಟ್‌ವರೆಗೆ ಅನೇಕ ಪುಟ್ಟ ಕೋಟೆಗಳನ್ನು ನಿರ್ಮಿಸಿದ. ಗಡಿಯಲ್ಲಿನ ರೋಹಿಲಾ ಪಠಾನರನ್ನು ಸೇನೆಗೆ ಗೊಳಿಸಿ ತನ್ನ ಸೇನಾಬಲವನ್ನು ಬಹಳ ಹೆಚ್ಚಿಸಿಕೊಂಡ.

ಇರಾನಿನ ಸಫವೀ ಅರಸರು ಶಿಯಾಗಳಾಗಿದ್ದರು. ಹುಮಾಯೂನ್ ಅಲ್ಲಿಗೆ ಹೋ ಆಶ್ರಯ ಪಡೆದಿದ್ದ. ಅವರ ಸಹಾಯ ಪಡೆದು ಭಾರತದ ಮೇಲೆ ದಾಳಿ ನಡೆಸಲಿಚ್ಛಿಸಿ ಇರಾನ್‌ನ ಈ ಶಿಯಾ ಸಾಮ್ರಾಟರು ತಮ್ಮ ದೇಶದ ಸುನ್ನಿ ಪ್ರಜೆಗಳಿಗೆ ಕಿರುಕ ಕೊಡುತ್ತಿದ್ದರು. ಮಾರ್ಗದಲ್ಲಿ ಹಜ್ಜ್‌ಗೆ ಹೋಗುವವರನ್ನೂ ಸತಾಯಿಸುತ್ತಿದ್ದರು. ಇರಾನಿ ಈ ವರ್ತನೆಗಳಿಂದ ಶೇರ್‌ಷಾಹನೂ ಬೇಸತ್ತಿದ್ದ. ತುರ್ಕಿಯ ಸುಲ್ತಾನನೂ ಅಷ್ಟೆ. ಏಕೆಂ ಪವಿತ್ರ ಮಕ್ಕಾ ಮತ್ತು ಮದೀನಾಗಳ ರಕ್ಷಣೆಯ ಹೊಣೆ ಆ ಸಮಯದಲ್ಲಿ ತುರ್ಕರದ್ದಾಗಿ ಅವರ ನೇತೃತ್ವದಲ್ಲೇ ಹಜ್ಜ್‌ನ ಕಡ್ಡಾಯ ಕರ್ಮವು ನಿರ್ವಹಿಸಲ್ಪಡುತ್ತಿತ್ತು. ಶೇರ್‌ಶಾಹ ಆಗ್ರಾದ ಪ್ರಸಿದ್ಧ ಹದೀಸ್ ಪಂಡಿತ ಮೌಲಾನಾ ರಫೀಉದ್ದೀನ್ ಶಿರಾಝೀಯವರ ರಾಯಭಾರಿಯಾಗಿಸಿ ತುರ್ಕಿಯ ರಾಜನಲ್ಲಿಗೆ ಕಳಿಸ ಬಯಸಿದ. ಎರಡು ಪವಿತ್ರ ನಗರ ಪೈಕಿ ಯಾವುದಾದರೂ ಒಂದರ ಸೇವೆಯ ಅವಕಾಶ ತಮಗೆ ಒಪ್ಪಿಸಬೇಕು ಮ ಇರಾನಿಯರನ್ನು ಇಕ್ಕೆಡೆಗಳಿಂದ ಸುತ್ತುವರಿದು ಅವರ ಶಕ್ತಿ ಮುರಿಯಬೇಕು ಎಂಬುದೇ ಅ ಉದ್ದೇಶವಾಗಿತ್ತು. ಆದರೆ ಮರಣವು ಅದಕ್ಕೆ ಕಾಲಾವಕಾಶ ನೀಡಲಿಲ್ಲ. ಆತನ ಈ ಯೋ ಪೂರ್ಣಗೊಳ್ಳಲಿಲ್ಲ. ಆತ ಒಂದು ಸಾಗರ ಸೇನೆಯನ್ನೂ ನಿರ್ಮಿಸುವ ಇರಾದೆ ಹೊಂದಿ

ಶೇರ್‌ಷಾಹನ ಚಾರಿತ್ರ್ಯ

ಶೇರ್‌ಶಾಹ್‌ನ ಚಾರಿತ್ರ್ಯ ಮತ್ತು ಮಹತ್ಸಾಧನೆಯಿಂದ ತಿಳಿದು ಬರುವುದೇನೆಂ ಅವನಿಗೆ ಅಲ್ಲಾಹನು ಅಪ್ರತಿಮ ಬುದ್ಧಿ, ವಿವೇಕ, ಶೌರ್ಯ, ಪರಾಕ್ರಮ, ಆಡಳಿತ ಸಾಮರ್ಥ ಮತ್ತು ಕ್ರಿಯಾಶಕ್ತಿ ನೀಡಿದ್ದ. ಅವುಗಳನ್ನು ಆದಷ್ಟು ದೇವನಿಚ್ಛೆಯಂತೆ ಬಳಸಿದ. ಆಗ ಮಾತ್ರ ಮನೆಯಿಂದ ಹೊರಹಾಕಲ್ಪಟ್ಟ, ಅತ್ಯಂತ ದಾರಿದ್ರ್ಯದ ಸ್ಥಿತಿಯಲ್ಲಿ ಬಡ ವಿದ್ಯಾರ್ಥಿಗಳೊಂ ವಿದ್ಯೆ ಗಳಿಸಿದ ಓರ್ವ ಯುವಕ ಮೊಗಲರನ್ನು ಒದ್ದೋಡಿಸಿ ದೇಶದಲ್ಲಿ ಒಂದು ಉತ್ತ ವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಗೆಲುವು ಕಂಡಿದ್ದ.

ಆತ ಉತ್ತಮ ಆಡಳಿತಗಾರ ಮತ್ತು ಮುತ್ಸದ್ದಿ ಮಹಾ ದಂಡನಾಯಕನಾಗಿ ವುದರೊಂದಿಗೇ ಹಿರಿಯ ವಿದ್ವಾಂಸ ಮತ್ತು ತತ್ವನಿಷ್ಠ ವ್ಯಕ್ತಿಯಾಗಿದ್ದ. ಆತನ ಬದುಕು ಸ ಮತ್ತು ಪಾವನವಾಗಿತ್ತು. ಆತ ತನ್ನ ಸಚ್ಚಾರಿತ್ರ್ಯ ಮತ್ತು ಸದ್ಗುಣಗಳಿಂದಾಗಿ ಪ್ರಜೆಗಳ ಮ ಅಧಿಕಾರಿಗಳೆಲ್ಲರ ಪ್ರೀತಿಪಾತ್ರನಾಗಿದ್ದ.

ಒಮ್ಮೆ ಆತ ಪ್ರವಾದಿವರ್ಯರನ್ನೂ(ಸ) ಸ್ವಪ್ನದಲ್ಲಿ ಕಂಡಿದ್ದ. ಆಗ ಪ್ರವಾದಿ ಆತನೊಂದಿಗೆ ಹೇಳುತ್ತಿದ್ದರು 'ಕೆಲವು ಅವಧಿಗಾಗಿ ಅಲ್ಲಾಹನು ಭಾರತ ದೇಶವನ್ನು ವಶಕ್ಕೊಪ್ಪಿಸುವನು. ನೋಡು, ಆಡಳಿತ ಸಿಕ್ಕಿದಾಗ ಅಲ್ಲಾಹನ ಈ ಭೂಮಿಯನ್ನು ನ್ಯಾಯದಿ ತುಂಬಬೇಕು ಮತ್ತು ಅದನ್ನು ಸಮೃದ್ಧಗೊಳಿಸಲು ಪ್ರಯತ್ನಿಸಬೇಕು.'

ಪ್ರವಾದಿಯ(ಸ) ಈ ಮಾತನ್ನು ಆತ ಯಾವಾಗಲೂ ನೆನಪಿನಲ್ಲಿಟ್ಟು ದೇಶವ ನ್ಯಾಯದಿಂದ ತುಂಬಿದ. ಗೊಂದಲ, ಕ್ಷೋಭೆ, ದೌರ್ಜನ್ಯ, ಹಿಂಸೆ, ಅಶ್ಲೀಲತೆ ಮ ಕೆಡುಕುಗಳನ್ನು ನಿರ್ಮೂಲನಗೊಳಿಸಿದ. ದೇಶದಿಂದ ಅಜ್ಞಾನ ಮತ್ತು ಅನಕ್ಷರತೆಯ

ರಗೊಳಿಸಿದ. ಸೈನಿಕರ ಮೇಲೆ ತೀವ್ರ ನಿಗಾ ಇರಿಸಿ ಅವರ ಪ್ರಾಬಲ್ಯದಿಂದ ಪ್ರಜೆಗಳನ್ನು ಕ್ಷಿತಗೊಳಿಸಿದ. ಖಜಾನೆಯ ಬಹುದೊಡ್ಡ ಭಾಗವನ್ನು ಪ್ರಜೆಗಳ ಕ್ಷೇಮಾಭ್ಯುದಯ, ಣ, ಕಲೆಗಳ ಪ್ರಗತಿ, ಬಡವರು ಮತ್ತು ನಿರ್ಗತಿಕರಿಗೆ ನೆರವು ಹಾಗೂ ಜನಕಲ್ಯಾಣ ರ್ಯಗಳಲ್ಲಿ ವ್ಯಯಿಸಿದ. ಆತನ ಉತ್ತಮ ಆಡಳಿತ ವ್ಯವಸ್ಥೆಯಿಂದಾಗಿ ಬಾಹ್ಯ ಆಕ್ರಮಣಗಳ ಯ ತೊಲಗಿತು. ಇವೆಲ್ಲದರ ಒಟ್ಟು ಪರಿಣಾಮವಾಗಿ ದೇವನ ದಾಸರಿಗೆ ಶಾಂತಿ, ನೆಮ್ಮದಿ ಪ್ತಿ ಸುಖ ಸಮೃದ್ಧಿ ಪ್ರಾಪ್ತವಾಯಿತು. ತಮ್ಮ ಕರ್ತವ್ಯಗಳನ್ನು ಸರಿಯಾಗಿ ಅರಿತು ಅದನ್ನು ವೇರಿಸಲು ಪ್ರಯತ್ನಿಸಿದ. ಭಾರತದ ಎಣಿಕೆಯ ಅರಸರಲ್ಲಿ ಶೇರ್‌ಶಾಹ್ ಒಬ್ಬರೆಂಬುದರಲ್ಲಿ ದೇಹವಿಲ್ಲ. ಆತ ತನ್ನ ಪೂರ್ವದ ಆಡಳಿತಗಾರರ ಅನುಭವಗಳಿಂದ ಪ್ರಯೋಜನ ಪಡೆದ. ಮಹತ್ಕಾರ್ಯಗಳಿಂದ ಇತಿಹಾಸದ ದಿಕ್ಕನ್ನು ಬದಲಿಸಿದ. ಅಲ್ಲಾಹನು ಕೆಲವೇ ದಿನಗಳಿಗಾಗಿ ಗೆ ಈ ದೇಶದ ವ್ಯವಸ್ಥೆಯನ್ನು ಒಪ್ಪಿಸಿದ. ಆದರೆ ಈ ಅಲ್ಪಾವಧಿಯಲ್ಲೂ ತನ್ನ ಶೌರ್ಯ ತ್ತಿ ಪರಿಶ್ರಮಗಳಿಂದ ದೇಶದ ವ್ಯವಸ್ಥೆಯನ್ನು ಸರಿದಾರಿಗೆ ತಂದಿದ್ದ. ಅದರಿಂದ ಆತನ ರದ ಆಡಳಿತಗಾರರು ಬಹಳ ಕಾಲದವರೆಗೆ ಪ್ರಯೋಜನ ಪಡೆದರು. ಇಂದಿಗೂ ಅದರ ಗಳು ಮರೆಯಾಗಿಲ್ಲ. ಅಲ್ಲಾಹನು ಆತನಿಗೆ ಸತ್ಫಲ ನೀಡಲಿ.


್‌ಷಾಹ್‌ನ ಉತ್ತರಾಧಿಕಾರಿ

ಶೇರ್‌ಷಾಹನ ಅನಿರೀಕ್ಷಿತ ಮರಣದಿಂದಾಗಿ ಸರದಾರರು ಆತನ ಕಿರಿಯ ಮಗ ಲ್‌ಖಾನ್‌ನನ್ನು ಗದ್ದುಗೆಯಲ್ಲಿ ಕುಳ್ಳಿರಿಸಿದರು. ಆತ ಇಸ್ಲಾಮ್ ಶಾಹ್ ಎಂಬ ದು ಗಳಿಸಿದ. ಆದರೆ ಜನಸಾಮಾನ್ಯರಲ್ಲಿ ಸಲೀಮ್ ಷಾಹ್ ಎಂಬ ಹೆಸರಿನಲ್ಲಿ ಖ್ಯಾತನಾದ. ಸಲೀಮ್ ಶಾಹ್ ತನ್ನ ಹಿರಿಯ ಸೋದರನಿಗಿಂತ ಅರ್ಹನಾಗಿದ್ದ. ಕುತನ, ಗಾಂಭೀರ್ಯ ಮತ್ತು ಆಡಳಿತ ಸಾಮರ್ಥ್ಯದಲ್ಲಿ ತನ್ನ ತಂದೆಯ ಉತ್ತರಾಧಿಕಾರಿ ಗಿದ್ದ. ಆತ ಶೇರ್‌ಷಾಹ್‌ನ ವ್ಯವಸ್ಥೆಯನ್ನು ಯಥಾಸ್ಥಿತಿಯಲ್ಲಿರಿಸಿದ. ರಕ್ಷಣೆ ಮತ್ತು ರ್ಮಾಣ ಕಾರ್ಯಗಳನ್ನು ಮುಂದುವರಿಸಿದ. ಛತ್ರ ಮತ್ತು ನಿರ್ಗತಿಕರ ಭವನಗಳ ಾಣವನ್ನು ದ್ವಿಗುಣಗೊಳಿಸಿದ. ಹಳೆಯ ಕೋಟೆಗಳನ್ನು ದುರಸ್ತಿಗೊಳಿಸಿದ. ಹೊಸಹೊಸ ಟೆಗಳನ್ನು ನಿರ್ಮಿಸಿದ. ಸರಕಾರೀ ಕಾನೂನು ಕಟ್ಟಳೆಗಳನ್ನು ಪುಸ್ತಕ ರೂಪದಲ್ಲಿ ದಿಸಿದ. ಅದರ ಪ್ರತಿಗಳನ್ನು ಎಲ್ಲ ಜಿಲ್ಲೆಗಳಿಗೆ ಕಳಿಸಿದ. ಶುಕ್ರವಾರದ ದಿನ ಅಲ್ಲಿ ಯೊಂದನ್ನು ನಡೆಸಿ ಎಲ್ಲ ಅಧಿಕಾರಿಗಳಿಗೆ ಈ ಪುಸ್ತಕ ಓದಿ ಕೇಳಿಸಲಾಗುತ್ತಿತ್ತು. ಣ ಅಧಿಕಾರದ ಅಮಲು ಅವನನ್ನು ಭ್ರಾಂತಗೊಳಿಸಿತು. ಆತ ಸರದಾರರು ಮತ್ತು ಾರಿಗಳೊಂದಿಗೆ ಒರಟಾಗಿ ವರ್ತಿಸತೊಡಗಿದ. ಅವರನ್ನು ಅಗೌರವದಿಂದ ಕಾಣತೊಡಗಿದ. ಮುಂದುವರಿದು ಶುಕ್ರವಾರದ ಸಭೆಗಳಲ್ಲಿ ಸಲೀಮ್‌ಷಾಹನ ಚಪ್ಪಲಿಗಳನ್ನು ಎತ್ತರದ ಯಲ್ಲಿ ಕುರ್ಚಿಯಲ್ಲಿಡಬೇಕು ಮತ್ತು ಪಾಲ್ಗೊಳ್ಳುವವರು ಈ ಚಪ್ಪಲಿಗಳನ್ನು ವಂದಿಸ ಎಂದು ಆದೇಶಿಸಿದ. ಸೈನ್ಯದೊಂದಿಗೂ ಅವಿವೇಕತನದ ವರ್ತನೆ ನಡೆಯತೊಡಗಿತು. ಆತ ಕಾಲಾಳು ಸೈನ್ಯವನ್ನು ಎತ್ತು ಮತ್ತು ಎಮ್ಮೆಗಳ ಜಾಗದಲ್ಲಿ ಸಾಮಾನು

ತುಂಬಿದ ಗಾಡಿಗೆ ಜೋಡಿಸಿ ಅವರ ಮೂಲಕ ಲಾಹೋರ್ ತನಕ ತೋಪುಗಳನ್ನು ಎಳೆ ಒಟ್ಟಾರೆ ದಿನಗಳೆದಂತೆ ಅವನ ಕಠೋರತೆ ಮತ್ತು ಅಹಂಕಾರ ಹೆಚ್ಚುತ್ತಲೇ ಹೋಯಿ ಪರಿಣಾಮವಾಗಿ ಜನರೆಲ್ಲರೂ ಆತನ ಕೆಟ್ಟ ವರ್ತನೆಯಿಂದ ಅಸಂತುಷ್ಟರಾದರು. ವಿಶೇಷ ಇಂತಹ ಪ್ರಬಲ ವ್ಯವಸ್ಥೆಯ ಸ್ಥಾಪನೆಯಲ್ಲಿ ಯಾವ ಅಫಘಾನ್ ಸರದಾರರು ಶೇರ್‌ಷಾಹ ನೆರವಾಗಿದ್ದರೋ ಅವರೇ ಈಗ ಸಲೀಮ್ ಷಾಹನನ್ನು ಮುಗಿಸಲು ಮುಂದಾದರು. ಅ ವಿರುದ್ಧ ಒಳಸಂಚು ಮತ್ತು ಬಂಡಾಯ ಆರಂಭಿಸಿದರು. ಅರಸನ ಮೇಲೆ ಮಾರಣಾ ಹಲ್ಲೆ ನಡೆಸಿದರು. ಈಗ ಸಲೀಮ್ ಷಾಹನ ಕಠೋರತೆ ಇನ್ನೂ ವೃದ್ಧಿಸಿತು. ದೊಡ್ಡ ದೊ ಅನುಭವಿ ಅಧಿಕಾರಿಗಳು ಕೊಲ್ಲಲ್ಪಟ್ಟರು. ಅವರ ಸ್ಥಾನದಲ್ಲಿ ಅನನುಭವಿ ಮತ್ತು ಭಟ್ಟ ಜನರು ನೇಮಕಗೊಂಡರು. ಸಲೀಮ್ ಶಾಹನ ಬದುಕಿನಲ್ಲಿ ಬಂಡಾಯಗಾರರಿಗೆ ಯಶ ಸಿಗಲಿಲ್ಲವಾದರೂ ಒಳಗೊಳಗೆ ಶಿಲಾರಸ ಕುದಿಯುತ್ತಿತ್ತು. ಕ್ರಿ.ಶ. 1554ರಲ್ಲಿ ಸಲೀ ಷಾಹ್ ಮರಣವನ್ನಪ್ಪುವುದರೊಂದಿಗೇ ಇಡಿಯ ವ್ಯವಸ್ಥೆಯು ಅಸ್ತವ್ಯಸ್ತಗೊಂಡಿತು.

ಗುಜರಾತ್‌ನಿಂದ ಆಗ್ರಾಕ್ಕೆ ಬಂದರು. ಇಲ್ಲಿಯೂ ಜ್ಞಾನ, ಕಲೆ, ದೇವಭಕ್ತಿ ಮತ ಧರ್ಮನಿಷ್ಠೆಯಲ್ಲಿ ಬಹಳ ಪ್ರಸಿದ್ಧರಾದರು. ತನಗೊಂದು ಸ್ಥಾನ ನಿರ್ಮಿಸಿಕೊಂಡರ ಸಲೀಮ್ ಷಾಹ್ ಸೂರಿಯ ಕಾಲವಾಗಿತ್ತದು. ಮಖ್‌ದೂಮ್ ಮಲಿಕ್‌ನ ಪ್ರಭಾ ನಡೆದಿತ್ತು. ವಿದ್ವಾಂಸ ಮತ್ತು ನಾಯಕರೇ ಅಲ್ಲ, ಅರಸ ಮತ್ತು ಸರದಾರರು ಕೂಡ ಆತನಿ ಅಧೀನರಾಗಿದ್ದರು. ಧಾರ್ಮಿಕ ವಿಷಯದಲ್ಲಿ ಅವರ ಧರ್ಮಶಾಸ್ತ್ರ ವಿಧಿ ನಿರ್ಣಾಯಕ ಮತ ಸ್ಥಿರವೆಂದು ಪರಿಗಣಿಸಲ್ಪಡುತ್ತಿತ್ತು. ಇದು ಮುಲ್ಲಾಮುಬಾರಕ್‌ನಿಗೆ ಬಹಳ ಅರೋಚಕವಾಗಿತ್ತ ಆತ ತನ್ನ ಕ್ಷೇತ್ರದಲ್ಲಿ ಮಖ್‌ದೂಮ್ ಮಲಿಕ್‌ನ ಧರ್ಮಶಾಸ್ತ್ರ ವಿಧಿ ಮತ್ತು ಅವ ಖಾಸಗಿ ದೌರ್ಬಲ್ಯಗಳನ್ನು ಟೀಕಿಸುತ್ತಿದ್ದ. ಶೈಖ್ ಅಲಾಯಿಯ ವಿಷಯದಲ್ಲೂ ಮುಲ ಮುಬಾರಕ್ ಭಯಭೀತನಾಗಿಯೇ ಅವರ ತೀರ್ಮಾನವನ್ನು ವಿರೋಧಿಸಿದ. ಮಖ್‌ದೂಮ ಮಲಿಕ್ ಇದನ್ನೆಲ್ಲ ಸಹಿಸಲು ಹೇಗೆ ಸಾಧ್ಯವಿತ್ತು. ಆತ ಅವರ ಹಿಂದೆ ಬಿದ್ದ ಸಲೀಮ್‌ಷಾಹ್‌ನ ನಂತರ ಅಕ್ಬರ್‌ನ ಆಡಳಿತ ಕಾಲ ಬಂತು. ಮಖ್‌ದೂಮ್ ಮಲಿ ಎಂದಿನಂತೆ ಮುಲ್ಲಾನ ವಿರುದ್ಧ ಆತನಲ್ಲಿ ಚಾಡಿ ಹೇಳಿದ. ಮೆಹ್ದವಿ ಆಂದೋಲನ ಮತ ಕೆಟ್ಟ ನಂಬಿಕೆಯಲ್ಲದೆ ಹೇಮೂನೊಂದಿಗೆ ಒಳಸಂಚಿನ ಆರೋಪವನ್ನೂ ಹೊರಿಸಿ ಆರಕ್ಷಕರು ಬಂಧಿಸಲು ಹೋದರು. ಆದರೆ ಮುಲ್ಲಾ ಕಣ್‌ತಪ್ಪಿಸಿ ಓಡಿಹೋದ. ಮ ಮಂದಿಯೊಂದಿಗೆ ವರ್ಷಗಟ್ಟಲೆ ಅಲ್ಲಲ್ಲಿ ಅಲೆದಾಡಿದ. ಪ್ರಭುತ್ವದ ಕೋಪ ಮತ ದೇಶಭ್ರಷ್ಟತೆಯ ಈ ಅವಧಿಯಲ್ಲಿ ಅವರು ಬಹಳಷ್ಟು ಹಿಂಸೆಗಳನ್ನು ಅನುಭವಿಸಬೇಕಾ ಬಂತು. ಈ ಎಲ್ಲವೂ ಮಖ್‌ದೂಮ್ ಮಲಿಕ್‌ನ ಒಳಸಂಚಿನ ಪರಿಣಾಮವಾಗಿತ್ತಷ್ಟೆ ಆದ್ದರಿಂದ ಮುಲ್ಲಾ ಮತ್ತವರ ಕುಟುಂಬದ ಮನಸ್ಸಿನಲ್ಲಿ ಮಖ್‌ದೂಮ್ ಮಲಿಕ್ ವಿರುದ್ಧ ಅಸೂಯೆ, ವೈರ ಮತ್ತು ತಿರಸ್ಕಾರದ ಬೆಂಕಿ ಪ್ರಜ್ವಲಿಸ ತೊಡಗಿತು. ಕೊನ

ುಯಕನೊಬ್ಬನ ಶಿಫಾರಸಿನಿಂದಾಗಿ ಮರಣ ದಂಡನೆಯಿಂದ ಮುಕ್ತನಾದ. ಬಡಪಾಯಿ ುಲ್ಲಾ ಬಿಡುಗಡೆ ಹೊಂದಿದ.

ಮುಲ್ಲಾನ ಇಬ್ಬರು ಮಕ್ಕಳು ಅಬುಲ್ ಫಝಲ್ ಮತ್ತು ಫೈಝಿಯೂ ತಂದೆಯಂತೆ ಹಳ ಬುದ್ಧಿವಂತ, ಜ್ಞಾನ ಮತ್ತು ಸಾಹಿತ್ಯದಲ್ಲಿ ಬಹಳ ಉನ್ನತ ಸ್ಥಾನ ಹೊಂದಿದ್ದರು. ೈಝಿಯಂತು ವಿದ್ವಾಂಸನಾಗಿರುವುದರೊಂದಿಗೆ, ಫಾರ್ಸಿಯ ಬಹುದೊಡ್ಡ ಕವಿಯಾಗಿದ್ದ. ತ ಅಕ್ಬರನ ಪ್ರಶಂಸೆಯಲ್ಲಿ ಒಂದು ಮಹಾಕಾವ್ಯವನ್ನು ರಚಿಸಿದ. ತನ್ನ ಕಾವ್ಯದಿಂದಾಗಿ ತ ಕ್ರಿ. ಶ. 1566ರಲ್ಲಿ ರಾಜನ ಆಸ್ಥಾನದಲ್ಲಿ ಸ್ಥಾನಗಿಟ್ಟಿಸಿದ. ಕ್ರಮೇಣ ಆತ ತನ್ನ ಂದೆ ಮತ್ತು ಸೋದರನಿಗಾಗಿಯೂ ರಂಗ ಸಜ್ಜುಗೊಳಿಸಿದ. ಅಬುಲ್ ಫಝಲ್ ಪ್ರಧಾನ ುಮಾಸ್ತನಾಗಿ ನೇಮಿಸಲ್ಪಟ್ಟ. ಮತ್ತೆ ಅರಸನ ಸಂಪ್ರೀತಿ ಗಳಿಸಿ ಟಿಪ್ಪಣಿಗಾರರಲ್ಲಿ ೇರಿಕೊಂಡ. ಪುತ್ರರ ಪರಿಚಯದಿಂದಾಗಿ ಮುಲ್ಲಾ ಮುಬಾರಕ್‌ನಿಗೂ ಆಸ್ಥಾನದಲ್ಲಿ ಹುದ್ದೆ ೂರೆಯಿತು.

ಅದು ಮಖ್‌ದೂಮ್ ಮಲಿಕ್ ಮತ್ತು ಹಿರಿಯ ನ್ಯಾಯಾಧೀಶರ ಅಸಾಮಾನ್ಯ ಸ್ತಕ್ಷೇಪದಿಂದಾಗಿ ಅಕ್ಬರ್ ಅವರಿಂದ ಅಸಂತುಷ್ಟನಾಗಿದ್ದ ಕಾಲವಾಗಿತ್ತು. ಈ ತಂದೆ ುಕ್ಕಳು ಇದನ್ನು ಸದವಕಾಶವೆಂದುಕೊಂಡರು. ಪ್ರತೀಕಾರದ ಆವೇಶದಲ್ಲಿ ಅವರ ವಿರುದ್ಧ ನ್ನೂ ಕೆರಳಿಸಿದರು. ಆಕಸ್ಮಿಕವೆಂಬಂತೆ ಜೋದಾಬಾಯಿಯ ಪುರೋಹಿತನ ಹತ್ಯೆಯು ಗ್ನಿಗೆ ತೈಲ ಸುರಿಯುವ ಕೆಲಸ ಮಾಡಿತು. ಅಕ್ಬರ್ ಮತ್ತೂ ಕೆರಳಿದ. ವಿದ್ವಾಂಸರ ಸೊಕ್ಕು ುರಿಯುವ ಬಗ್ಗೆ ಯೋಚಿಸತೊಡಗಿದ. ಮುಲ್ಲಾ ಮುಬಾರಕ್ ನ್ಯಾಯಾಧೀಶನ ಮುದ್ರಿತ ತ್ರ ತಯಾರಿಸಿ ಈ ಕಾರ್ಯವನ್ನು ಇನ್ನೂ ಸುಲಭಗೊಳಿಸಿದ. ಆಸ್ಥಾನಿಕ ವಿದ್ವಾಂಸರಿಂದ ಲವಂತದಿಂದ ಸಹಿ ಪಡೆಯಲಾಯಿತು. ಈ ರೀತಿ ಅಕ್ಬರ್‌ನಿಗೆ ನ್ಯಾಯಾಧೀಶ ಮತ್ತು ುಕಾಲೀನ ಸಂಶೋಧಕನೆಂಬ ಪದವಿ ದೊರೆಯಿತು. ಪ್ರತೀಕಾರದ ಆವೇಶ ಮತ್ತು ಧಿಕಾರದ ಕುರ್ಚಿಯು ಈ ತಂದೆ ಮಕ್ಕಳನ್ನು ಎಷ್ಟು ಅಂಧರನ್ನಾಗಿಸಿತೆಂದರೆ ಅವನ ುದ್ರಿತ ಪತ್ರದ ಪರಿಣಾಮದ ಬಗ್ಗೆಯೂ ಯೋಚಿಸಲಿಲ್ಲ. ಮಖ್‌ದೂಮ್ ಮಲಿಕ್ ುತ್ತು ಹಿರಿಯ ನ್ಯಾಯಾಧೀಶರು ಮಕ್ಕಾ ಮದೀನಾವನ್ನೊಳಗೊಂಡ ಪ್ರದೇಶಕ್ಕೆ ನಾನಿಸಲ್ಪಟ್ಟರು. ಅಕ್ಬರನಿಗೆ ಇಷ್ಟ ಬಂದಂತೆ ವರ್ತಿಸಲು ಮುಕ್ತ ಅವಕಾಶ ದೊರೆಯಿತು. ವಿಧ ನವೀನಾಚಾರಗಳು ಜಾರಿಗೆ ಬರತೊಡಗಿದವು. ಎಲ್ಲದರಲ್ಲೂ ಈ ತಂದೆ ಮಕ್ಕಳು ತವಾದರು. ಧಾರ್ಮಿಕ ವಿಷಯಗಳಲ್ಲಿ ಈಗ ಈ ಜನ ಅರಸನ ಸಲಹೆಗಾರರಾಗಿದ್ದರು. ಜನರೇ ಒಂದು ಹೊಸ ಧರ್ಮ ನಿರ್ಮಿಸಲು ಮಾರ್ಗ ತೋರಿದರು. ಅಬುಲ್ ಝಲನು ದೀನೆ ಇಲಾಹಿಯ ಧಾರ್ಮಿಕ ನಂಬಿಕೆಗಳು ಮತ್ತು ಕಾನೂನು ನಿಯಮಗಳನ್ನು ಕಿಸಿದ. ಈ ಹೊಸ ಧರ್ಮದ ಪ್ರಥಮ ಮುಖ್ಯಸ್ಥನಾಗಿ ಬಿಟ್ಟ.


ಅಬುಲ್ ಫಝಲ್ ಮತ್ತು ಫೈಝೀಯವರಂತು ಆರಂಭದಿಂದಲೂ ಸ್ವತಂತ್ರ ುಮದವರಾಗಿದ್ದರು. ಎಲ್ಲಾ ವಿಷಯಗಳಲ್ಲಿ ಅರಸನ ಮಾತಿಗೆ ತಲೆಯಲ್ಲಾಡಿಸುವುದೇ ವರ ಧರ್ಮವಾಗಿತ್ತು. ಮುಲ್ಲಾ ಮುಬಾರಕ್ ಮೊದಲು ಧರ್ಮನಿಷ್ಠ ಮತ್ತು ಶುಚಿತ್ವದಲ್ಲಿ

ಪ್ರಸಿದ್ಧ ಹಾಗೂ ಗಾನದ ವಿರೋಧಿಗಳಾಗಿದ್ದರು. ಎಲ್ಲಿಯವರೆಗೆಂದರೆ ವಾದ್ಯ ಮ ಹಾಡಿನ ಧ್ವನಿಗೆ ಕಿವಿ ಮುಚ್ಚಿಕೊಳ್ಳುತ್ತಿದ್ದರು. ವೃದ್ಧಾಪ್ಯದಲ್ಲಿ ಅವರ ಸ್ಥಿತಿ ಹೇಗಾಯಿತೆಂ ದಿನದ ಹೆಚ್ಚಿನ ಸಮಯವನ್ನು ಸಂಗೀತ ಆಲಾಪನೆಯಲ್ಲೇ ಕಳೆಯತೊಡಗಿದರು. ಕೊ ಇದೇ ಸ್ಥಿತಿಯಲ್ಲಿ ಕ್ರಿ.ಶ. 1593ರಲ್ಲಿ ಮುಲ್ಲಾ ಮುಬಾರಕ್ ತೀರಿಕೊಂಡರು. 2ವರ್ಷ ನಂತರ ಕ್ರಿ. ಶ. 1595ರಲ್ಲಿ ಫೈಝಿಯೂ ದೀರ್ಘ ಮತ್ತು ಕಷ್ಟಕರ ಅನಾರೋಗ್ಯದ ನಂ ಅಗಲಿದರು. ಆತನ ಚುಕ್ಕೆರಹಿತ ವ್ಯಾಖ್ಯಾನ ಗ್ರಂಥ ಪ್ರಖ್ಯಾತವಾಗಿದೆ.

ಪ್ರತಿರೋಧ ಮತ್ತು ಅಬುಲ್ ಫಝುಲ್‌ನ ಹತ್ಯೆ

ದುಷ್ಟ ವಿದ್ವಾಂಸರು ಮತ್ತು ಟಿಪ್ಪಣಿಗಾರ ಆಸ್ಥಾನಿಕರು ಅಕ್ಬರನ ಪಥಭ್ರಷ್ಟತೆ ವ್ಯವಸ್ಥೆ ಮಾಡಿದರೆಂಬುದರಲ್ಲಿ ಅನುಮಾನವಿಲ್ಲ. ಆತನ ಪ್ರತಿಯೊಂದು ಕೆಟ್ಟ ನಡತೆಯನ ಇವರು ಬೆಂಬಲಿಸುತ್ತ ಹೋದರು. ಆದರೆ ದೇಶವು ಆತನನ್ನು ಸುಖಿಯಾಗಿರಲು ಬಿಡಲಿ ಅದರಲ್ಲಿ ಬಹಳಷ್ಟು ಧಾರ್ಮಿಕ ವಿದ್ವಾಂಸರು ಮತ್ತು ಪ್ರಭಾವಿ ನಾಯಕರಿದ್ದರು. ಅವ ಆತನ ಈ ವರ್ತನೆಗಳನ್ನು ಇಷ್ಟಪಡುತ್ತಿರಲಿಲ್ಲ. ಈ ಗಣ್ಯರು ತೀವ್ರವಾಗಿ ವಿರೋಧಿಸಿದ ಪ್ರತಿಯೊಂದು ಕೆಟ್ಟ ನಡತೆಯ ಬಗ್ಗೆ ಆತನನ್ನು ತಡೆದರು. ತಿಳಿ ಹೇಳಿದರು. ಕೆ ನಡತೆಯಿಂದ ದೂರವಿರಿಸಲು ಸಾಧ್ಯವಾದ ಪ್ರಯತ್ನ ಮಾಡಿದರು. ಆದರೆ ಅಕ್ಬರ್ ತ ಅಜ್ಞಾನ ಮತ್ತು ದೂರಗಾಮಿ ಪರಿಣಾಮದ ಅರಿವಿಲ್ಲದ ಕಾರಣ ನಿರ್ಲಕ್ಷಿಸಿದ. ಮಾತ್ರವ ದರ್ಪದಿಂದ ಕೆಲವರನ್ನು ಹತ್ಯೆ ಮಾಡಿಸಿದ. ಆದರೆ ಈ ಗಣ್ಯರ ಪ್ರಯತ್ನ ಪರಿಣಾಮವಾಗಿ ಅಕ್ಬರನ ನವೀನಾಚಾರ ಮತ್ತು ಪಥಭ್ರಷ್ಟತೆಗಳು ದೇಶದ ವ್ಯಾಪಿಸದಂತಾಯಿತು. ಕೇಸರಿ ಉಡುಪು ಧರಿಸಿದುದಕ್ಕೆ ಶೈಖ್ ಅಬ್ದುನ್ನಬೀ ತುಂಬ ದರಬಾರಿನಲ್ಲಿ ವಿರೋಧಿಸಿದ ವಿಚಾರ ಈ ಹಿಂದೆ ಬಂದಿದೆ. ಮುಸ್ಲಿಮೇತರ ಪ್ರಭಾವದಿ ಮಹಲು ಮತ್ತು ದರಬಾರಿನ ಬಣ್ಣ ಬದಲಾದಾಗ ಆಸ್ಥಾನಿಕ ನಾಯಕರಾದ ಕುತುಬುದ್ದೀ ಖಾನ್ ಕೋಕಾ ಮತ್ತು ಶಹಬಾಝ್ ಖಾನ್ ಕಂಬ್ವಾ ಬಹಳ ಧೈರ್ಯದಿಂದ ಬಾದಶಾಹ ತಿಳಿ ಹೇಳಿದರು. ಆರಾಧನಾ ಭವನದ ಸಭೆಗಳಲ್ಲಿ ಇಸ್ಲಾಮ್ ಮತ್ತು ಇಸ್ಲಾವಿ ಪ್ರವಾದಿಯ ವಿರುದ್ಧ ಮಿಥ್ಯಾರೋಪ ಮಾಡಿದ ವಿಷಯ ತಿಳಿದಾಗ ಇಡೀ ದೇಶದ ವ್ಯಾಕುಲತೆ ವ್ಯಾಪಿಸಿಕೊಂಡಿತು. ಮುದ್ರಿತ ಪತ್ರದ ನಂತರ ಅಕ್ಬರನು ಶರೀಅ ಆದೇಶಗಳಲ್ಲಿ ಹಸ್ತಕ್ಷೇಪ ಮಾಡಲಾರಂಭಿಸಿದಾಗ ಜೋನ್‌ಪುರದ ಹಿರಿಯ ನ್ಯಾಯಾಧಿ ಮುಲ್ಲಾ ಮುಹಮ್ಮದ್ ಯಝ್‌ದೀ(ರ), ಅರಸ ಧರ್ಮಭ್ರಷ್ಟ ನಾದುದರಿಂದ ಆ ವಿರುದ್ಧ ಜಿಹಾದ್‌ನ ಬಹಿರಂಗ ಫತ್ವಾ ಹೊರಡಿಸಿದರು. ಅದನ್ನು ಬಂಗಾಳದ ಹಿರಿ ನ್ಯಾಯಾಧೀಶ ಮುಇಝ್ಝುಲ್ ಮಲಿಕ್ ಮತ್ತು ಇತರ ಅನೇಕ ಮಂದಿಯ ಅನುಮೋದಿಸಿದರು. ಈ ಗಣ್ಯರನ್ನೂ ಅಕ್ಬರ್ ಒಂದು ನೆಪ ಹೇಳಿ ಕರೆದು ಹತ್ಯೆಗೈದಿ ಆದರೆ ಆತನ ವಿರುದ್ಧ ದೇಶದಲ್ಲಿ ದ್ವೇಷದ ಬೆಂಕಿ ಆರುವ ಬದಲು ಇನ್ನೂ ಪ್ರಜ್ವಲಿಸಿ ಬಂಗಾಳ ಮತ್ತು ಬಿಹಾರಗಳಲ್ಲಿ ಭಾರೀ ಬಂಡಾಯ ನಡೆಯಿತು. ಜೋನ್‌ಪು

ಅಕ್ಬರನ ಕಾಲದಲ್ಲಿ ಭಾರತ (ಕ್ರಿ.ಶ. 1605)



ಜಾಗೀರುದಾರ ಖಾನ್ ಮಾಸೂಮ್ ಖಾನ್ ಮತ್ತು ಅಕ್ಬರ್‌ನ ಪ್ರಸಿದ್ಧ ವ
ಶಾಹ್‌ಮನ್ಸೂರ್ ಮುಂತಾದವರು ಆತನ ಕೆಟ್ಟ ನಂಬಿಕೆಯಿಂದ ಬೇಸತ್ತು ಆತನ ಸೋ
ಹಕೀಮ್ ಮಿರ್ಝಾನನ್ನು ಅರಸನನ್ನಾಗಿಸಲು ಪ್ರಯತ್ನಿಸಿದರು. ಅಕ್ಬರ್‌ನ ಮೊಲೆ
ಸಹೋದರ ಮತ್ತು ಅತ್ಯಂತ ಪ್ರಭಾವಿ ನಾಯಕ ಖಾನ್ ಆಝಮ್ ಆತನ ಪಥಭ್ರಷ್ಟ
ಬಗ್ಗೆ ಬಹಳವಾಗಿ ತಿಳಿಹೇಳಿದ. ಆದರೆ ಬಾದಶಾಹ್ ಕೇಳದಿದ್ದಾಗ ಕೋಪಗೊ
ಮಕ್ಕಾಕ್ಕೆ ತೆರಳಿದ. ಅಕ್ಬರ್‌ನ ಕೊನೆಯ ದಿನಗಳಲ್ಲಿ ಇಸ್ಲಾಮಿಸ್ಟ್ ನಾಯಕರು ಯ
ಅಧಿಕಾರಗಳನ್ನು ಗಳಿಸಿಕೊಂಡಿದ್ದರು. ಖ್ವಾಜಾ ಬಾಕೀ ಬಿಲ್ಲಾಹ್(ರ), ಶೈಖ್ ಅಬ
ಮುಹದ್ದಿಸ್ ದೇಹಲವಿ(ರ) ಮತ್ತು ಮುಜದ್ದಿದ್ ಅಲ್ಫಸಾನಿ(ರ) ಮುಂತಾ
ಪ್ರಭಾವದಿಂದ ಬಹಳಷ್ಟು ನಾಯಕರು ಪರಿಸ್ಥಿತಿಯ ಸುಧಾರಣೆಯ
ಚಿಂತಿಸತೊಡಗಿದ್ದರು. ಈ ಇಸ್ಲಾಮಿಸ್ಟ್ ನಾಯಕರಲ್ಲಿ ಶೈಖ್ ಫರೀದ್ ರ
ಕಲೀಜ್‌ಖಾನ್ ಮುಂತಾದವರು ಉನ್ನತ ಸ್ಥಾನಮಾನ ಗಳಿಸಿಕೊಂಡಿದ್ದರು. ಅಬ್ದುರ್ರಹಿ
ಖಾನ್ ಖಾನಾನ್ ನಂತಹ ಸ್ವತಂತ್ರ ವಿಧಾನದ ಅಧಿಕಾರಿಯೂ ಖ್ವಾಜಾ
ಬಿಲ್ಲಾಹ್‌ರೊಂದಿಗಿನ(ರ) ನಂಬಿಕೆಯಿಂದಾಗಿ ಈಗ ಇಸ್ಲಾಮ್ ಪ್ರಿಯ
ಧ್ವನಿಯಾಗಿಬಿಟ್ಟಿದ್ದ. ರಾಜಕುಮಾರ ಸಲೀಮ್‌ನ ಸಹಾನುಭೂತಿಯೂ
ಗುಂಪಿನೊಂದಿಗಿತ್ತು. ಅಬುಲ್‌ಫಝ್ಲ್ ಆಗಲೂ ಜೀವಂತವಿದ್ದ. ಇಸ್ಲಾಮ್
ಜನರು ಆತನನ್ನು ಕಿಡಿಗೇಡಿತನದ ಮೂಲವೆಂದು ಭಾವಿಸಿದ್ದರು. ಸುಧಾರಣೆಯ ನಿಟ್ಟಿ
ಅವನನ್ನು ಅಕ್ಬರ್‌ನ ಸಂಗದಿಂದ ದೂರಗೊಳಿಸ ಬಯಸಿದ್ದರು. ಸುದೈವವೆಂಬಂತೆ
ಈ ಆಕಾಂಕ್ಷೆ ಕೈಗೂಡಿತು. ಅಬ್ದುಲ್ ರಹೀಮ್ ಖಾನ್ ಖಾನಾನ್ ದಕ್ಷಿಣದ ದಾ
ನೇಮಕಗೊಂಡಾಗ ಆತ ತನ್ನ ಸಹಾಯಕ್ಕಾಗಿ ಅಬುಲ್ ಫಝ್ಲ್‌ನನ್ನು ಕಳಿಸ
ಕೇಳಿಕೊಂಡ. ಅಕ್ಬರ್ ಒಪ್ಪಿಗೆ ನೀಡಿದ. ಖಾನ್ ಖಾನಾನ್ ಆತನನ್ನು ದಕ್ಷಿ
ನಿಲ್ಲಿಸಿ ಬಹಳ ಪೀಡಿಸಿದ. ಅಬುಲ್‌ಫಝ್ಲ್ ಬಹಳಷ್ಟು ದೂರು ಪತ್ರಗಳನ್ನು ಬ
ಆದರೆ ಯಾವುದೂ ಅರಸನ ತನಕ ತಲುಪಲಿಲ್ಲ. ಇತ್ತ ರಾಜಕುಮಾರ ಸಲಿ
ಬಂಡಾಯವೆದ್ದು ಅಲಾಹಾಬಾದ್‌ನಲ್ಲಿ ತನ್ನ ಸ್ವಯಮಾಧಿಕಾರವನ್ನು ಘೋಷಿಸಿದ. ಏ
ಪ್ರಭಾವಶಾಲಿ ವಿದ್ವಾಂಸರ ಒಳ್ಳೆಯ ಸಂಖ್ಯೆಯು ಅಕ್ಬರ್‌ನ ಧಾರ್ಮಿಕ ವಿಚಾರಗಳ
ದ್ವೇಷ ಮತ್ತು ರಾಜಕುಮಾರ ಸಲೀಮ್‌ನೊಂದಿಗೆ ಸಹಾನುಭೂತಿ ಹೊಂದಿತ್ತು. ಆದ
ಅಕ್ಬರ್ ಕಷ್ಟಕಾಲದಲ್ಲಿ ಅನುಭವಿ ಸೇವಕ ಅಬುಲ್ ಫಝ್ಲ್‌ನಿಗೆ ಕರೆ ಕಳಿಸಿದ.
ಸಸಂತೋಷ ದಕ್ಷಿಣದಿಂದ ಹೊರಟು ನಿಂತ. ಸಲೀಮ್‌ನಿಗೆ ಮೊದಲೇ ಸೂಚನೆ ಸಿ
ಆತ ಅಬುಲ್‌ಫಝ್ಲ್‌ನನ್ನು ಕೊಲೆಗೈಯಲು ಯೋಚಿಸಿದ. ಬುಂದೇಲ್ ಖ
ರಾಜಕುಮಾರ ವೀರಸಿಂಗ್ ಈ ದಿನಗಳಲ್ಲಿ ಸುಲಿಗೆ ಗೈಯುತ್ತ ತಿರುಗಾಡುತ್ತಿದ್ದ. ಸಲಿ
ಅವನನ್ನೇ ಸನ್ನದ್ಧಗೊಳಿಸಿದ. ಅಬುಲ್ ಫಝ್ಲ್ ಗ್ವಾಲಿಯಾರ್ ಬಳಿ ತಲುಪಿದ್ದ
ವೀರಸಿಂಹ ದಾಳಿ ನಡೆಸಿ 1602ರಲ್ಲಿ ಆತನನ್ನು ಮುಗಿಸಿದ.

ರನ ಮರಣ

ಅಬುಲ್ ಫಝುಲ್‌ನ ನಿಧನದಿಂದ ಅಕ್ಬರ್‌ನಿಗೆ ಬಹಳ ದುಃಖವಾಯಿತು. ಆತ ರ್ಘಾವಧಿಯವರೆಗೆ ಶೋಕಾಚರಿಸುತ್ತಲಿದ್ದ. ಹಲವು ಸಲ ಈ ವಾಕ್ಯವನ್ನು ಪುನರುಚ್ಚರಿಸಿದ್ದ. ಾರ ಗಳಿಸಬೇಕೆಂದಿದ್ದರೆ ನನ್ನನ್ನು ಕೊಲ್ಲಬೇಕಿತ್ತು. ವೃಥಾ ಅಬುಲ್ ಫಝುಲ್‌ನನ್ನು ುಬಿಟ್ಟೆ.'

ತದನಂತರದಲ್ಲಿ ಅಕ್ಬರ್ ಸುಮಾರು ಮೂರು ವರ್ಷಕಾಲ ಜೀವಂತವಿದ್ದ. ಆದರೆ ಂಪೂರ್ಣ ಕಾಲವು ಬಹಳ ಚಿಂತಾಜನಕ ಸ್ಥಿತಿಯಲ್ಲಿ ಮತ್ತು ಖಾಸಗೀ ಗೊಂದಲಗಳಲ್ಲಿ ುತು. ಅಕ್ಬರ್‌ನ ಇಬ್ಬರು ಪುತ್ರರಾದ ದಾನಿಯಾಲ್ ಮತ್ತು ಮುರಾದ್ ಆತನ ಜೀವಿತ ಲ್ಲೇ ವಿಧಿವಶರಾಗಿದ್ದರು. ಒಬ್ಬ ಸಲೀಮ್ ಬಾಕಿಯಿದ್ದ. ಆತನಂತು ಅತ್ಯಂತ ೀವಾಗಿ ಪರಿಣಮಿಸಿದ್ದ. ಪದೇ ಪದೇ ಬಂಡಾಯವೇಳುತ್ತಿದ್ದ. ಇತ್ತ ಮಾನ್‌ಸಿಂಗ್ , ಬೇರೆ ಕೆಲವು ಸರದಾರರು ಸಲೀಮ್‌ನ ಬದಲು ಆತನ ಪುತ್ರ ಖುಸ್ರೂವನ್ನು ಅಕ್ಬರನ ಾಧಿಕಾರಿಯಾಗಿ ಮಾಡಲಿಚ್ಛಿಸಿದ್ದರು. ಆದರೆ ಇಸ್ಲಾಮ್ ಪ್ರಿಯ ಜನರು ರಾಜಕುಮಾರ ಮ್‌ನ ಪರವಾಗಿದ್ದರು. ಈ ಸ್ಥಿತಿಯು ಅಕ್ಬರನನ್ನು ಬಹಳ ಚಿಂತಾಕ್ರಾಂತಗೊಳಿಸಿತ್ತು. ೆ ಅದು ಆರೋಗ್ಯದ ಮೇಲೆ ಪರಿಣಾಮ ಬೀರಿತು. ಆತ ತೀವ್ರ ಅಸ್ವಸ್ಥನಾದ. ಉಳಿಯುವ ಯಾವುದೇ ನಿರೀಕ್ಷೆ ಉಳಿಯದಾದಾಗ ರಾಣಿಯರು ಒತ್ತಾಯ ಪೂರ್ವಕ ಮ್‌ನನ್ನು ಅಲಾಹಾಬಾದ್‌ನಿಂದ ಕರೆಸಿಕೊಂಡರು. ಅರಸನಿಂದ ಕ್ಷಮೆ ಕೋರುವಂತೆ ುಸಿದರು. ಸಲೀಮ್ ದುಃಖಿತನಾಗಿ ಕ್ಷಮೆ ಯಾಚಿಸಿದ. ಅಕ್ಬರ್ ಆಲಂಗಿಸಿ ಿದ. ಈ ರೋಗದಿಂದ ಅಕ್ಬರ್ ಮೃತ್ಯುದವಡೆಯಿಂದ ಪಾರಾಗಲು ಸಾಧ್ಯವಾಗಲಿಲ್ಲ. 1605ರಲ್ಲಿ ಮರಣ ಹೊಂದಿದ. ಮರಣದ ಸಂದರ್ಭದಲ್ಲಿ ಸತ್ಯಸಾಕ್ಷ್ಯ ವಚನ ಿಸಿದ, ಯಾಸೀನ್ ಅಧ್ಯಾಯ ಓದಿಸಿ ಕೇಳಿಸಿಕೊಂಡ ಮತ್ತು ಒಬ್ಬ ದೃಢ ವಿಶ್ವಾಸಿ ಮನಂತೆ ನಿಧನ ಹೊಂದಿದ ಎಂದು ಹೇಳಲಾಗುತ್ತಿದೆ.

್ಯಾಸ:

1. ಪಾಣಿಪತದ ಇಕ್ಕಟ್ಟಿನ ಮೈದಾನ ನೋಡಿದಾಗ ಯಾವ ರೀತಿ ಭಾಸವಾಗುತ್ತದೆ ಯೆಂದರೆ ವಿಧಿಯು ಅದನ್ನು ಜನಾಂಗಗಳ ನಡುವಿನ ಯುದ್ಧಗಳ ತೀರ್ಮಾನ ಮಾಡಲೆಂದೇ ಕಾದಿರಿಸಿರುವಂತೆ. ಈ ಮೈದಾನದಲ್ಲಿ ಯಾವ ಯಾವ ಪ್ರಮುಖ ಯುದ್ಧಗಳು ಯಾರ ನಡುವೆ ನಡೆದುವು? ಮತ್ತು ಅವುಗಳ ಫಲಿತಾಂಶವೇನಾಗಿತ್ತು?
2. ಅಕ್ಬರನ ಜನನ ಮತ್ತು ಬಾಲ್ಯದ ಬಗ್ಗೆ ನೀವೇನು ತಿಳಿದಿದ್ದೀರಿ?
3. ಬೈರಮ್‌ಖಾನನು ಯಾವೆಲ್ಲ ಸೇವೆಗಳನ್ನು ಸಲ್ಲಿಸಿದ? ಆತನ ಪತನ ಹೇಗಾಯಿತು?

4. ಉಜ್ಬೇಕ್ ಸರದಾರರು ಯಾಕೆ ಬಂಡಾಯವೆದ್ದರು? ಅಕ್ಬರನು ಅವರೊಂ ಹೇಗೆ ವರ್ತಿಸಿದ?
5. ಅಕ್ಬರ್ ಪ್ರಚಂಡ ದಿಗ್ವಿಜಯಿಯಾಗಿದ್ದ? ಆತ ಯಾವ ಯಾವ ಪ್ರದೇಶಗಳ ಗೆದ್ದುಕೊಂಡ?
6. ಸಾಮ್ರಾಜ್ಯ ವ್ಯವಸ್ಥೆಯಲ್ಲಿ ಅಕ್ಬರ್‌ನಿಗೆ ತನ್ನ ಪೂರ್ವಿಕನಾದ ಶೇರ್‌ಷಾ ಮಾದರಿಯಿಂದ ಯಾವ ರೀತಿಯ ಸಹಾಯ ಸಿಕ್ಕಿತು?
7. 'ಅಕ್ಬರ್ ಆರಂಭದಲ್ಲಿ ಸತ್ಯವಿಶ್ವಾಸಿ ಮುಸ್ಲಿಮನಾಗಿದ್ದ.' ಈ ಬಗ್ಗೆ ವಿವ
8. ಅನಂತರದಲ್ಲಿ ಅಕ್ಬರನ ಧಾರ್ಮಿಕ ಶ್ರದ್ಧೆಯಲ್ಲಿ ಯಾವ ಬದಲಾವಣೆ ಗೋಚರಿಸಿದುವು?
9. ದೀನೆ ಇಲಾಹಿ ಏನು? ಅದರ ಅವಸ್ಥೆ ಏನಾಯಿತು?
10. ಅಕ್ಬರ್ ಕೆಡುವುದರಲ್ಲಿ ಅತೀ ಪ್ರಮುಖ ಪಾತ್ರ ವಹಿಸಿದ್ದು ಕಾಲದ ವಿದ್ವಾಂಸರು. ಇದನ್ನು ಸ್ಪಷ್ಟೀಕರಿಸಿ. ಘಟನೆಗಳ ಮೂಲಕ ಇದಕ್ಕೆ ಪು ಒದಗಿಸಿರಿ.
11. ಮಖ್‌ದೂಮ್ ಮಲಿಕ್ ಮತ್ತು ಹಿರಿಯ ನ್ಯಾಯಾಧೀಶನ ಬಗ್ಗೆ ಸಂ ಟಿಪ್ಪಣಿ ಬರೆಯಿರಿ.
12. ಮುಲ್ಲಾ ಮುಬಾರಕ್ ಮತ್ತು ಅವರ ಇಬ್ಬರು ಪುತ್ರರ ಚಾರಿತ್ರ್ಯ ವ ಕಾರ್ಯಗಳ ಕಡೆಗೆ ಬೆಳಕು ಚೆಲ್ಲಿರಿ.
13. ಅಕ್ಬರನು ತನ್ನ ನವೀನಾಚಾರಗಳನ್ನು ಪ್ರಚಾರ ಪಡಿಸಲು ಪ್ರಯತ್ನಿಸಿ ಉಜ್ವಲ ಯಶಸ್ಸು ಗಳಿಸದಾದ. ಯಾಕೆ?
14. ಭಾರತದ ನಕಾಶೆ ರಚಿಸಿ, ಅಕ್ಬರ್‌ನ ಸಾಮ್ರಾಜ್ಯದ ವಿಸ್ತೀರ್ಣವನ್ನು ಗುರುತಿ

●●

ಧ್ಯಾಯ-4

ನೂರುದ್ದೀನ್ ಜಹಾಂಗೀರ್

(ಕ್ರಿ.ಶ. 1605-1627)

ಅಕ್ಬರ್‌ನ ನಿಧನದ ವೇಳೆ ಬಹುದೊಡ್ಡ ಸಮಸ್ಯೆಯಿದ್ದುದು ಆತನ ಉತ್ತರಾ ುಯದ್ದು. ಪ್ರಭಾವಿ ನಾಯಕರ ಎರಡು ಗುಂಪುಗಳಾಗಿತ್ತು. ಶೈಖ್ ಫರೀದ್ ಮತ್ತು ಅವರ ರು ರಾಜಕುಮಾರ ಸಲೀಮ್‌ನ ಪರವಾಗಿದ್ದರು. ಆದರೆ ಮಾನ್‌ಸಿಂಗ್ ಮತ್ತು ಇತರ ಸರದಾರರು ಖುಸ್ರೂಗೆ ಪಟ್ಟಾಭಿಷೇಕ ಮಾಡಬಯಸಿದ್ದರು. ಖುಸ್ರೂ ರಾಜಕುಮಾರ ಮ್‌ನ ಪುತ್ರ ಮತ್ತು ಮಾನ್‌ಸಿಂಗ್‌ನ ಸೋದರಳಿಯನಾಗಿದ್ದ. ಶೈಖ್ ಫರೀದ್‌ನು ಈ ರ್ಭದಲ್ಲಿ ಬಹಳ ಚುರುಕು ಬುದ್ಧಿ ಸಾಬೀತುಪಡಿಸಿದ. ತನ್ನ ಪ್ರಯತ್ನದ ಮೂಲಕ ಕರ ಬಹುಸಂಖ್ಯೆಯನ್ನು ತಮ್ಮತ್ತ ಸೆಳೆದುಕೊಂಡ. ಕೊನೆಗೆ ಮಾನ್‌ಸಿಂಗ್‌ನ ತಂತ್ರ ಗೊಂಡಿತು. ಅನಂತರ ಶೈಖ್ ಫರೀದ್ ಎಲ್ಲ ನಾಯಕರ ಪ್ರತಿನಿಧಿಯಾಗಿ ರಾಜಕುಮಾರ ಮ್‌ನ ಬಳಿಗೆ ಹೋದ. 'ನಾವೆಲ್ಲರೂ ನಿಮ್ಮ ಪ್ರಭುತ್ವದ ಬೆಂಬಲಿಗ ರಾಗಿದ್ದೇವೆ. ಮಿ ಕಾನೂನು ನಿಯಮದ ರಕ್ಷಣೆ ಮಾಡುತ್ತೇವೆ ಮತ್ತು ನಿಮ್ಮ ಪುತ್ರ ಖುಸ್ರೂ ಅಥವಾ ಬೆಂಬಲಿಗರಿಗೆ ಯಾವುದೇ ಶಿಕ್ಷೆ ನೀಡುವುದಿಲ್ಲವೆಂದು ನೀವು ಪ್ರಮಾಣ ಮಾಡಬೇಕು' ಹೇಳಿದ. ರಾಜಕುಮಾರ ಒಪ್ಪಿದ. ತಂದೆಯ ನಿಧನವಾದ ಕೂಡಲೇ ಜಹಾಂಗೀರ್‌ನ ಲ್ಲಿ ಪೀಠಾರೋಹಣ ಮಾಡಿದ. ಆಡಳಿತ ಕಡಿವಾಣವನ್ನು ಕೈಗೆತ್ತಿಕೊಂಡ ನಂತರ ಆತ ನಗಳನ್ನು ಪೂರೈಸಿದ. ಅನೇಕ ವಿಚಾರಗಳಲ್ಲಿ ಶರೀಅತ್ ಕಾನೂನಿನ ಪರವಾಗಿರುವುದನ್ನು ತು ಪಡಿಸಿದ. ಅಕ್ಬರ್‌ನಿಂದಾದ ಪ್ರಭಾವಗಳನ್ನು ಅಳಿಸುವಲ್ಲಿ ನೆರವಾದ. ಆತ ತನ್ನ ಪುತ್ರ ರೂ ಮತ್ತು ಆತನ ಬೆಂಬಲಿಗ ನಾಯಕರೊಂದಿಗೆ ಅತ್ಯಂತ ಉದಾರತನ ಮತ್ತು ಲ್ಯದಿಂದ ವರ್ತಿಸಿದ. ಮಾನ್‌ಸಿಂಗ್‌ನೊಂದಿಗೂ ಸಂಬಂಧ ಸುದೃಢಗೊಂಡಿತು. ಆದರೆ ರೂವಿನ ಮನಸ್ಸು ಇನ್ನೂ ಸ್ವಚ್ಛಗೊಂಡಿರಲಿಲ್ಲ. ಆತ ಈಗಲೂ ಪಟ್ಟಾಭಿಷೇಕದ ಸ್ವಪ್ನ ತ್ತಲಿದ್ದ.

ಸ್ರೂವಿನ ಬಂಡಾಯ

ತಂದೆ ಪುತ್ರರೊಳಗೆ ಪರಸ್ಪರ ರಾಜಿಯಂತು ಆಗಿತ್ತು. ಆದರೆ ಖುಸ್ರೂವಿನ ಮನಸ್ಸು ಖೂ ಶುಭ್ರ ಗೊಂಡಿರಲಿಲ್ಲ. ಆದ್ದರಿಂದ ಜಹಾಂಗೀರನು ಆತನ ಬಗ್ಗೆ ಸಂಶಯದಲ್ಲಿದ್ದ.

ಕೊನೆಗೆ ಸಂದೇಹ ನಿಜವಾಯಿತು. ಖುಸ್ರೊ ಒಮ್ಮೆ ಆಗ್ರಾದಿಂದ ಓಡಿಹೋದ. ದಾರಿಯ ಆತನಿಗೆ ಕೆಲವು ಬೆಂಬಲಿಗರು ಸಿಕ್ಕಿದರು. ಅವರ ನೆರವಿನೊಂದಿಗೆ ಆತ ಸುಲಿಗೆ ನಡೆ ಪಂಜಾಬ್ ತಲುಪಿದ. ಅಲ್ಲಿ ಸಿಕ್ಖರ ಸರದಾರ ಗೌರವಾರ್ಜುನನಿಂದಲೂ ನೆರವು ಪಡ ಲಾಹೋರ್‌ನ ಮೇಲೆ ಆಕ್ರಮಣ ನಡೆಸಿದ. ಜಹಾಂಗೀರನು ಖುಸ್ರೊವಿನ ಈ ಕೃತ್ಯಗ ಅಸಾಮಾನ್ಯ ಮಹತ್ವ ಕಲ್ಪಿಸಿದ. ತನ್ನ ಅತ್ಯಂತ ನಂಬಿಗಸ್ಥ ಅಧಿಕಾರಿ ಶೈಖ್ ಫರೀದ್‌ ಆತನನ್ನು ಹಿಂಬಾಲಿಸಲು ಕಳುಹಿಸಿದ. ಶೈಖ್ ಫರೀದ್ ಖುಸ್ರುವಿನ ಎಲ್ಲ ಯೋಜನೆಗಳ ಹಾನಿಗೊಳಿಸಿದ. ಆತನನ್ನು ಸಂಗಾತಿಗಳೊಂದಿಗೆ ಸೆರೆಹಿಡಿದು ತಂದ. ಇದು ಅತ್ಯಂತ ಘ ಕೃತ್ಯವಾಗಿತ್ತು. ಆದ್ದರಿಂದ ಜಹಾಂಗೀರ್ ಅತ್ಯಂತ ಕಠಿಣವಾಗಿ ವರ್ತಿಸಿದ. ವಿದ್ರೋಹಿ ಕಠಿಣ ಶಿಕ್ಷೆಯನ್ನು ವಿಧಿಸಿದ. ಅನೇಕ ಮಂದಿ ಹತ್ಯೆಗೈಯಲ್ಪಟ್ಟರು. ಅದ ಗೌರವಾರ್ಜುನನೂ ಸೇರಿದ್ದ. ಖುಸ್ರೊವನ್ನು ಸೆರೆಮನೆಯಲ್ಲಿರಿಸಿ ಬಿಗು ಪಹರೆ ನಿಲ್ಲಿಸಲಾಯಿ ಆತನ ಜೀವನದ ಉಳಿದ ಹದಿನೈದು ವರ್ಷ ಸೆರೆವಾಸದಲ್ಲೇ ಕಳೆಯಿತು.

ಬಂಗಾಳದಲ್ಲಿ ಉಸ್ಮಾನ್ ಖಾನನ ಬಂಡಾಯ

ದಾವೂದ್ ಖಾನನ ಹತ್ಯೆಯ ನಂತರ ಕ್ರಿ.ಶ. 1576ರಲ್ಲಿ ಬಂಗಾಳದಲ್ಲಿ ಮೊ ಪತಾಕೆ ಹಾರಾಡ ತೊಡಗಿತ್ತು. ಆದರೆ ಅವರ ಅಫಘಾನ್ ವೈರಿಗಳು ಈಗಲೂ ಪೂರ್ಣ ಹತೋಟಿಗೆ ಬಂದಿರಲಿಲ್ಲ. ಉಸ್ಮಾನ್ ಖಾನನ ನೇತೃತ್ವದಲ್ಲಿ ಅವರು ತಮ್ಮನ್ನು ಸಂಘಟಿತಗೊಳಿಸಿಕೊಂಡರು. ಬಹಳ ಕಾಲದ ವರೆಗೆ ಅಕ್ಬರ್‌ನಿಗೆ ತಲೆನೋವಾಗಿಬಿಟ್ಟ ಜಹಾಂಗೀರನ ಆಡಳಿತ ಕಾಲದಲ್ಲಿ ಬಂಗಾಳದ ಪ್ರಾಂತ್ಯಾಧಿಕಾರಿ ಇಸ್ಲಾಮ್ ಖಾನ್ ಅವರ ಮುರಿಯಲು ಬಯಸಿದ. ಕ್ರಿ. ಶ. 1612ರಲ್ಲಿ ಅಫಘಾನರು ಪ್ರಬಲ ಹೋರಾಟ ನಡೆಸಿ ಉಸ್ಮಾನ್‌ಖಾನ್ ಶೌರ್ಯದಿಂದ ಹೋರಾಡುತ್ತ ಕೊಲ್ಲಲ್ಪಟ್ಟ. ಉಳಿದ ಅಫಘಾನ್ ಸರದಾ ವಿಧೇಯತೆ ಸ್ವೀಕರಿಸಿದರು. ಜಹಾಂಗೀರನು ಅವರೊಂದಿಗೆ ಸೂಕ್ತ ರೀತಿಯಲ್ಲಿ ವರ್ತಿ ಅವರನ್ನು ಕ್ಷಮಿಸಿ ಅರಸನ ಸೇನೆಯಲ್ಲಿ ಭರ್ತಿಗೊಳಿಸಿಕೊಳ್ಳಲು ಸಾರ್ವಜನಿಕ ಅನು ನೀಡಿದ. ಪರಿಣಾಮವಾಗಿ ಅಫಘಾನರ ಸಾಮ್ರಾಜ್ಯ ವಿರೋಧಿ ಚಟುವಟಿಕೆಗಳು ಕೊನೆಗೊಂ ಅವರ ಶಕ್ತಿ ಸಾಮರ್ಥ್ಯಗಳು ಸಾಮ್ರಾಜ್ಯದ ಭದ್ರತೆಗೆ ಸಹಕಾರಿಯಾಗತೊಡಗಿತು.

ನೂರ್‌ಜಹಾನಳೊಂದಿಗೆ ವಿವಾಹ

ಇದು ಜಹಾಂಗೀರ್‌ನ ಜೀವನದ ಒಂದು ಅತ್ಯಂತ ಮಹತ್ವದ ಘಟನೆಯಾ ಏಕೆಂದರೆ ಈ ವಿವಾಹವು ಆತನನ್ನು ಏನಿಂದೇನೋ ಆಗಿ ಮಾರ್ಪಡಿಸಿತು. ರಾಣಿ ನೂರ್‌ಜಹ ಬಾದಶಾಹನನ್ನು ಯಾವ ರೀತಿ ವಶೀಕರಿಸಿದಳೆಂದರೆ ಆತ ಆಕೆಯ ಅಭಿಪ್ರಾಯದ ವಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ಕ್ರಮೇಣ ಸಾಮ್ರಾಜ್ಯದ ವ್ಯವಸ್ಥೆ ಕಾರ್ಯತಃ ಆ ಕೈಸೇರಿತು. ಅವಳೇ ಎಲ್ಲದರ ಒಡತಿಯಾದಳು. ಸಾಮ್ರಾಜ್ಯದ ಎಲ್ಲ ವ್ಯವಹಾರಗಳು ಇಚ್ಛೆಯಂತೆ ನಡೆಯತೊಡಗಿತು. ನಾಣ್ಯದ ಮೇಲೂ ಅವಳ ಹೆಸರು ಮುದ್ರಿತಗೊಂ ಕೆಲವು ಆಜ್ಞೆಗಳೂ ಅವಳ ಹೆಸರಿನಿಂದ ಜಾರಿಗೊಳ್ಳತೊಡಗಿತು.

ನೂರ್‌ಜಹಾನಳ ನೈಜ ಹೆಸರು ಮೆಹರುನ್ನಿಸಾ. ಆಕೆ ಇರಾನ್‌ನ ಓರ್ವ ಪರದೇಶಿ ಗಲ ಮಿರ್ಝಾ ಗಿಯಾಸ್‌ನ ಪುತ್ರಿಯಾಗಿದ್ದಳು. ಆಕೆಯ ತಂದೆ ಉಪಜೀವನ ಮಾರ್ಗ ಘತ್ತ ಅನಿವಾರ್ಯವಾಗಿ ದೇಶ ತೊರೆದು ಭಾರತಕ್ಕೆ ಬರಲು ತೀರ್ಮಾನಿಸಿದ. ಪತ್ನಿ ್ಕಳು ಜೊತೆಗಿದ್ದರು. ದಾರಿಯಲ್ಲಿ ಈ ಪುತ್ರಿ ಜನಿಸಿದಳು. ಓರ್ವ ಇರಾನೀ ವ್ಯಾಪಾರಿ ಕಾಲದಲ್ಲಿ ನೆರವಾದ. ಆತನ ಮೂಲಕ ಅಕ್ಬರ್‌ನ ಆಸ್ಥಾನ ಪ್ರವೇಶವಾಯಿತು. ತಂದೆ ್ತ ಸೋದರನಿಗೆ ಸರಕಾರೀ ಉದ್ಯೋಗ ದೊರೆಯಿತು. ಆರಂಭದಲ್ಲಿ ಅವರ ಹುದ್ದೆ ಂತ ಸಾಮಾನ್ಯವಾಗಿತ್ತು. ಆದರೆ ಅವರು ಉನ್ನತ ಯೋಗ್ಯತೆಯನ್ನು ಪ್ರದರ್ಶಿಸಿದರು. ೀಣ ರಾಜ ದರ್ಬಾರಿನಲ್ಲಿ ಸ್ಥಾನಮಾನ ಗಳಿಸಿಕೊಂಡರು. ಮೆಹರುನ್ನಿಸಾ ಯೌವನಾವಸ್ಥೆಗೆ ಪಿದಾಗ ಓರ್ವ ಇರಾನಿ ಯುವಕ ಅಲಿ ಕುಲೀಖಾನ್‌ನೊಂದಿಗೆ ಆಕೆಯ ವಿವಾಹ ಯಿತು. ಅಲಿ ಕುಲೀಖಾನ್ ಅತ್ಯಂತ ಶೂರನಾಗಿದ್ದ. ಒಮ್ಮೆ ಆತ ಹುಲಿಯನ್ನು ಕ್ಕರುಳಿಸಿ ಖಡ್ಗದಿಂದ ಕೊಂದು ಬಿಟ್ಟಿದ್ದ. ಇದರಿಂದ ಸಂತೋಷಗೊಂಡು ರಾಜಕುಮಾರ ಮ್ ಆತನಿಗೆ ಶೇರ್ ಅಫಗನ್/ಶೂರ ಎಂಬ ಬಿರುದು ನೀಡಿದ.

ತನ್ನ ಕೊನೆಗಾಲದಲ್ಲಿ ಅಕ್ಬರನು ಶೇರ್ ಅಫಗನ್‌ನಿಗೆ ಬರ್ದ್‌ವಾನ್ ಪ್ರದೇಶದ ವ್ಯವಸ್ಥೆ ಸಿ ಬಂಗಾಳಕ್ಕೆ ಕಳಿಸಿಕೊಟ್ಟ. ಮೆಹರುನ್ನಿಸಾಳೂ ಒಟ್ಟಿಗೆ ಹೋದಳು. ಈಗ ಆಕೆ ಒಂದು ್ಣ ಮಗುವಿನ ತಾಯಿಯಾಗಿದ್ದಳು. ಇದೇ ಮಗು ಬೆಳೆದು ಜಹಾಂಗೀರ್‌ನ ಪುತ್ರ ್ಯಾರ್‌ನೊಂದಿಗೆ ಮದುವೆ ನಿಶ್ಚಯಗೊಂಡಿತು. ಜಹಾಂಗೀರ್‌ನ ಆಡಳಿತ ಆರಂಭಿಕ ದಲ್ಲಿ ಬಂಗಾಳದಲ್ಲಿ ಬಂಡಾಯದ ಜ್ವಾಲೆ ಹಬ್ಬಿದಾಗ ಶೇರ್ ಅಫಗನನೂ ಸಂಶಯ ್ಗೆ ಬಲಿಯಾದ. ಬಂಗಾಳದ ರಾಜ್ಯಪಾಲ ಕುತುಬುದ್ದೀನ್ ಖಾನ್‌ನಿಗೆ ಸೂಚನೆ ಸಿಕ್ಕಿತು. ವಿಚಾರಣೆಗಾಗಿ ಶೇರ್ ಅಫಗನ್‌ನ ಮನೆಗೆ ತೆರಳಿದ. ಅತ್ಯಂತ ಕೆಟ್ಟ ರೀತಿಯಲ್ಲಿ ವರ್ತಿಸಿದ. ಅಫಗನ್ ಕೋಪದಲ್ಲಿ ಆತನನ್ನು ಕೊಲೆಗೈದ. ಸ್ವತಃ ತಾನೂ ಅಂತ್ಯವಾದ. ರಾಜ್ಯಪಾಲನ ಸಾಮಾನ್ಯ ಘಟನೆಯೇನೂ ಆಗಿರಲಿಲ್ಲ. ಮನೆಮಾರೆಲ್ಲ ಮುಟ್ಟುಗೋಲು ಹಾಕಲ್ಪಟ್ಟಿತು. ರುನ್ನಿಸಾ ವಿಧವೆಯಾಗಿ ಆಗ್ರಾ ತಲುಪಿದಳು. 2-3ವರ್ಷ ನಂತರ ಜಹಾಂಗೀರ್ ಆಕೆಯನ್ನು ಹವಾದ. ಮಹಲಿಗೆ ಬಂದ ಆಕೆ ಬಹಳ ಬೆಳ್ಳಗಿದ್ದಳು. ಮೊದಲು ನೂರ್‌ಮಹಲ್ ತರ ನೂರ್‌ಜಹಾನ್ ಎಂಬ ಹೆಸರಿನಿಂದ ಪ್ರಸಿದ್ಧಳಾದಳು.

ಜಯಗಳು

ಖುಸ್ರೂ ಮತ್ತು ಆತನ ಸಂಗಾತಿಗಳ ಶಕ್ತಿ ಮುರಿದ ಮತ್ತು ಅಫಘಾನರ ಸಹಾನುಭೂತಿ ದ ನಂತರ ಜಹಾಂಗೀರನು ದೇಶೀಯ ದಿಗ್ವಿಜಯದ ಕಡೆಗೆ ಗಮನ ಹರಿಸಿದ.

1. ಮೇವಾಡದ ವಿಜಯ

ಪ್ರಮುಖ ರಾಜ್ಯವಾದ ರಜಪೂತಾನ ಅಕ್ಬರ್‌ನ ಕಾಲದಲ್ಲೇ ವಶಗೊಂಡು ಮೊಗಲ್ ಾಜ್ಯದ ಒಂದು ಭಾಗವಾಗಿ ಬಿಟ್ಟಿತ್ತು. ಆದರೆ ಅಲ್ಲಿಯ ರಾಜ ಹಿಡಿತಕ್ಕೆ ಸಿಕ್ಕಿರಲಿಲ್ಲ. ು ಕಣ್ಣು ತಪ್ಪಿಸಿ ನಿರಂತರ ಜಗಳ ಕಾಯುತ್ತ ಮತ್ತು ಗಲಾಟೆಯೆಬ್ಬಿಸುತ್ತಲಿರುತ್ತಿದ್ದರು.

ಪ್ರಾದೇಶಿಕ ಸೇನೆಗಳ ನಿರಂತರ ಪ್ರಯತ್ನಗಳ ಹೊರತಾಗಿಯೂ ಅವರು ಕೈ ಸೇರದಾಗ ಯುದ್ಧಕ್ಕಾಗಿ ತನ್ನ ಪುತ್ರನಾದ ರಾಜಕುಮಾರ ಖುರ್ರಮ್‌ನನ್ನು ಜಹಾಂಗೀರನು ನೇಮಿ ಆತ ಕ್ರಿ.ಶ. 1614ರಲ್ಲಿ ಒಂದು ಪ್ರಬಲ ಸೇನೆಯೊಂದಿಗೆ ಮುಂದುವರಿದ. ಎಂದಿನಂತೆ ರ ಅಮರ್‌ಸಿಂಗ್ ಬೆಟ್ಟಗುಡ್ಡಗಳಲ್ಲಿ ಆಶ್ರಯ ಪಡೆದುಕೊಂಡಿದ್ದ. ಖುರ್ರಮ್, ನಾಲ್ದೆಸೆಯಿ ರಸ್ತೆಯನ್ನು ಮುಚ್ಚಿ ಆತ ಅಸ್ತ್ರ ಕೆಳಗಿಡುವಂತೆ ವಿವಶಗೊಳಿಸಿದ. ರಾಣಾ ಶರಣಾದ. ಪುತ್ರ ಕಿರಣ್ ಸಿಂಗ್‌ನನ್ನು ರಾಜ ದರಬಾರಿಗೆ ಕಳಿಸಿದ. ಜಹಾಂಗೀರನು ಅ ಕುಟುಂಬದೊಂದಿಗೆ ಅತ್ಯಂತ ಸಹಾನುಭೂತಿಯಿಂದ ವ್ಯವಹರಿಸಿದ.

2. ಕಾಂಗ್ರಾದ ವಿಜಯ

ಉತ್ತರ ಪಂಜಾಬಿನ ದುರ್ಗಮ ಹಾದಿಯ ಬೆಟ್ಟಗಳಿಂದ ಆವೃತ್ತವಾದ ಈ ಸಾಮ್ರಾಜ ಅಕ್ಬರ್‌ನ ಕಾಲದಲ್ಲೇ ಗೆಲ್ಲಲ್ಪಟ್ಟಿತ್ತು.

ಆದರೆ ಸಂದರ್ಭದಿಂದ ಪ್ರಯೋಜನ ಪಡೆದ ಇಲ್ಲಿಯ ರಾಜ ಕೆಲಕಾಲದ ನ ತನ್ನ ಶಕ್ತಿಯನ್ನು ಯಥಾಸ್ಥಿತಿಗೆ ತಂದುಕೊಂಡಿದ್ದ. ಕಪ್ಪಕಾಣಿಕೆ ಕೊಡಲು ಆ ತೋರತೊಡಗಿದ್ದ. ಖುರ್ರಮ್‌ನ ಮೇಲ್ನೋಟದಲ್ಲಿ ಅಲ್ಲಿಗೆ ಸೇನೆ ಕಳಿಸಲಾಯಿತು. ಕ್ರಿ 1620ರಲ್ಲಿ ಆ ರಾಜ್ಯದ ಮೇಲೆ ಮಗುದೊಮ್ಮೆ ದಾಳಿ ನಡೆಸಿ ವಶಪಡಿಸಿಕೊಳ್ಳಲಾಯಿ

3. ದಕ್ಷಿಣದ ಮೇಲೆ ದಾಳಿ

ಉತ್ತರ ಭಾರತದ ಮೇಲೆ ಪ್ರಾಬಲ್ಯ ಗಳಿಸಿದ ನಂತರ ಜಹಾಂಗೀರನು ದಕ್ಷಿ ಕಡೆಗೆ ಮುಂದುವರಿದ. ಕ್ರಿ. ಶ. 1600ರ ತನಕ ಖಾಂದೇಶ್, ಬಿರಾರ್ ಮತ್ತು ಅಹ ನಗರವನ್ನು ಗೆದ್ದು ಅಬ್ದುರ್ರಹೀಮ್ ಖಾನ್ ಖಾನಾನ್‌ಗೆ ಅಲ್ಲಿಯ ಹೊಣೆಗಾರಿಕೆ ವಹಿ ಆದರೆ ಕಾಲಕ್ರಮೇಣ ನಿಝಾಮ್ ಶಾಹಿ ನಾಯಕರು ತಮ್ಮ ಶಕ್ತಿಯನ್ನು ಯಥಾಸ್ಥಿತಿಗೆ ತಂದುಕೊಂಡರು. ಓರ್ವ ಇಥಿಯೋಪಿಯಾದ ಸರದಾರ ಮಲಿಕ್ ಅಂಬ ಸೇನಾ ನಾಯಕತ್ವದಲ್ಲಿ ಮೊಗಲರು ವಶಪಡಿಸಿಕೊಂಡವುಗಳ ಮೇಲೆ ನಿಶಾಕ್ರ ನಡೆಸತೊಡಗಿದರು. ಮಲಿಕ್ ಅಂಬರನು ಮರಾಠ ರೈತರಿಗೆ ಗೊರಿಲ್ಲಾ ಯುದ್ಧ ರೀತಿ ಕಲಿಸಿ ಮೊಗಲರನ್ನು ಬಹಳ ಚಿಂತಾಕ್ರಾಂತಗೊಳಿಸಿದ. ಅವರ ದಮನಕ್ಕಾಗಿ ಜಹಾಂಗಿ ಒಂದರ ನಂತರ ಇನ್ನೊಂದರಂತೆ ಅನೇಕ ಸರದಾರರನ್ನು ಗೊತ್ತುಪಡಿಸಿದ. ಆದರೆ ಒ ಮುಂದುವರಿಯ ದಾದಾಗ ಕ್ರಿ.ಶ. 1617ರಲ್ಲಿ ರಾಜಕುಮಾರ ಖುರ್ರಮ್‌ನನ್ನು ಒ ಬೃಹತ್ ಸೇನೆಯೊಂದಿಗೆ ಕಳುಹಿಸಿಕೊಟ್ಟ. ಆತ ನಾಲ್ದೆಸೆಯಿಂದ ಸುತ್ತುವರಿದು ಎರಡು ಸಂಘರ್ಷಗಳಲ್ಲಿ ಯಾವ ರೀತಿ ಭಾರೀ ಸೋಲುಣಿಸಿದನೆಂದರೆ ಈ ವಿದ್ರೋಹಿಗಳ ಸವ ಉಡುಗಿ ಹೋಯಿತು. ಮಲಿಕ್ ಅಂಬರನು ಒಪ್ಪಂದಕ್ಕೆ ನಿರ್ಬಂಧಿತನಾದ. ಮ ಅಂಬರನ ನಿಧನಾನಂತರ ನಿಝಾಮ್ ಶಾಹೀ ಸರದಾರರಲ್ಲಿ ಹೋರಾಟದ ಸಾವ ಇಲ್ಲವಾಯಿತು. ಕ್ರಿ. ಶ. 1633ರಲ್ಲಿ ಅಹ್ಮದ್‌ನಗರ ರಾಜ್ಯ ಮೊಗಲರ ಸ್ವಾಧೀನವಾ

ರೋಪ್ಯ ವ್ಯಾಪಾರಿ ಕಂಪೆನಿಗಳು

ಕ್ರಿ.ಶ. 1492ರಲ್ಲಿ ಸ್ಪೆಯಿನ್‌ನಿಂದ ಮುಸ್ಲಿಮರ ಉಚ್ಚಾಟನೆಯ ನಂತರ ಅಲ್ಲಿನ ಾಸಿಗಳು ಸಮುದ್ರ ದಾಳಿಯ ಕಡೆಗೆ ವಿಶೇಷ ಗಮನ ಹರಿಸಿದರು. ಅದೇ ವರ್ಷ ಲಂಬಸನು ಮಧ್ಯ ಅಮೆರಿಕದ ಬಳಿಯ ದ್ವೀಪಗಳನ್ನು ಕಂಡುಹಿಡಿದ. ಕೆಲವು ವರ್ಷಗಳ ತರ ಕ್ರಿ.ಶ. 1498ರಲ್ಲಿ ಪೋರ್ಚುಗಲ್‌ನ ವಾಸ್ಕೋಡಗಾಮನು ದಕ್ಷಿಣ ಆಫ್ರಿಕಾ ಸುತ್ತಿ ರತಕ್ಕೆ ತಲುಪುವ ಹಾದಿಯನ್ನು ಅನ್ವೇಷಿಸಿದ. ಕ್ರಮೇಣ ಇಲ್ಲಿಂದ ಅವರ ವ್ಯಾಪಾರೀ ಬಂಧ ಸ್ಥಾಪನೆಯಾಯಿತು. ಪಶ್ಚಿಮ ಕರಾವಳಿಯ ಕೆಲವು ಪ್ರದೇಶಗಳು, ಉದಾಹರಣೆಗೆ ೀವಾ, ದಿಯು, ದಾಮನ್ ಅವರ ವಶವಾಯಿತು. ವ್ಯಾಪಾರದ ವಿನಾ ಕ್ರೈಸ್ತ ಧರ್ಮದ ಾರ ಹಾಗೂ ಸಮುದ್ರ ದರೋಡೆಯನ್ನು ಈ ಜನರು ಮಾಡುತ್ತಿದ್ದರು. ಅರಬ್ಬಿ ಸಮುದ್ರದ ಪಾರಿ ಮಾರ್ಗಗಳು ಅವರಿಂದಾಗಿ ಅತ್ಯಂತ ಅಪಾಯಕಾರಿಯಾಗಿ ಪರಿಣಮಿಸಿತ್ತು. ್‌ಷಾಹ್ ಈ ಮಾರ್ಗದ ರಕ್ಷಣೆಗಾಗಿ ಐವತ್ತು ಯುದ್ಧ ನೌಕೆಗಳ ಒಂದು ತಂಡವನ್ನು ಸುವ ಯೋಜನೆ ರೂಪಿಸಿದ್ದ. ಆದರೆ ವಿಧಿ ಸಹಕರಿಸಲಿಲ್ಲ. ಆತನ ಈ ಕನಸು ಾತ್ಕಾರಗೊಳ್ಳಲಿಲ್ಲ. ಪೋರ್ಚುಗೀಸರಿಗೆ ಮುಸ್ಲಿಮರೊಂದಿಗೆ ವಿಶೇಷ ದ್ವೇಷವಿತ್ತು. ಅವರು ್ಮ ವರ್ತನೆಯಿಂದ ಇದನ್ನು ಪ್ರಕಟಿಸುತ್ತಿದ್ದರು ಕೂಡಾ. ಆದ್ದರಿಂದ ಸಹಜವಾಗಿಯೇ ಸ್ಲಿಮರಿಗೆ ಅವರ ಬಗ್ಗೆ ಬೇಸರವಿತ್ತು.

ಅಕ್ಬರನ ಕಾಲದಲ್ಲಿ ಗೋವಾದ ಕೆಲವು ಪಾದ್ರಿಗಳು ಮೊಗಲ ದರಬಾರನ್ನು ರ್ಶಿಸಿದರು. ಆರಾಧನಾ ಭವನದ ಸಭೆಯೊಂದರಲ್ಲಿ ಇವರು ಕೆಲವು ಮಹಾಪುರುಷರನ್ನು ತ್ರವಲ್ಲ, ಸ್ವತಃ ಪ್ರವಾದಿವರ್ಯರ(ಸ) ಗೌರವ ಸ್ಥಾನಕ್ಕೆ ವಿರುದ್ಧವಾಗಿ ಅತ್ಯಂತ ಅಸಭ್ಯ ತುಗಳನ್ನಾಡಿದರು. ಇದರಿಂದಾಗಿ ಮುಸ್ಲಿಮರು ಉದ್ರಿಕ್ತಗೊಂಡರು. ಎಲ್ಲೆಡೆಯಿಂದ ಷ ಮತ್ತು ಬೇಸರ ಪ್ರಕಟಗೊಳ್ಳತೊಡಗಿತು. ಜಹಾಂಗೀರ್ ತನ್ನ ಆಡಳಿತ ಕಾಲದಲ್ಲಿ ; ಅವಧಿಯ ವರೆಗೆ ಅವರನ್ನು ಸಹಿಸಿಕೊಂಡ. ಅವರ ಕಿಡಿಗೇಡಿತನಗಳ ಹೊರತಾಗಿಯೂ ಲ ಮನಸ್ಕನಾಗಿ ವರ್ತಿಸುತ್ತಿದ್ದ. ಆದರೆ ಅವರ ತುಂಟತನ ಎಲ್ಲೆ ಮೀರಿದಾಗ ಮತ್ತು ರು ಕ್ರಿ.ಶ. 1613ರಲ್ಲಿ ಕೆಲವು ನೌಕೆಗಳ ಲೂಟಿಗೈದಾಗ ಜಹಾಂಗೀರ್ ಬೇಸರಗೊಂಡು ರ ಎಲ್ಲ ಕ್ರೈಸ್ತ ದೇವಾಲಯಗಳನ್ನು ಮುಚ್ಚಿಸಿದ. ದೇಶದೊಳಗಿನ ಅವರ ಚಟುವಟಿಕೆಗಳಿಗೆ ಧ ಹೇರಿದ.

್ಟ್ ಇಂಡಿಯಾ ಕಂಪೆನಿ

ಪೋರ್ಚುಗೀಸರೊಂದಿಗೆ ಪೈಪೋಟಿಯೆಂಬಂತೆ ವ್ಯಾಪಾರ ಸಂಬಂಧ ಸ್ಥಾಪಿಸ ಸಿದರು. ಇದೇ ಉದ್ದೇಶದಿಂದ ಕ್ರಿ.ಶ. 1600ರಲ್ಲಿ ಬ್ರಿಟನ್‌ನ ಈಸ್ಟ್ ಇಂಡಿಯಾ ಕಂಪೆನಿ ನೆಗೊಂಡಿತು. ಕ್ರಿ.ಶ. 1607ರಲ್ಲಿ ವಿಲಿಯಂ ಹಾಕಿನ್ ಎಂಬ ಆಂಗ್ಲ ಕಪ್ತಾನ ಂಗೀರ್‌ನ ದರಬಾರಿನಲ್ಲಿ ಹಾಜರಾದ. ಆತ ಅನುಪಮ ಮತ್ತು ಅಮೂಲ್ಯವಾದ ಷ್ಟು ಉಡುಗೊರೆಗಳನ್ನು ಸಮರ್ಪಿಸಿ ಕೆಲವು ವ್ಯಾಪಾರಿ ಸೌಲಭ್ಯಗಳನ್ನು ಬಯಸಿದ.

ಆದರೆ ಫಲ ದೊರೆಯಲಿಲ್ಲ. ಕ್ರಿ.ಶ. 1617ರಲ್ಲಿ ಸರ್ ಥಾಮಸ್ ರೋ ಎಂಬ ಇನ್ನೋ ಆಂಗ್ಲ ರಾಯಭಾರಿ ಬ್ರಿಟಿಷ್ ರಾಜನ ಪತ್ರದೊಂದಿಗೆ ಜಹಾಂಗೀರನ ಆಸ್ಥಾನಕ್ಕೆ ಬ ಆತನೂ ಬಹಳಷ್ಟು ಉಡುಗೊರೆಗಳನ್ನು ನೀಡಿದ. ನೂರ್‌ಜಹಾನಳನ್ನು ಖುಷಿಪಡಿಸಿ ಮೊ ಪ್ರದೇಶದಲ್ಲಿ ವ್ಯಾಪಾರದ ಅನುಮತಿ ಗಳಿಸಿಕೊಂಡ.

ಖುರ್ರಮ್‌ನ ಬಂಡಾಯ

ರಾಜಕುಮಾರ ಖುರ್ರಮ್‌ನ ಈ ಪ್ರಚಂಡ ವಿಜಯ ಆತನ ಘನತೆ ಗಾಂಭೀರ್ಯ ಬಹಳ ಹೆಚ್ಚಿಸಿತು. ಜಹಾಂಗೀರನು ಕೂಡ ಬಹಳ ಪ್ರಭಾವಿತನಾದ. ಈ ದಿಗ್ವಿಜಯ ಖುಷಿಯಲ್ಲಿ ಆತ ಒಂದು ವಿಜಯೋತ್ಸವ ಆಚರಿಸಿದ. ರಾಜಕುಮಾರ ಖುರ್ರಮ್ ಶಾಹಜಹಾನನ ಬಿರುದು ನೀಡಿ ಆತನ ಅಧಿಕಾರವನ್ನು ವಿಸ್ತರಿಸಿದ. ಕ್ರಿ.ಶ. 1620 ಜಹಾಂಗೀರ್ ಅಸ್ವಸ್ಥನಾದಾಗ ಉತ್ತರಾಧಿಕಾರಕ್ಕಾಗಿ ಎಲ್ಲರ ದೃಷ್ಟಿ ಶಾಹಜಹಾನನೆ ನೆಟ್ಟಿತು. ಆದರೆ ನೂರ್‌ಜಹಾನ್‌ಳಿಗೆ ಇದು ಯಾವುದೇ ರೀತಿಯಲ್ಲೂ ಇಷ್ಟವಿರಲಿಲ್ಲ. ಶಾಹಜಹಾನನನ್ನು ತನ್ನ ದಾರಿಯ ಕಲ್ಲೆಂದು ಭಾವಿಸುತ್ತಿದ್ದಳು. ತನ್ನ ಅಳಿ ಶಹರ್‌ಯಾರ್‌ನನ್ನು ಉತ್ತರಾಧಿಕಾರಿಯಾಗಿ ಮಾಡ ಬಯಸಿದ್ದಳು. ಜಹಾಂಗೀರ್‌ನ ನಂತ ಆಡಳಿತ ಚುಕ್ಕಾಣಿ ಕಾರ್ಯತಃ ಸ್ವತಃ ತನ್ನ ಕೈಯಲ್ಲಿ ಇರಬೇಕೆಂದು ಇಚ್ಛಿಸಿದಳು. ಆ ಶಾಹಜಹಾನನ ಅಸಾಧಾರಣ ಪ್ರಸಿದ್ಧಿ ಮತ್ತು ಶಹರ್‌ಯಾರ್‌ನ ಅನರ್ಹತೆಯಿಂ ಬಹಿರಂಗವಾಗಿ ಏನನ್ನೂ ಮಾಡುವ ಧೈರ್ಯವಿರಲಿಲ್ಲ. ಆಕೆ ಅವಕಾ ಶೋಧದಲ್ಲಿರುವಾಗಲೇ ಕ್ರಿ.ಶ. 1622ರಲ್ಲಿ ಇರಾನ್‌ನ ರಾಜ ಕಂದಹಾರ್‌ನ ಮೇಲೆ ಆಕ್ರ ನಡೆಸಿದ. ನೂರ್‌ಜಹಾನ್ ಈ ಸಂದರ್ಭದಿಂದ ಲಾಭ ಪಡೆಯ ಬಯಸಿದಳು. ಶಾಹಜಹಾ ಅಳಿಸಲು ಒಂದು ಉಪಾಯ ಹೂಡಿದಳು. ಆಕೆ ಪರಿಸ್ಥಿತಿಯ ಸೂಕ್ಷ್ಮತೆ ತಿಳಿಸಿ ಯು ಹೊರಡುವಂತೆ ಆತನ ಹೆಸರಿಗೆ ಆದೇಶ ಜಾರಿಗೊಳಿಸಿದಳು. ಶಾಹಜಹಾನ್ ದಕ್ಷಿಣದಲ್ಲಿದ್ದ. ರಾಜಾಜ್ಞೆ ತಲುಪಿದಾಗ ಯುದ್ಧಕ್ಕಾಗಿ ಹೊರಟು ನಿಂತ. ಕೆಲವೇ ದ ಮುಂದುವರಿದಿದ್ದನಷ್ಟೆ. ನೂರ್‌ಜಹಾನಳ ಉಪಾಯವನ್ನು ಗ್ರಹಿಸಿಕೊಂಡ. ಮಾಳ್ವಾ ತ ನೆಪ ಹೇಳತೊಡಗಿದ. ಇದೇ ನುಣುಚಿ ಕೊಳ್ಳುವಿಕೆಯಲ್ಲಿ ಕೆಲವು ತಿಂಗಳು ಕಳೆಯಿ ಕಂದಹಾರ್ ಇರಾನೀಯರ ವಶವಾಯಿತು. ಈಗ ಅರಸನನ್ನು ಪೂರ್ವಗ್ರಹ ಪೀಡಿತಗೊಳಿ ಬಹಳಷ್ಟು ಆಧಾರ ಪ್ರಮಾಣಗಳು ದೊರೆತವು. ನೂರ್‌ಜಹಾನ್ ಬಾದಶಾಹನಲ್ಲಿ ಹೇಳಿ ವೈಮನಸ್ಸುಂಟು ಮಾಡಿದಳು. ಎಲ್ಲಿಯವರೆಗೆಂದರೆ ಆತ ಜನಪ್ರಿಯ ಪುತ್ರನ ಬಹಳವೇ ಪೂರ್ವಗ್ರಹ ಪೀಡಿತನಾದ. ಆತನನ್ನು ಬಂಧಿಸಲು ಸೇನೆ ಕಳಿಸಿದ. ತಂ ಕ್ರೋಧಕ್ಕೆ ಪಾತ್ರನಾದ ಶಾಹ್‌ಜಹಾನ್ ಮೂರ್ನಾಲ್ಕು ವರ್ಷಗಳ ಕಾಲ ಅ ಅಲೆದಾಡುತ್ತಿದ್ದ. ತಲೆ ಮರೆಸಿಕೊಳ್ಳಲು ಮತ್ತು ಸಹಾಯ ಪಡೆದುಕೊಳ್ಳಲು ಒಮ್ಮೆ ದಕ್ಷಿ ಹೋದರೆ, ಇನ್ನೊಮ್ಮೆ ಬಂಗಾಳದತ್ತ ಹೊರಟ. ಕೆಲವೊಮ್ಮೆ ಗುಜರಾತ್, ಸಿಂಧ್ ವ ರಜಪೂತಾನದಲ್ಲಿ ಅಲೆದಾಡಿ ತಂದೆಯಲ್ಲಿ ತನ್ನ ತಪ್ಪಿಗಾಗಿ ಬಾರಿ ಬಾರಿಯಾಗಿ ಕ್ಷಮೆಯಾಚಿ

ಇಬ್ಬರು ಪುತ್ರರಾದ ಔರಂಗಝೇಬ್ ಮತ್ತು ದಾರಾ ಶಿಕೂರನ್ನು ಬಾದಶಾಹನ ಬಳಿಗೆ ಯಾಳಾಗಿ ಕಳುಹಿಸಿದ. ಆದರೆ ನೂರ್‌ಜಹಾನ್ ಆತನ ಮನಸ್ಸು ಸರಿಯಾಗಲು ಬಿಡಲಿಲ್ಲ. ಹದ್ದುಬಸ್ತಿನಲ್ಲಿರಿಸಿದಳು.

ಹಾಬತ್‌ಖಾನ್‌ನ ಬಂಡಾಯ

ಬಾದಶಾಹನನ್ನು ಪೂರ್ವಗ್ರಹಪೀಡಿತ ಗೊಳಿಸುವಲ್ಲಿ ರಾಣಿ ಯಶಸ್ವಿಯಂತು ಆದಳು. ರೆ ತನ್ನ ಅಳಿಯನ ಪರವಾಗಿ ವಾತಾವರಣವನ್ನು ಸುಗಮಗೊಳಿಸಲು ಇನ್ನೂ ಬಹಳ ಸಹಿಸಬೇಕಾಗಿತ್ತು. ಏಕೆಂದರೆ ಈ ಹಾದಿಯಲ್ಲಿ ಭಾರೀ ತಡೆಯಾಗಿದ್ದವನು ಸ್ವತಃ ರಾಣಿಯ ದರ ಆಸಿಫ್‌ಖಾನ್. ಆತನ ಪುತ್ರಿ ಶಾಹಜಹಾನನ್ನು ಮದುವೆಯಾಗಿದ್ದಳು. ಆಸಿಫ್‌ಖಾನ್ ತ್ರಿಯಾಗಿದ್ದ. ದರಬಾರಿನಲ್ಲಿ ಆತ ಬಹಳ ಪ್ರಭಾವ ಗಳಿಸಿಕೊಂಡಿದ್ದ. ಆತ ತನ್ನ ಅಳಿಯನ ದ್ಧ ನೂರ್‌ಜಹಾನಳ ಯಾವುದೇ ಒಳಸಂಚನ್ನು ಯಶಸ್ವಿಯಾಗದಂತೆ ನೋಡಬಯಸಿದ್ದ. ಯು ಈ ತಡೆಯನ್ನು ಸರಿಸಲು ಇನ್ನೊಂದು ಉಪಾಯ ಹೂಡಿದಳು. ಬಂಗಾಳದ ತ್ಯಾಧಿಕಾರಿ ಮಹಾಬತ್ ಖಾನನನ್ನು ದರಬಾರಿಗೆ ಕರೆಸಿಕೊಂಡಳು. ಮಂತ್ರಿ ಪದವಿಯ ನ ಅಧಿಕಾರವನ್ನು ಸೋದರನಿಂದ ಕಸಿದು ಆತನಿಗೊಪ್ಪಿಸಿದಳು. ಆರಂಭದಲ್ಲಂತು ಬತ್‌ಖಾನ್ ಆಕೆಯ ಮಾಧ್ಯಮವಾಗುಳಿದ. ರಾಣಿಯ ಇರಾದೆಯೇನೆಂದು ತಿಳಿದಾಗ ಕ್ರಿ ಸ್ಪಷ್ಟವಾಗಿ ಒಳಸಂಚಿನಲ್ಲಿ ಸಹಕರಿಸಲು ನಿರಾಕರಿಸಿದ. ನೂರ್‌ಜಹಾನ್ ಆತನ ವಿರುದ್ಧ ಕ ಆರೋಪಗಳನ್ನು ಹೊರಿಸಿ ಶಿಕ್ಷೆ ವಿಧಿಸ ಬಯಸಿದಳು. ಆದರೆ ಕ್ರಿ.ಶ. 1626ರಲ್ಲಿ ೀರದಿಂದ ಕಾಬೂಲ್‌ಗೆ ಹೋಗಲು ಬಾದ್‌ಶಾಹ್ ನದಿಯನ್ನು ದಾಟುತ್ತಿದ್ದ ರ್ಭದಲ್ಲೇ ಮಹಾಬತ್ ಖಾನ್ ಸ್ವತಃ ಬಾದ್‌ಶಾಹನನ್ನೇ ವಶಕ್ಕೆ ತೆಗೆದುಕೊಂಡ. ‌ಜಹಾನ್ ಕೂಡಾ ವಿವಶಳಾಗಿ ಶರಣಾದಳು. ಕೆಲವು ತಿಂಗಳ ಬಂಧನದ ನಂತರ ರಾಣಿಯು ಸಿಗೊಂಡಳು. ಮಹಾಬತ್‌ಖಾನ್‌ನೊಂದಿಗಿನ ಸಂಬಂಧ ಗಟ್ಟಿಯಾಯಿತು. ಈಗ ಬತ್‌ಖಾನ್‌ಗೆ ಸೇನೆಯೊಂದನ್ನು ನೀಡಿ ಖುರ್ರಮ್‌ನ ವಿರುದ್ಧ ಕಳಿಸಿಕೊಡಲಾಯಿತು. ೩ ತಲುಪಿದ ಆತ ರಾಜಕುಮಾರ ಖುರ್ರಮ್‌ನೊಂದಿಗೆ ಸೇರಿಕೊಂಡ.

ಾಂಗೀರನ ಮರಣ

ಈತನ ಮಧ್ಯೆ ಬಾದಶಾಹನ ಅನಾರೋಗ್ಯ ಹೆಚ್ಚುತ್ತಾ ಹೋಯಿತು. ಆತ ಹವಾಗುಣದ ಾವಣೆಗಾಗಿ ಕಾಶ್ಮೀರಕ್ಕೂ ಹೋದ. ಆದರೆ ವಾಸಿಯಾಗಲಿಲ್ಲ. ಮರಳುವಾಗ ತೀವ್ರ ಅಸ್ತಮ ೯ ಉಲ್ಬಣಗೊಂಡಿತು. ಕ್ರಿ. ಶ. 1627ರಲ್ಲಿ ಲಾಹೋರ್ ಬಳಿ ಮರಣ ಸಂಭವಿಸಿತು.

ಾಂಗೀರನ ಚಾರಿತ್ರ್ಯ

ಜಹಾಂಗೀರನೂ ತನ್ನ ಪೂರ್ವಿಕ ಮೊಗಲರಂತೆ ಅತ್ಯಂತ ಶೂರನಾಗಿದ್ದ. ಅಕ್ಬರನು ಶಿಕ್ಷಣ ತರಬೇತಿಯ ಸೂಕ್ತ ವ್ಯವಸ್ಥೆ ಮಾಡಿದ್ದ. ಆತ ಸಮಕಾಲೀನ ಜ್ಞಾನ, ಕಲೆಗಳಲ್ಲಿ ಪ್ರಾವೀಣ್ಯತೆ ಗಳಿಸಿಕೊಂಡಿದ್ದ. ಪ್ರಾಕೃತಿಕ ದೃಶ್ಯದ ಅಮಿತ ಪ್ರೇಮಿ ಮತ್ತು ಕಾವ್ಯದಲ್ಲಿ

ವಿಶೇಷ ಆಸಕ್ತಿ ಹೊಂದಿದ್ದ. ಅವನ ಶ್ರದ್ಧೆಯೂ ಇತರರಿಗಿಂತ ಅನುಭವದಿಂದ ಕೂಡಿ ದೃಢವಾಗಿತ್ತು. ಇದುವೇ ತಂದೆಯೊಂದಿಗಿನ ಬಂಡಾಯಕ್ಕೆ ಉತ್ತೇಜನ ನೀಡಿ ಉತ್ತರಾಧಿಕಾರದ ನಂತರ ಅಕ್ಬರನು ಜಾರಿಗೊಳಿಸಿದ್ದ ಬಹಳಷ್ಟು ನವೀನಾಚಾರ ಪಥಭ್ರಷ್ಟತೆಯ ಧ್ವಂಸಕ್ಕೆ ಕಾರಣವಾಯಿತು. ನ್ಯಾಯದ ವಿಷಯದಲ್ಲಂತೂ ಆತ ಉ ಮಾದರಿಯಾಗಿದ್ದಾನೆ. ದೂರು ಸಲ್ಲಿಸಲು ನ್ಯಾಯದ ಸಂಕಲೆ ನೇತಾಡಿಸಿದ್ದ. ಕಾನ ದೃಷ್ಟಿಯಲ್ಲಿ ತನ್ನವರು, ಪರರು, ಪ್ರಜೆಗಳು ಮತ್ತು ಅಧಿಕಾರಿಗಳು ಎಲ್ಲರನ್ನೂ ಸಮಾನ ಕಾಣಲಾಗುತ್ತಿತ್ತು. ಅಪರಾಧ ಸಾಬೀತಾದಾಗ ಕಠಿಣ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಒ ಸ್ವತಃ ಆತನ ಪ್ರಿಯ ರಾಣಿ ನೂರ್‌ಜಹಾನ್ ಬಂಧಿಸಲ್ಪಟ್ಟಳು. ಆಕೆ ದಾರಿಹೋಕನೊ ಮೇಲೆ ಗುಂಡು ಹಾರಿಸಿ ಕತೆ ಮುಗಿಸಿದ್ದಳು. ಬಾದಶಾಹನಿಗೆ ರಾಣಿ ಅತ್ಯಂತ ಪ್ರಿಯಳಾಗಿದ್ ಅದರ ಹೊರತಾಗಿಯೂ ತಕ್ಷಣ ಬಂಧಿಸಿದ. ಕೊಲೆಗೆ ಪ್ರತಿ ಕೊಲೆಯ ಪ್ರತೀ ತೀರಿಸಿಕೊಳ್ಳಲು ಆದೇಶಿಸಿದ. ರಾಣಿಯು ರಕ್ತಪರಿಹಾರವಾಗಿ ನಗದು ನೀಡಿ ಪ ರಕ್ಷಿಸಿಕೊಂಡಳು. ಆತ ವಿದ್ವಾಂಸರು ಮತ್ತು ನಾಯಕರನ್ನು ಗೌರವಿಸುತ್ತಿದ್ದ. ಅವರ ಸಂಗ ಪ್ರಯೋಜನ ಪಡೆಯುತ್ತಿದ್ದ. ಅನಾಥರು, ವಿಧವೆಯರು, ಬಡವರು ಮತ್ತು ದರಿದ್ ಧಾರಾಳವಾಗಿ ನೆರವಾಗುತ್ತಿದ್ದ. ತನ್ನ ಕ್ಷೇತ್ರದ ಅರ್ಹರಿಗೆ ಸಾಮ್ರಾಜ್ಯದ ಬೊಕ್ಕಸ ನೆರವಾಗುವಂತೆ ಸಿಬ್ಬಂದಿಗಳಿಗೂ ತಾಕೀತು ಮಾಡಿದ.

ಈ ಎಲ್ಲಾ ಸದ್ಗುಣಗಳೊಂದಿಗೆ ಆತನಲ್ಲಿದ್ದ ಬಹಳಷ್ಟು ದೌರ್ಬಲ್ಯಗಳು ವ್ಯಕ್ತಿತ್ವವನ್ನು ಬಹಳ ಕಳಂಕಿತಗೊಳಿಸಿತು. ಈ ಎಲ್ಲ ದೌರ್ಬಲ್ಯಗಳು ವಾಸ್ತವದಲ್ಲಿ ಪೋಷಣೆ ನಡೆದ ಕೆಟ್ಟ ವಾತಾವರಣದ ಆಸಲಾಗಿತ್ತು. ದರಬಾರು ಮತ್ತು ಮಹಲ ಇಸ್ಲಾಮೇತರ ಪ್ರಭಾವ ಆವರಿಸುತ್ತಿದ್ದಂತಹ ಪರಿಸ್ಥಿತಿಯಲ್ಲಿ ಆತ ಕಣ್ಣು ತೆರೆದಿದ್ದ. ಸಲಹಿ ಬೆಳೆಸಲು ಮುಸ್ಲಿಮೇತರ ತಾಯಿಯ ಮಡಿಲು ದೊರೆತಿತ್ತು. ಆತನ ಚಾರಿತ್ರ್ಯ ಕರ್ಮದ ಮೇಲೆ ಬಿದ್ದ ಈ ಅಂಶಗಳ ಅತ್ಯಂತ ಆಳ ಪ್ರಭಾವವು ಪರಿಸ್ಥಿತಿಯ ಸುಧಾರ ಪ್ರಯತ್ನಗಳ ಹೊರತಾಗಿಯೂ ಪೂರ್ಣವಾಗಿ ತೊಳೆದು ಹೋಗಲಿಲ್ಲ. ಆತ ತನ್ನ ಹ ಅತ್ಯಂತ ಮುದ್ದಿನ ಪುತ್ರನಾಗಿದ್ದ. ಬಹಳ ಬಯಕೆಗಳ ಬಳಿಕ ಹುಟ್ಟಿದ್ದ ಪ್ರೀತಿ ವಾತ್ಸ ಅವನನ್ನು ಹಠಮಾರಿ ಮತ್ತು ಭೋಗ ವಿಲಾಸಿಯಾಗಿ ಮಾಡಿತ್ತು. ಶರಾಬಿನ ದುಶ ಅವನ ಆರೋಗ್ಯವನ್ನು ಕೆಡಿಸಿತ್ತು. ಅವನ ಶ್ರೇಷ್ಠ ಸಾಮರ್ಥ್ಯಗಳು ಮುದುಡಿಹೋಗಿದ ಆತ ತನ್ನ ಕರ್ತವ್ಯದ ಬಗ್ಗೆ ಅಲಕ್ಷ್ಯ ವಹಿಸಲು ಮತ್ತು ಬೇರೆಯವರ ಮೇಲೆ ಅತಿ ಭರವಸೆ ಇರಿಸಲು ತೊಡಗಿದ್ದ. ಆತನ ವಿಲಾಸ ಪ್ರಿಯತೆಯು ಸಾಮ್ರಾಜ್ಯದ ವ ಕಾರ್ಯತಃ ನೂರ್ ಜಹಾನಳ ಹತೋಟಿಗೆ ಹೋಗುವಷ್ಟು ಆಕೆಯೆಡೆಗೆ ಆಕರ್ಷಿತಗೊಳಿ ಅದರಿಂದಾಗಿ ತರತರದ ಕ್ಷೋಭೆಗಳು ಜನ್ಮ ತಾಳಿದವು. ದರ್ಬಾರು ಸಂಚಿನ ಅಖಾಡವಾ ಸಂಕುಚಿತ ಸ್ವಭಾವ ಮತ್ತು ಅನುಚಿತ ಹಟವು ಆತನನ್ನು ಹೆಚ್ಚಾಗಿ ಅಕ್ರಮಕ್ಕೆ ಪ್ರೇರೇಪಿ ಸ್ವಸ್ಥ ನಂಬಿಕೆಯ ಹೊರತಾಗಿಯೂ ಕ್ರಿಯಾ ಬದುಕು ಅಲಂಕೃತಗೊಳ್ಳಲಿಲ್ಲ. ಆತ ದೌರ್ಬಲ್ಯದ ಮೇಲೆ ಹತೋಟಿ ಸಾಧಿಸದಾದ.

ನ್ಯಾಸ:

1. ಅಕ್ಬರನ ಇಚ್ಛೆಗೆ ವಿರುದ್ಧವಾಗಿ ಜಹಾಂಗೀರ್ ಯಾವ ರೀತಿ ಅಧಿಕಾರಕ್ಕೇರಿದ? ಪಟ್ಟಾಭಿಷೇಕದ ಸಂದರ್ಭದಲ್ಲಿ ಆತ ಯಾವ ಪ್ರಮಾಣ ಮಾಡಿದ್ದ?
2. ಖುಸ್ರೂ ಯಾಕೆ ಬಂಡಾಯವೆದ್ದ? ಪರಿಣಾಮವೇನಾಯಿತು?
3. ಉಸ್ಮಾನ್ ಖಾನ್ ಯಾಕೆ ಬಂಡಾಯವೆದ್ದ? ಅಫಘಾನರ ಸಹಾನುಭೂತಿಯನ್ನು ಜಹಾಂಗೀರ್ ಯಾಕಾಗಿ ಗಳಿಸಿಕೊಂಡ?
4. ನೂರ್‌ಜಹಾನ್ ಯಾರು? ಯಾವ ರೀತಿ ಜಹಾಂಗೀರ್‌ನ ವಿವಾಹ ಬಂಧನದಲ್ಲಿ ಬಂದಳು?
5. ಜಹಾಂಗೀರನು ಸಾಮ್ರಾಜ್ಯ ವಿಸ್ತರಣೆಗಾಗಿ ಏನು ಮಾಡಿದ?
6. ಯುರೋಪ್‌ನ ವ್ಯಾಪಾರಿ ಕಂಪೆನಿಗಳ ಬಗ್ಗೆ ನೀವೇನು ತಿಳಿದಿರುತ್ತೀರಿ?
7. ಖುರ್ರಮ್ ಯಾಕಾಗಿ ಬಂಡಾಯವೆದ್ದ? ಈ ಬಂಡಾಯದಲ್ಲಿ ತಪ್ಪು ಯಾರದ್ದಾಗಿತ್ತು?
8. ಮಹಾಬತ್ ಖಾನನು ವಿಚಿತ್ರ ನಾಟಕೀಯ ರೀತಿಯಲ್ಲಿ ಜಹಾಂಗೀರನನ್ನು ವಶಕ್ಕೆ ತೆಗೆದುಕೊಂಡ ಬಗ್ಗೆ ಸ್ಪಷ್ಟೀಕರಿಸಿ. ಪರಿಣಾಮವೇನಾಗಿತ್ತು?
9. ಜಹಾಂಗೀರನ ಚಾರಿತ್ರ್ಯ ಮತ್ತು ಸಾಹಸಗಳ ಕಡೆಗೆ ಬೆಳಕು ಚೆಲ್ಲಿರಿ.
10. ಈ ಕೆಳಗಿನ ಇಸವಿಗಳು ಯಾಕೆ ಪ್ರಸಿದ್ಧವಾಗಿವೆ?
    ಕ್ರಿ.ಶ. 1556, ಕ್ರಿ.ಶ. 1579, ಕ್ರಿ.ಶ. 1593, ಕ್ರಿ.ಶ. 1595, ಕ್ರಿ.ಶ. 1602, ಕ್ರಿ.ಶ. 1605, ಕ್ರಿ.ಶ. 1611, ಕ್ರಿ.ಶ. 1626, ಕ್ರಿ.ಶ. 1627

●●

ಅಧ್ಯಾಯ-5

ಅಕ್ಬರನ ಕಾಲದ ಧಾರ್ಮಿಕ ವಿದ್ವಾಂಸ

ಖ್ವಾಜಾ ಬಾಕೀಬಿಲ್ಲಾಹ್(ರ), ಮುಜದ್ದಿದ್ ಅಲ್ಫಸಾನೀ(ರ), ಶ ಅಬ್ದುಲ್ ಹಕ್ ಮುಹದ್ದಿಸ್ ದೆಹಲವಿ(ರ)

ತಮ್ಮ ಪ್ರಭುಗಳ ರೀತಿ ನೀತಿಗಳನ್ನೇ ಪ್ರಜೆಗಳು ಅಂಗೀಕರಿಸುತ್ತಾರೆ. ಯಥಾ ತಥಾ ಪ್ರಜಾ ಎಂಬುದು ನಿರಾಕರಿಸಲಾಗದ ಒಂದು ಸತ್ಯ. ಆದರೆ ಅಕ್ಬರನಂತಹ ಸರ್ವಾ ಮತ್ತು ಶಕ್ತಿಶಾಲಿ ಅರಸ, ಆತನ ದೀರ್ಘಕಾಲದ ಆಡಳಿತ, ಸತ್ಯಧರ್ಮದೊಂದಿಗಿನ ದ್ವೇಷ, ಧರ್ಮ ಮತ್ತು ಸಹಜೀವನದಲ್ಲಿ ಆತನ ನವೀನಾಚಾರ ಹಾಗೂ ಅವೇ ಪ್ರಚಾರಕ್ಕಾಗಿ ಸಾಧನ ಹಾಗೂ ಪ್ರಯತ್ನಗಳು- ಇವುಗಳ ಕಡೆಗೆ ದೃಷ್ಟಿ ಹಾಯಿಸಿದಾಗ ಈ ಗಾದೆ ಮಾತು ಅನ್ವಯವಾಗದಿರುವುದು ಕಂಡು ನಮಗೆ ಅಚ್ಚರಿಯಾಗುತ್ತದೆ. ಏ ಕೆಲವು ಹಿರಿಮೆ ಗೌರವವನ್ನು ಬಯಸುತ್ತಿದ್ದ ಮತ್ತು ಟಿಪ್ಪಣಿಗಾರರ, ಆಸ್ಥಾನಿಗರ ಹೆ ಯಾರ ಮೇಲೂ ಆತನ ಪರಿಣಾಮವಾಗಲಿಲ್ಲ. ಯಾರು ಅವನ ಪ್ರಭಾವಕ್ಕೊಳಗಾ ಅವರು ಅತ್ಯಂತ ಅಸಂತುಷ್ಟಿಯನ್ನು ಸಾಬೀತು ಪಡಿಸಿದರು. ಈ ರೀತಿ ಅ ಮೃತದೇಹದೊಂದಿಗೆ ಆತನ ಸ್ವಯಂಕೃತ ಧರ್ಮವೂ ದಫನಗೊಂಡಿತು.

ಈ ಮೇಲಿನ ಗಾದೆ ಮಾತು ತಪ್ಪೆಂದು ಇದರ ಅರ್ಥ ಖಂಡಿತಾ ಅಲ್ಲ. ಅಕ್ಬರ ಪ್ರಯತ್ನದಲ್ಲಿ ಯಾವುದೋ ಕೊರತೆ ಮಾಡಿದ್ದ ಎಂಬುದೂ ಸರಿಯಲ್ಲ. ಬದಲಾಗಿ ಮೂಲ ಕಾರಣವು ಆ ಧರ್ಮಭ್ರಷ್ಟತೆ ಮತ್ತು ಅಧರ್ಮದ ಪ್ರವಾಹದ ಮುಂದೆ ತಡೆ ಹ ನಿಟ್ಟಿನಲ್ಲಿ ಆ ಕಾಲದ ಅನೇಕ ಧಾರ್ಮಿಕ ವಿದ್ವಾಂಸರು ಮತ್ತು ಧರ್ಮನಿಷ್ಠ ನಾಯಕರ ಸಂ ಮತ್ತು ಅವಿರತ ಪ್ರಯತ್ನಗಳಾಗಿದ್ದುವು. ಅದರಲ್ಲಿ ಕೆಲವು ಮೇಲೆ ಉಲ್ಲೇಖಿಸಲ್ಪಟ್ಟಿವೆ. ಕ ಸಂಕ್ಷಿಪ್ತ ಪರಿಚಯ ಇಲ್ಲಿದೆ:

ಹಝ್ರತ್ ಖ್ವಾಜಾ ಬಾಕೀ ಬಿಲ್ಲಾಹ್(ರ)

ಇವರು ಕಾಬೂಲ್‌ನವರು. ಕ್ರಿ.ಶ. 1563ರಲ್ಲಿ ಜನಿಸಿದರು. ಪ್ರಾಥಮಿಕ ಶಿಕ್ಷಣ ತನ್ನ ಗೌರವಾನ್ವಿತ ತಂದೆಯಿಂದ ಗಳಿಸಿದರು. ಹೆಚ್ಚಿನ ಶಿಕ್ಷಣಕ್ಕಾಗಿ ಸಮರ್‌ಕಂದ್‌ಗೆ ಹೋ ಅದು ಆ ಕಾಲದಲ್ಲಿ ಜ್ಞಾನ ಕಲೆಗಳ ಕೇಂದ್ರವಾಗಿತ್ತು. ಉನ್ನತ ಶಿಕ್ಷಣವನ್ನು ಪೂರ್ಣಗೊಳಿಸಿರಲಿಲ್ಲ. ಆತ್ಮಸಂಸ್ಕರಣೆಯ ಕಡೆಗೆ ಗಮನ ಹರಿಯಿತು. ಅನೇಕ ಮಹಾಪು

ಯಲ್ಲಿ ಹಾಜರಾಗಿ ಅವರ ಸಂಗದಿಂದ ಲಾಭ ಗಳಿಸಿಕೊಂಡರು. ಆದರೂ ಧಾನವಾಗಲಿಲ್ಲ. ಪರಿಪೂರ್ಣ ವಿದ್ವಾಂಸರ ಹುಡುಕಾಟದಲ್ಲಿ ಭಾರತಕ್ಕೆ ಬಂದರು. ಲಿಯ ಓರ್ವ ಹಿರಿಯರಾದ ಕುತುಬ್ ಆಲಮ್‌ರ(ರ) ಸಲಹೆಯಂತೆ ಬುಖಾರಕ್ಕೆ ದರು. ಅಲ್ಲೋರ್ವ ಹಿರಿಯರಿಂದ ಆಧ್ಯಾತ್ಮಿಕ ತರಬೇತಿ ಗಳಿಸಿದರು. ಮತ್ತೆ ಅವರ ಶದಂತೆ ಭಾರತಕ್ಕೆ ಬಂದರು. ಒಂದು ವರ್ಷ ಲಾಹೋರ್‌ನಲ್ಲಿ ವಾಸ ಹೂಡಿದರು. ದೆಹಲಿಗೆ ಬಂದರು. ಇಲ್ಲಿಯೇ ಕ್ರಿ.ಶ. 1603ರಲ್ಲಿ ನಿಧನ ಹೊಂದಿದರು.

ಅವರು ಅತ್ಯಂತ ಧರ್ಮನಿಷ್ಠರು ಮತ್ತು ಮಹಾ ಪುರುಷರಾಗಿದ್ದರು. ಲೋಕ ್ಯಗ ಮಾಡುವ ಬದಲು ಅಕ್ಬರನ ಕಿಡಿಗೇಡಿತನವನ್ನು ದಮನಿಸಲು ನೆರವಾಗ ಬಲ್ಲಂತಹ ವಿ ವ್ಯಕ್ತಿಗಳ ಸುಧಾರಣೆ ಮತ್ತು ಅದರ ಪ್ರಯತ್ನಗಳನ್ನು ಸುಸಂಘಟಿತಗೊಳಿಸುವಲ್ಲಿ ಎಲ್ಲ ಶಕ್ತಿಯನ್ನು ವಿನಿಯೋಗಿಸಿದರು. ಅವರ ಅನುಯಾಯಿಗಳಲ್ಲಿ ವಿದ್ವಾಂಸರು ನಾಯಕರು ಇದ್ದರು. ಅಕ್ಬರನ ಪ್ರಭಾವಿ ಅಧಿಕಾರಿಗಳೂ ಸೇರಿದ್ದರು. ಮುಜದ್ದಿದ್ ಾನಿಯವರಂತು(ರ) ಅವರ ಆಯ್ದ ಶಿಷ್ಯರಲ್ಲೊಬ್ಬರಾಗಿದ್ದರು. ಶೈಖ್ ಅಬ್ದುಲ್ ಹಕ್ ದ್ದಿಸ್ ದೆಹಲವಿ(ರ) ಮತ್ತು ಇತರ ಅನೇಕ ವಿದ್ವಾಂಸರು ಹಾಗೂ ಮಹಾನ್ ಗಳೊಂದಿಗೂ ಅವರ ಗಾಢ ವ್ಯವಹಾರವಿತ್ತು. ಪ್ರಭಾವಿ ಅಧಿಕಾರಿಗಳಲ್ಲಿ ಅವರೊಂದಿಗೆ ನಂಬಿಕೆ ಹೊಂದಿದ್ದವರಲ್ಲಿ ಕೆಲವರೆಂದರೆ, ಅಕ್ಬರನ ಅಂತ್ಯ ಕಾಲದಲ್ಲಿನ ಎಲ್ಲರಿಗಿಂತ ಗಸ್ಥ ಅಧಿಕಾರಿ ಶೈಖ್ ಫರೀದ್, ಅಕ್ಬರ್‌ನ ಬೀಗರಾದ ಪಂಜಾಬ್ ರಾಜ್ಯಪಾಲ ್‌ಖಾನ್, ಅಧಿಕಾರಿಗಳ ನಾಯಕ ಖಾನ್ ಆಝುಮ್ ಮಿರ್ಝಾ ಕೋಕಾ, ದಕ್ಷಣದ ಧಿಕಾರಿ ಮತ್ತು ಬೈರಮ್‌ಖಾನ್‌ನ ಪುತ್ರ ಅಬ್ದುರ್ರಹೀಮ್ ಖಾನ್ ಖಾನಾನ್(ಹಿಂದಿ ಾಮ ರಹೀಮನ್), ಅಬುಲ್ ಫಝುಲ್‌ನ ಭಾವ ಹಿರಿಯ ನ್ಯಾಯಾಧೀಶ ಮಿರ್ಝಾ ುದ್ದೀನ್. ಇವರಲ್ಲಿ ಕೆಲವರಂತು ಅಕ್ಬರನ ಕಿಡಿಗೇಡಿತನಕ್ಕೆ ಬಲಿಯೂ ಆಗಿದ್ದರು.

ಇವರ ಉದಾರ ಸಂಗದಿಂದ ಅವರೆಲ್ಲರ ಸುಧಾರಣೆಯಾದುದು ಮಾತ್ರವಲ್ಲ ಅವರ ಟಿತ ಪ್ರಯತ್ನಗಳಿಂದ ಅಕ್ಬರನ ಕ್ಷೋಭೆ ಸಂಪೂರ್ಣ ಅಳಿದುಹೋಯಿತು.

್ರತ್ ಮುಜದ್ದಿದ್ ಅಲ್ಫಸಾನಿ(ರ)

ಅಕ್ಬರನ ಕ್ಷೋಭೆಯ ಮುಂದೆ ತಡೆ ನಿರ್ಮಿಸುವ ಮತ್ತು ಆತನ ಪ್ರಭಾವವನ್ನು ೊಳಿಸುವ ನಿಟ್ಟಿನಲ್ಲಿ ಬಹಳಷ್ಟು ಹಿರಿಯರ ಪ್ರಯತ್ನ ಸೇರಿದ್ದುದು ನಿಜ. ಆದರೆ ಅದನ್ನು ಸಹಿತ ಕಿತ್ತು ಹಾಕುವಲ್ಲಿ ಮತ್ತು ಶ್ರದ್ಧೆ ಕರ್ಮಗಳ ಇತರ ಪಥಭ್ರಷ್ಟತೆಗಳನ್ನು ಸುವುದರಲ್ಲಿ ಹೆಚ್ಚು ಪಾತ್ರ ವಹಿಸಿದ ಗಣ್ಯರೆಂದರೆ ಹಝ್ರತ್ ಮುಜದ್ದಿದ್ ಅಲ್ಫಸಾನಿ(ರ). ನಿಜನಾಮ ಅಹ್ಮದ್. ಸರ್‌ಹಿಂದ್‌ನ ನಿವಾಸಿ. ಆದ್ದರಿಂದ ಅವರು ಅಹ್ಮದ್ ಸರ್ ಎಂಬ ಹೆಸರಿನಿಂದಲೂ ಪ್ರಸಿದ್ಧರಾಗಿದ್ದಾರೆ. ಕ್ರಿ.ಶ. 1564ರಲ್ಲಿ ಜನಿಸಿದರು. ಅವರ ುವರು ಬಹುದೊಡ್ಡ ವಿದ್ವಾಂಸ ಮತ್ತು ಅತ್ಯಂತ ಧರ್ಮನಿಷ್ಠ ವ್ಯಕ್ತಿಯಾಗಿದ್ದರು. ಪ್ರಾಥಮಿಕ ಅವರಿಂದಲೇ ಗಳಿಸಿದರು. ಉನ್ನತ ಶಿಕ್ಷಣ ಪೂರ್ಣಗೊಳಿಸಿದ ನಂತರ ಕೆಲವು ದಿನ ಪಾಠ

ಬೋಧಕರಾಗಿ ಕಾರ್ಯ ನಿರ್ವಹಿಸಿದರು. ಅನಂತರ ಅಕ್ಬರಾಬಾದ್‌ಗೆ ತೆರಳಿದರು. ಈ ದಿನಗ ಅಕ್ಬರಾಬಾದ್ ಅಕ್ಬರನ ರಾಜಧಾನಿಯಾಗಿತ್ತು. ಅಲ್ಲಿ ಅಬುಲ್ ಫಝುಲ್ ಮತ್ತು ಫೈಝಿ ಪ್ರಸಿದ್ಧಿಯಿತ್ತು. ಅಕ್ಬರನ ಕೆಡುವಿಕೆಯಲ್ಲಿ ಅತೀ ಹೆಚ್ಚು ಪಾತ್ರವಿದ್ದುದು ಈ ಇಬ್ಬರು ಸೋದರ ಅವರಿಬ್ಬರೊಂದಿಗೆ ಸಂಪರ್ಕ ಸ್ಥಾಪಿಸಿದರು. ದರಬಾರು ಮತ್ತು ಆಸ್ಥಾ ಬಿಗಡಾಯಿಸುವಿಕೆಯನ್ನು ಹತ್ತಿರದಿಂದ ಕಾಣುವ ಅವಕಾಶ ಸಿಕ್ಕಿತು. ಇವರಿಬ್ಬರೊಂದಿಗೆ ವಿ ವಿನಿಮಯದ ಭಾರೀ ಅವಕಾಶ ದೊರೆತವು. ಅಬುಲ್ ಫಝುಲ್‌ನ ಕೆಲವು ಮೂಲಭೂತ ದೋ ಬಗ್ಗೆ ಅವರು ಪ್ರತಿಭಟಿಸಿದರು. ಬಾದಷಾಹನ ಕೆಟ್ಟ ನಡತೆಯನ್ನು ಟೀಕಿಸಿದರು.

ಫೈಝಿಯ ಚುಕ್ಕೆರಹಿತ ವ್ಯಾಖ್ಯಾನ ಗ್ರಂಥ ರಚನೆಯಲ್ಲಿ ಸಹಕರಿಸಿದರು. ಅವಧಿಯ ವರೆಗೆ ಅಲ್ಲಿದ್ದು ತಂದೆಯ ಒತ್ತಾಯದಂತೆ ಮನೆಗೆ ಮರಳಿದರು. ಅವರ ನಂತರ ದೆಹಲಿಗೆ ಬಂದರು. ಯಾರೋ ಪರಿಣತ ವಿದ್ವಾಂಸರನ್ನು ಹುಡುಕುತ್ತಿದ್ದರು. ಹರ ಬಾಕೀ ಬಿಲ್ಲಾಹ್‌ರ ಭೇಟಿಯಾಯಿತು. ಅವರ ಧರ್ಮನಿಷ್ಠೆ, ಇಸ್ಲಾಮಿ ಶರೀಅತ್‌ನ ಪ ಮತ್ತು ದಾನ ಶೂರತೆಯಿಂದ ಪ್ರಭಾವಿತರಾಗಿ ಅವರ ಶಿಷ್ಯತ್ವ ಪಡೆದರು. ತನ್ನ ಶ್ರೇಷ್ಠತೆ ಸ್ವತಃ ಅರ್ಹ ಗುರುವೇ ಬಹಳ ಪ್ರಭಾವಿತರಾಗಿದ್ದಂತಹ ಹೆಮ್ಮೆಯ ಶಿಷ್ಯರಾಗಿದ್ದರು. ತ ಅವರ ಔನ್ನತ್ಯವನ್ನು ಅವರು ಬಹಿರಂಗವಾಗಿ ಒಪ್ಪುತ್ತಿದ್ದರು. ಅವರಿಂದ ಪ್ರಯೋಜನ ಪ ಸರ್‌ಹಿಂದ್‌ಗೆ ಮರಳಿದರು. ಆರಾಧನೆ ಮತ್ತು ದೇವ ಸ್ಮರಣೆಯಲ್ಲಿ ತುಂಬಾ ಮಗ್ನ ತೊಡಗಿದರು. ಅವರ ಸ್ಥಾನ ಇನ್ನೂ ಉನ್ನತಗೊಂಡಿತು. ಹಝ್ರತ್ ಬಾಕೀ ಬಿಲ್ಲಾಹ ಭೇಟಿಯಾಗಲು ಮತ್ತೆ ದೆಹಲಿಗೆ ಬಂದರು. ಈಗ ಗುರು ಅವರನ್ನು ಜನರ ಶಿಕ್ಷಣ ಬೋಧನೆಗಾಗಿ ಲಾಹೋರಿಗೆ ಕಳುಹಿಸಿದರು. ಅವರು ಅಲ್ಲಿ ವಾಸಿಸುತ್ತಿರುವಾಗಲೇ ಹ ಬಾಕೀ ಬಿಲ್ಲಾಹ್(ರ) ನಿಧನರಾದ ಸುದ್ದಿ ಸಿಕ್ಕಿತು. ಅವರು ದೆಹಲಿಗೆ ಬಂದರು. ಜಹಾಂ ಆಡಳಿತ ಕಾಲವಾಗಿತ್ತದು. ಶೈಖ್ ಫರೀದ್ ಮತ್ತು ಸಾಮ್ರಾಜ್ಯದ ಇತರ ಮು ಅಧಿಕಾರಿಗಳೊಂದಿಗೆ ಅವರು ಸಂಬಂಧ ಬೆಳೆಸಿದರು. ಅಕ್ಬರ್‌ನಿಂದ ಜಾರಿಗೆ ನವೀನಾಚಾರಗಳನ್ನು ಕೊನೆಗೊಳಿಸಲು ಮತ್ತು ಶರೀಅತ್ ಕಾನೂನುಗಳನ್ನು ಜಾರಿಗೊ ಅವರನ್ನು ಸನ್ನದ್ಧಗೊಳಿಸಿದರು. ನಿಧಾನವಾಗಿ ಅವರ ಪ್ರಭಾವ ಕ್ಷೇತ್ರ ಬಹಳ ವಿಸ್ತ

ದರಬಾರಿಗೆ ಆಹ್ವಾನ

ಮತ್ಸರದಿಂದಾಗಿ ಜನರು ಅವರ ವಿರುದ್ಧ ಜಹಾಂಗೀರ್‌ನಲ್ಲಿ ಚಾಡಿ ಹೇ ಜಹಾಂಗೀರನು ಅವರನ್ನು ದರಬಾರಿಗೆ ಕರೆಸಿದ. ಅವರಿಂದ ಕೆಲವು ವಿಷಯಗಳಲ್ಲಿ ಸ್ಪಷ್ಟಿ ಬಯಸಿದ. ಉತ್ತರದಿಂದ ಸಮಾಧಾನಪಟ್ಟ. ಆದರೆ ಅಸೂಯೆ ಪಡುವವರಂತು ಹಾನಿಯನ್ನುಂಟು ಮಾಡಬಯಸಿದರು. ಅಕ್ಬರನ ಕಾಲದಿಂದ ಬಾದಶಾಹನಿಗೆ ಸಾ ವೆರಗುವುದು ಆಸ್ಥಾನದ ಶಿಷ್ಟಾಚಾರದಲ್ಲಿ ಸೇರಿತ್ತು. ಅವರು ಆಸ್ಥಾನಕ್ಕೆ ಹೋ ಸಾಷ್ಟಾಂಗವೆರಗಲಿಲ್ಲ. ಅವರ ಶಿರವು ಅಲ್ಲಾಹನ ಹೊರತು ಬೇರೆಯವರ ಮುಂದೆ ಸಾಧ್ಯವಿರಲಿಲ್ಲ ಎಂಬುದು ಸ್ಪಷ್ಟ. ಅಸೂಯೆಗಾರರು ಅದನ್ನು ಅಸಭ್ಯತೆ ಎಂದು

ದಶಾಹನನ್ನು ಉದ್ರೇಕಿಸಿದರು. ಜಹಾಂಗೀರ್ ಕ್ರುದ್ಧನಾಗಿ ಗ್ವಾಲಿಯರ್‌ನ ಕೋಟೆಯಲ್ಲಿ ವರನ್ನು ಸೆರೆಯಾಗಿರಿಸಿದ. ಅವರು ಅಲ್ಲೂ ಸುಮ್ಮನಿರಲಿಲ್ಲ. ಕೈದಿಗಳ ಸುಧಾರಣೆಯ ಕಡೆಗೆ ಮನ ನೀಡಿದರು. ಕೆಲವೇ ದಿನಗಳಲ್ಲಿ ಬಹಳಷ್ಟು ಕೈದಿಗಳನ್ನು ಬದಲಾಯಿಸಿ ಬಿಟ್ಟರು. ಹಳಷ್ಟು ಮುಸ್ಲಿಮೇತರ ಕೈದಿಗಳು ಪ್ರಭಾವಿತರಾಗಿ ಇಸ್ಲಾಮ್‌ನೊಳಗೆ ಪ್ರವೇಶಿಸಿದರು. ತ್ಯಂತ ಸಜ್ಜನ ಮತ್ತು ಧರ್ಮನಿಷ್ಠರಾಗಿ ಬಿಟ್ಟರು. ಒಂದು ವರ್ಷದ ನಂತರ ಜಹಾಂಗೀರನ ಪ್ಪುಕಲ್ಪನೆ ದೂರಗೊಂಡಿತು. ಅವರನ್ನು ಬಿಡುಗಡೆಗೊಳಿಸಿ ತನ್ನೊಂದಿಗೆ ಇರಿಸಿಕೊಂಡ. ಸ್ವತಃ ನೂ ಅವರ ಅನುಚರನಾಗಿ ಬಿಟ್ಟ. ತನ್ನ ಪುತ್ರ ಶಾಹಜಹಾನನಿಗೂ ಆತನಿಂದ ವಿಧೇಯತೆಯ ಾರು ಮಾಡಿಸಿದ. ಈಗ ಅವರಿಗೆ ಪರಿಸ್ಥಿತಿಯನ್ನು ಸುಧಾರಿಸುವ ಭಾರಿ ಅವಕಾಶ ಒದಗಿತು. ಹಳ ವರ್ಷದ ತನಕ ಬಾದಶಾಹನೊಂದಿಗಿದ್ದರು.

ಅರಸ, ನಾಯಕರು ಮತ್ತು ಆಡಳಿತ ಸಿಬ್ಬಂದಿಗಳ ಸುಧಾರಣೆ ಹಾಗೂ ಆ ಮೂಲಕ ಳಿತಿನ ಸ್ಥಾಪನೆ ಮತ್ತು ಕೆಡುಕಿನ ನಿರ್ಮೂಲನೆಗಾಗಿ ಪೂರ್ಣ ಪ್ರಯತ್ನ ಮಾಡಿದರು. ಅವರು ಮೇಣ ಈ ಕೆಳಗಿನ ವಿಷಯಗಳಲ್ಲಿ ಜಹಾಂಗೀರನನ್ನು ಸಿದ್ಧಗೊಳಿಸಿದರು:

1. ಬಾದಶಾಹನಿಗೆ ಸಲ್ಲಿಸುವ ಗೌರವ ಸಾಷ್ಟಾಂಗ ರದ್ದುಗೊಳಿಸಬೇಕು.

2. ಗೋವಧೆಯ ಸಾರ್ವಜನಿಕ ಅನುಮತಿ ನೀಡಬೇಕು.

3. ಬಾದಶಾಹ ಮತ್ತು ನಾಯಕರು ಸಾಮೂಹಿಕ ನಮಾಝನ್ನು ಪಾಲಿಸಬೇಕು.

4. ನ್ಯಾಯಾಧೀಶರನ್ನು ನೇಮಿಸಬೇಕು ಮತ್ತು ಶರೀಅತ್ ನ್ಯಾಯಾಲಯಗಳನ್ನು ಪಿಸಬೇಕು.

5. ಎಲ್ಲ ನವೀನಾಚಾರ ಮತ್ತು ಶರೀಅತ್ ವಿರೋಧಿ ಕೆಡುಕುಗಳನ್ನು ಕೊನೆ ಳಿಸಬೇಕು.

6. ಇಸ್ಲಾಮೇತರ ಕಾನೂನನ್ನು ರದ್ದುಗೊಳಿಸಬೇಕು.

7. ಮುರಿದ ಅಥವಾ ಧ್ವಂಸಗೊಂಡ ಮಸೀದಿಗಳನ್ನು ದುರಸ್ತಿಗೊಳಿಸಬೇಕು.

ಈಗ ಅವರ ಪ್ರಾಯ ಬಹಳ ಹೆಚ್ಚಿತ್ತು. ಕೊನೆಯಲ್ಲಿ ಸರ್‌ಹಿಂದ್‌ಗೆ ಹೋದರು. ಲ್ಲೇ ಕ್ರಿ.ಶ. 1624ರಲ್ಲಿ ನಿಧನ ಹೊಂದಿದರು. ಹಝ್ರತ್ ಮುಜದ್ದಿದ್‌ರ(ರ) ಪ್ರಮುಖ ವೆಗಳು:

1. ಅವರು ಆಡಳಿತದ ಹೊಣೆಗಾರ ನಾಯಕರು, ಸ್ವತಃ ಜಹಾಂಗೀರ್ ಮತ್ತು ಅವನ ತ್ರ ಶಾಹಜಹಾನನ ತರಬೇತಿ ಮಾಡಿ ಅಕ್ಬರನು ಹರಡಿದ ಪಥಭ್ರಷ್ಟತೆಯನ್ನು ಬಹಳ ಟ್ಟಿಗೆ ಕೊನೆಗೊಳಿಸಿದರು.

2. ಕೆಟ್ಟ ವಿದ್ವಾಂಸರಿಂದ ತರತರದ ಕೆಡುಕುಗಳು ಪ್ರಕಟಗೊಳ್ಳ ತೊಡಗಿತು. ಅವರು ದರ ದೋಷ ಮತ್ತು ಕೆಡುಕುಗಳನ್ನು ಗುರುತಿಸಿ ಜನರನ್ನು ಇದರ ದುಷ್ಪರಿಣಾಮದಿಂದ ಸಲು ಪ್ರಯತ್ನಿಸಿದರು.

3. ಆ ಕಾಲದ ತಥಾಕಥಿತ ಸೂಫಿಗಳು ಇಸ್ಲಾಮೇತರ ವಿಚಾರಗಳ ಪ್ರಚಾರ ರಂಭಿಸಿದರು. ಅವರು ಈ ತಪ್ಪುಗಳನ್ನು ಗುರುತಿಸಿದರು.

4. ನವೀನಾಚಾರ ಬಹಳ ಪ್ರಬಲವಾಗಿತ್ತು. ಅವರು ನವೀನಾಚಾರವನ್ನು ಅಳಿಸ ಮತ್ತು ಸುನ್ನತ್ತನ್ನು ಜಾರಿಗೊಳಿಸುವ ಏರ್ಪಾಡು ಮಾಡಿದರು. ತನ್ನ ಅನುಚರರ ಜ ವೊಂದನ್ನು ಹರಡಿ ವ್ಯಾಪಕ ಮಟ್ಟದಲ್ಲಿ ಸತ್ಯಧರ್ಮದ ಪ್ರಚಾರ ಮತ್ತು ಜ ಸುಧಾರಣೆಯ ವ್ಯವಸ್ಥೆ ಮಾಡಿದರು.

5. ಅತ್ಯಂತ ಸ್ವಚ್ಛ ಸಾಹಿತ್ಯ ಭಾಷೆಯ ಪತ್ರ ಮತ್ತು ಪರಿಣಾಮಕಾರಿ ಬರಹ ಶೈಲಿಯಿ ಧರ್ಮದತ್ತ ಜನರಲ್ಲಿ ಒಲವು ಮೂಡಿಸಿದರು. ಅವರ ವಿಚಾರ ಚಿಂತನೆ ಮತ್ತು ರಿ ನೀತಿಗಳನ್ನು ಸರಿಪಡಿಸಿದರು. ಈಗಲೂ ಅವರ ಕಾಗದ ಪತ್ರಗಳು ವಿವಿಧ ಭಾಷೆಗಳ ಲಭ್ಯವಾಗುತ್ತದೆ ಮತ್ತು ವಾಚಕರಲ್ಲಿ ನೈಜ ಧಾರ್ಮಿಕ ಸ್ಫೂರ್ತಿಯನ್ನು ಹುಟ್ಟಿಸುತ್ತದೆ.

ಶೈಖ್ ಅಬ್ದುಲ್‌ಹಕ್ ಮುಹದ್ದಿಸ್ ದೆಹಲವಿ(ರ)

ಇವರು ಕ್ರಿ. ಶ. 1551ರಲ್ಲಿ ದೆಹಲಿಯಲ್ಲಿ ಹುಟ್ಟಿದರು. ಇವರ ವಂಶ ಪರಂಪರೆಯ ಬುಖಾರದವರು. ಅಲ್ಲಾವುದ್ದೀನನ ಕಾಲದಲ್ಲಿ ಭಾರತಕ್ಕೆ ಆಗಮಿಸಿದ್ದರು. ದೆಹಲಿಯ ನೆಲೆಸಿದರು. ಅವರ ತಂದೆ ಶೈಖ್ ಸೈಫುದ್ದೀನ್ ಕಾದಿರೀ(ರ) ದೊಡ್ಡ ದಯಾಳು ಮಹಾಪು ಮತ್ತು ಮಹಾನ್ ವಿದ್ವಾಂಸರಾಗಿದ್ದರು. ಇವರು ಪ್ರಾಥಮಿಕ ಶಿಕ್ಷಣ ತರಬೇತಿಯ ಅವರಿಂದಲೇ ಗಳಿಸಿದರು. ತಂದೆಯು ಪುತ್ರನಿಗೆ ಮುಖ್ಯವಾಗಿ ಎರಡು ವಿಷಯಗಳ ಉಪದೇಶಿಸಿದರು.

1. ಯಾರೊಂದಿಗೂ ಜ್ಞಾನಾಧಾರಿತ ಚರ್ಚೆಗಳಲ್ಲಿ ಜಗಳ ಕಾಯಬೇಡ. ತೊಂ ಕೊಡಬೇಡ. ವಿರೋಧಿಯನ್ನು ಸತ್ಯದಲ್ಲಿ ಕಂಡರೆ ಕೂಡಲೇ ಆತನ ಮಾತು ಮ ಪುರಾವೆಗಳನ್ನು ಒಪ್ಪಿಕೊಳ್ಳು.

2. ಐಶ್ವರ್ಯ, ಸಂಪತ್ತು, ಸ್ಥಾನ, ಗೌರವಗಳಿಗೆ ಎಂದೂ ದುರಾಸೆ ಪಡಬೇಡ.

ಅವರು ಇದನ್ನು ಪಾಲಿಸಿದರು ಮತ್ತು ವಿದ್ವಾಂಸರು ಅನುಸರಿಸಬಹುದಾದ ಅತ್ಯುತ್ತ ಮಾದರಿಯನ್ನು ಬಿಟ್ಟು ಹೋದರು ಎಂಬುದಕ್ಕೆ ಅವರ ಪೂರ್ಣ ಬದುಕು ಸಾಕ್ಷಿಯಾಗಿ ಅವರಿಗೆ ಬಾಲ್ಯದಿಂದಲೇ ಓದು ಬರಹದಲ್ಲಿ ಬಹಳ ಆಸಕ್ತಿಯಿತ್ತು. ಅಲ್ಲಾಹ ಅಸಾಮಾನ್ಯ ಸ್ಮರಣ ಶಕ್ತಿಯನ್ನು ಅನುಗ್ರಹಿಸಿದ್ದ. ಅವರು ಬಹಳ ಏಕಾಗ್ರತೆ, ಪರಿಶ್ರ ಮತ್ತು ಪೂರ್ಣ ಗಮನದೊಂದಿಗೆ ವಿದ್ಯೆ ಗಳಿಸಿದರು. ಅತಿ ಕಡಿಮೆ ಪ್ರಾಯದಲ್ಲೇ ವಿಶ ಅರ್ಹತೆ ಗಳಿಸಿದರು. ಏಕಾಗ್ರತೆಯ ಅವಸ್ಥೆ ಹೇಗಿತ್ತೆಂದರೆ ಅಧ್ಯಯನಕ್ಕೆ ಕುಳಿತುಕೊಂಡ ಅನೇಕ ಸಲ ದೀಪದ ಬೆಂಕಿ ತಾಗಿ ಅವರ ಮುಂಡಾಸು ಉರಿಯ ತೊಡಗುತ್ತಿತ್ತು. ಅ ಹಣೆಗೆ ವ್ಯಾಪಿಸಿದಾಗ ಎಚ್ಚರಗೊಳ್ಳುತ್ತಿದ್ದರು. ಪಾಠಶಾಲೆಯು ಮನೆಯಿಂದ ಎರಡು ಮೈ ದೂರದಲ್ಲಿತ್ತು. ದಿನದಲ್ಲಿ ಅವರು ಎರಡು ಬಾರಿ ಹೋಗಿ ಬರುತ್ತಿದ್ದರು. ಶಾಲಾ ಆರಂ ಮೊದಲೇ ಹಾಜರಾಗುತ್ತಿದ್ದರು. ಯಾವತ್ತು ಯಾವ ಗುರುವಿನಲ್ಲೂ ಅವರ ಬ ದೂರುಗಳಿರಲಿಲ್ಲ. ದೆಹಲಿಯಲ್ಲಿ ವ್ಯಾಸಂಗ ಪೂರ್ತಿಗೊಳಿಸಿದ ನಂತರ ಅವರು ಫತೇಹ್ ಸಿಕ್ರಿಗೆ ಹೋದರು. ರಾಜಧಾನಿಯಾಗಿದ್ದುದರಿಂದ ವಿವಿಧ ಜ್ಞಾನ ಕಲೆಗಳ ಪ್ರವೀಣರು

ಾಯಿಸಿದ್ದರು. ಅಕ್ಬರನ ಕಾಲವದು. ಆಸ್ಥಾನಿಕ ವಿದ್ವಾಂಸರಾದ ಅಬುಲ್ ಫಝುಲ್, ಝೀ ಮುಂತಾದವರೊಂದಿಗೆ ಭೇಟಿಯಾಯಿತು. ಇಲ್ಲಿನ ಶೈಲಿ ನೋಡಿ ಅವರು ದೆಹಲಿಗೆ ಳಿದರು. ಪ್ರವಚನ ಮತ್ತು ಪಾಠಬೋಧನೆಗಳ ವೃತ್ತಿಯನ್ನು ಅವಲಂಬಿಸಿಕೊಂಡರು. ರು ಪರಿಶ್ರಮದ ಮೂಲಕ ಸಾಮರ್ಥ್ಯವನ್ನು ಬಹಳ ಹೆಚ್ಚಿಸಿಕೊಂಡಿದ್ದರು. ಆದರೂ ರದ ಆಸಕ್ತಿಯು ಅವರನ್ನು ಅರೇಬಿಯಾಕ್ಕೆ ಕೊಂಡೊಯ್ದಿತು. ಕ್ರಿ.ಶ. 1588ರಲ್ಲಿ ಪವಿತ್ರ ಕ್ಕಾ ತಲುಪಿದರು. ಹಜ್ಜ್ ನಿರ್ವಹಿಸಿದ ನಂತರ ಅಲ್ಲಿನ ವಿದ್ವಾಂಸರಿಂದ ಹದೀಸ್ ರವನ್ನು ಪೂರ್ಣಗೊಳಿಸಿದರು. ಮೂರು ವರ್ಷಗಳ ನಂತರ ದೆಹಲಿಗೆ ಮರಳಿ ಬೋಧನೆ, ಚನ, ಗ್ರಂಥರಚನೆ ಮತ್ತು ಸಂಕಲನಗಳಲ್ಲಿ ತೊಡಗಿಕೊಂಡರು. ಅವರು ಅತ್ಯಂತ ನವಾಗಿಯೇ ಜನರಲ್ಲಿ ಧರ್ಮದ ಸರಿಯಾದ ಜ್ಞಾನ ಹರಡಲಾರಂಭಿಸಿದರು. ಸುನ್ನತ್‌ನ ರವು ತನ್ನಷ್ಟಕ್ಕೆ ನವೀನಾಚಾರದ ದಾರಿ ಮುಚ್ಚಿತ್ತು. ಈ ರೀತಿ ಅವರು ಜನರು ್ರವಂತಹ ರೀತಿಯಲ್ಲಿ ನವೀನಾಚಾರಗಳ ದಮನದಲ್ಲಿ ಪ್ರಮುಖ ಪಾತ್ರ ವಹಿಸಿದರು. ರ ಪ್ರಯತ್ನದಿಂದಾಗಿ ಹದೀಸ್ ಜ್ಞಾನ ವ್ಯಾಪಿಸಿತು. ಅಲ್ಲಾಹನು ಅವರಿಗೆ ದೀರ್ಘಾಯುಷ್ಯ ಿದ. ಅವರು ಅಕ್ಬರ್, ಜಹಾಂಗೀರ್ ಮತ್ತು ಶಾಹಜಹಾನನ ಕಾಲದ ಅನೇಕ ರುಕರು ಮತ್ತು ಸಿಬ್ಬಂದಿಗಳೊಂದಿಗೆ ಸಂಬಂಧ ಸ್ಥಾಪಿಸಿ ನವೀನಾಚಾರದಿಂದ ರವಿರುವ ಮತ್ತು ಸುನ್ನತನ್ನು ಆಚರಣೆಗೆ ತರುವ ಕಡೆಗೆ ಅವರ ಗಮನ ಸೆಳೆದರು. ಝುತ್ ಬಾಕೀ ಬಿಲ್ಲಾಹ್‌ರೊಂದಿಗೂ ಅವರ ಗಾಢ ಸಂಬಂಧವಿತ್ತು. ಅವರ ಪರಿಶ್ರಮ ವಾಗಿ ಉತ್ತರ ಭಾರತದಲ್ಲಿ ಹದೀಸ್ ಜ್ಞಾನ ಪಸರಿಸಿತು. ಅವರಿಗಿಂತ ಮುಂಚೆ ಈ ನಲ್ಲಿ ಬಹಳ ಕಡಿಮೆಯೇ ಗಮನ ಹರಿಸಲಾಗುತ್ತಿತ್ತು. ತೊಂಬತ್ನಾಲ್ಕು ವರ್ಷ ಬದುಕಿ ಶ. 1642ರಲ್ಲಿ ನಿಧನ ಹೊಂದಿದರು.

ಾ್ಯಸ:

1. ಯಥಾ ರಾಜಾ ತಥಾ ಪ್ರಜಾದಿಂದ ನೀವು ಯಾವ ಅರ್ಥ ಗ್ರಹಿಸುತ್ತೀರಿ?
2. ಪ್ರಜೆಗಳು ತಮ್ಮ ಆಡಳಿತಗಾರರ ಪ್ರಭಾವವನ್ನು ಅಷ್ಟಾಗಿ ಯಾಕೆ ಸ್ವೀಕರಿಸುತ್ತಾರೆ?
3. ಅಕ್ಬರನ ವಿಷಯದಲ್ಲಿ ಈ ಗಾದೆ ಯಾಕೆ ಅನ್ವಯವಾಗುವುದಿಲ್ಲ?
4. ಹಝ್ರತ್ ಖ್ವಾಜಾ ಬಾಕೀ ಬಿಲ್ಲಾಹ್‌ರ ಬಗ್ಗೆ ನೀವೇನು ತಿಳಿದಿದ್ದೀರಿ?
5. ಅವರು ಪರಿಸ್ಥಿತಿಯ ಸುಧಾರಣೆಯ ನಿಟ್ಟಿನಲ್ಲಿ ಯಾವೆಲ್ಲ ಪ್ರಯತ್ನಗಳನ್ನು ಮಾಡಿದರು?
6. ಅಕ್ಬರನ ಅಧಿಕಾರಿಗಳಲ್ಲಿ ಯಾರೆಲ್ಲ ಅವರಿಂದ ವಿಶೇಷವಾಗಿ ಪ್ರಭಾವಿತರಾದರು?
7. ಹಝ್ರತ್ ಮುಜದ್ದಿದ್ ಅಲ್ಫಸಾನಿಯವರ(ರ) ಬಗ್ಗೆ ನೀವೇನು ತಿಳಿದಿರುತ್ತೀರಿ?
8. ಅವರು ಜಹಾಂಗೀರನ ಆಸ್ಥಾನಕ್ಕೆ ಯಾಕೆ ಆಹ್ವಾನಿಸಲ್ಪಟ್ಟರು.

9. ಅವರನ್ನು ಯಾಕಾಗಿ ಜೈಲಿಗೆ ಹಾಕಲಾಯಿತು? ಸೆರೆಮನೆಯಲ್ಲಿ ಅವರು ಯ ಸೇವೆ ಸಲ್ಲಿಸಿದರು?
10. ಜೈಲಿನಿಂದ ಮರಳಿದ ನಂತರ ಅವರೇನು ಮಾಡಿದರು?
11. ಅವರ ಸೇವಾ ಕಾರ್ಯಗಳ ಕಡೆಗೆ ಬೆಳಕು ಚೆಲ್ಲಿರಿ.
12. ಶೈಖ್ ಅಬ್ದುಲ್‌ಹಕ್ ಮುಹದ್ದಿಸ್ ದೆಹಲವಿಯವರ(ರ) ಬಗ್ಗೆ ನೀವ ಅರಿತಿರುತ್ತೀರಿ?
13. ಅವರ ಅತ್ಯಂತ ಮಹತ್ಸಾಧನೆ ಯಾವುದು?
14. ಈ ಕೆಳಗಿನ ಇಸವಿಗಳು ಯಾಕೆ ಪ್ರಸಿದ್ಧವಾಗಿವೆ?

ಕ್ರಿ.ಶ. 1551, ಕ್ರಿ.ಶ. 1563, ಕ್ರಿ.ಶ. 1588, ಕ್ರಿ.ಶ. 1603, ಕ್ರಿ.ಶ. 1(ಕ್ರಿ.ಶ. 1642,

●●

ಧ್ಯಾಯ-6

ಶಾಹಜಹಾನ್

(ಕ್ರಿ.ಶ. 1628-1658)

ರಂಭಿಕ ಪರಿಸ್ಥಿತಿ

ರಾಜಕುಮಾರ ಖುರ್ರಮ್‌ನ ನಿಜನಾಮವು ಶಹಾಬುದ್ದೀನ್: ಆತನ ಪ್ರಚಂಡ ಶ್ವಿಜಯಗಳಿಂದಾಗಿ ಜಹಾಂಗೀರನು ಆತನಿಗೆ ಶಾಹಜಹಾನನ ಬಿರುದು ನೀಡಿದ. ಕ್ರಿ.ಶ. 92ರಲ್ಲಿ ಲಾಹೋರಿನಲ್ಲಿ ಹುಟ್ಟಿದ. ಆತನೂ ತಂದೆ ತಾಯಿಯಂತಿದ್ದ. ಮಾರ್ವಾಡದ ಶಾನ ಪುತ್ರಿ ಮತ್ತು ಅಕ್ಬರನ ಪ್ರಮುಖ ಆಸ್ಥಾನಿಕ ಮಾನ್‌ಸಿಂಗ್‌ನ ಸೋದರಿಯಾಗಿದ್ದ ರ್ವ ರಜಪೂತ ರಾಣಿಯ ಗರ್ಭದಿಂದ ಜನ್ಮ ತಳೆದಿದ್ದ. ಆದರೆ ಕಣ್ತೆರೆದಾಗ ಅರಮನೆ ತ್ತು ದರಬಾರಿನ ವಾತಾವರಣ ಬದಲಾಗುತ್ತಲಿತ್ತು. ಇಸ್ಲಾಮಿಸ್ಟ್ ಜನರ ಪ್ರಯತ್ನಗಳಿಂದಾಗಿ ಸ್ಲಾಮೇತರ ಪ್ರಭಾವಗಳು ಕೊನೆಗೊಳ್ಳುತ್ತಲಿತ್ತು. ಅಕ್ಬರ್ ಜಾರಿಗೆ ತಂದಿದ್ದ ೀನಾಚಾರಗಳು ಮತ್ತು ಬಹುದೇವ ವಿಶ್ವಾಸಿ ನಂಬಿಕೆ ಹಾಗೂ ಕರ್ಮಗಳ ವಿರುದ್ಧ ಯಕರು ಮತ್ತು ಪ್ರಜೆಗಳಲ್ಲಿ ಸಾಮಾನ್ಯವಾಗಿ ಅತೃಪ್ತಿ ಕಂಡುಬರುತ್ತಿತ್ತು. ಈ ತಾವರಣ ಶಾಹಜಹಾನನ ಮೇಲೂ ಪ್ರಭಾವ ಬೀರಿತು. ಯೋಗ್ಯ ಶಿಕ್ಷಣ ತರಬೇತಿಯು ಶ್ವಾಸ ಕರ್ಮಗಳನ್ನೂ ಸುಧಾರಿಸಿತು. ಯೌವನಕ್ಕೆ ಸರಿಯಾಗಿ ಮುಜದ್ದಿದ್ ಅಲ್ಫಸಾನಿಯವ ಂದಿಗಿನ(ರ) ನಂಬಿಕೆ ಮತ್ತು ವಿಧೇಯತೆಯ ಕರಾರು ಭಾಗ್ಯದ ದ್ವಾರ ತೆರೆಯಿತು. ಪ್ಪತ್ತು ವರ್ಷದವನಾದಾಗ ಆಸಿಫ್ ಖಾನನ ಪುತ್ರಿ ಅರ್ಜುಮಂದ್ ಬಾನುವಿನೊಂದಿಗೆ ಾಹ ನಡೆಯಿತು. ಅರ್ಜುಮಂದ್‌ಬಾನು ಅತ್ಯಂತ ಸುಂದರಿ ಮತ್ತು ಉತ್ತಮ ಪ್ರವೃತ್ತಿಯ ಹಿಳೆಯಾಗಿದ್ದಳು. ಪತಿಯ ಕಷ್ಟ ಕಾರ್ಪಣ್ಯಗಳಲ್ಲಿ ಸರಿಯಾಗಿ ಪಾಲ್ಗೊಂಡಿದ್ದಳು. ಹಜಹಾನ್ ಆಕೆಯನ್ನು ಅತೀ ಹೆಚ್ಚು ಪ್ರೀತಿಸುತ್ತಿದ್ದ.

ಟ್ಟಾಭಿಷೇಕ

ಜಹಾಂಗೀರನ ನಿಧನಾನಂತರ ಅವನ ಉತ್ತರಾಧಿಕಾರಿಯ ಸಮಸ್ಯೆ ಬಹಳ ಜಟಿಲ ಯಿತು. ಜಹಾಂಗೀರನ ಇಬ್ಬರು ಹಿರಿಯ ಪುತ್ರರಾದ ಖುಸ್ರೂ ಮತ್ತು ಪರ್ವೇಝ್ ಆತನ ವಿತ ಕಾಲದಲ್ಲಿಯೇ ನಿಧನರಾಗಿದ್ದರು. ಶಾಹಜಹಾನ್ ಮೊದಲೇ ತಂದೆಯ ಕ್ರೋಧಕ್ಕೆ ತ್ರನಾಗಿದ್ದ. ರಾಜಧಾನಿಯಿಂದ ದೂರ ದಕ್ಷಿಣದಲ್ಲಿ ಅಲೆದಾಡುತ್ತಲಿದ್ದ. ನೂರ್‌ಜಹಾನ್

ಆತನ ಬದಲು ತನ್ನ ಅಳಿಯ ಶಹರ್‌ಯಾರ್‌ನ ಪೀಠಾರೋಹಣ ಮಾಡ ಬಯಸಿದ್ದ
ಇತ್ತ ಆಸಿಫ್ ಖಾನ್ ತನ್ನ ಸಹೋದರಿಯ ಉದ್ದೇಶದಲ್ಲಿ ತಡೆಯಾಗಿದ್ದ. ತನ್ನ ಅಳಿ
ಶಾಹಜಹಾನನನ್ನು ಉತ್ತರಾಧಿಕಾರಿಯಾಗಿ ಮಾಡಬಯಸಿದ್ದ. ನಾಯಕರು ಮತ
ಜನಸಾಮಾನ್ಯರ ಬಹುಸಂಖ್ಯೆಯು ಶಾಹಜಹಾನನ ಪರವಾಗಿತ್ತು. ಆಸಿಫ್ ಖಾನನು ಬ
ವಿವೇಕ ಮತ್ತು ಚಾಣಾಕ್ಷತನದಿಂದ ಕಾರ್ಯ ನಿರ್ವಹಿಸಿದ. ಶಾಹಜಹಾನನನ್ನು ದಕ್ಷಿಣದಿ
ಕರೆದು ಪಟ್ಟದ ವಾರೀಸುದಾರರನ್ನಾಗಿಸಿದ. ಶಹರ್‌ಯಾರ್‌ನ ಕಣ್ಣುಗಳನ್ನು ಕೀಳಲಾಯಿ
ನೂರ್‌ಜಹಾನಳಿಗೆ ನಿವೃತ್ತಿ ವೇತನ ನೀಡಿ ಉಳಿದ ದಿನಗಳನ್ನು ಲಾಹೋರಿನಲ್ಲಿ ಕಳೆಯ
ವ್ಯವಸ್ಥೆ ಮಾಡಲಾಯಿತು. ಆಸಿಫ್ ಖಾನನ ಪ್ರಮುಖ ಸೇವೆಗಳ ಪ್ರತಿಫಲವಾಗಿ ಆ
ಹುದ್ದೆಯನ್ನು ಏರಿಸಿ ಗೌರವ ಸನ್ಮಾನಗಳಿಂದ ಅಭಿನಂದಿಸಲಾಯಿತು.

ನವಯುಗ ಒಂದರ ಆರಂಭ

ಪಟ್ಟವನ್ನೇರುತ್ತಲೇ ಅರಸನು ಯಾವ ರೀತಿ ಸುಧಾರಣೆಗಳನ್ನು ಆರಂಭಿಸಿದನೆಂ
ಆಡಳಿತದ ಧೋರಣೆಯಲ್ಲಿ ಮಹತ್ವದ ಬದಲಾವಣೆಗಳುಂಟಾದುವು. ಅಕ್ಬರ್ ಜಾರಿಗೊಳಿ
ಕೆಲವು ನವೀನಾಚಾರಗಳು ಜಹಾಂಗೀರನ ಕಾಲದಲ್ಲೂ ಹಾಗೇ ಉಳಿದು ಬಿಟ್ಟಿ
ಶಾಹಜಹಾನನು ಅವುಗಳ ನಿರ್ಮೂಲನದ ಬಗ್ಗೆ ಯೋಚಿಸಿದ. ಸರ್ಕಾರಿ ವ್ಯವಹಾರಗಳ
ಹಿಜರಿ ಶಕೆಯನ್ನು ಬಳಸುವಂತೆ ಆದೇಶಿಸಿದ. ಆಸ್ಥಾನ ಸಾಷ್ಟಾಂಗ ಒಂದಲ್ಲ ಒಂದು ರೂಪದ
ಚಾಲ್ತಿಯಲ್ಲಿತ್ತು. ಶಾಹಜಹಾನನು ಅದನ್ನು ಮುಕ್ತಾಯಗೊಳಿಸಿದ. ಬದುಕಿನ ಎ
ಕ್ಷೇತ್ರಗಳಲ್ಲಿ ಇಸ್ಲಾಮ್ ಮತ್ತು ಇಸ್ಲಾಮಿ ಚಿಹ್ನೆಗಳನ್ನು ಗಮನದಲ್ಲಿರಿಸತೊಡಗಿ
ವ್ಯಾಜ್ಯಗಳ ತೀರ್ಮಾನಗಳು ಶರೀಅತ್ ಪ್ರಕಾರ ನಡೆಯತೊಡಗಿತು. ಒಟ್ಟಿನಲ್ಲಿ ಪ್ರಯಾಣ
ಗತಿಪೂರ್ಣ ಬದಲಾದ ಕಾರಣ ವೇಗದಲ್ಲಿ ಸುಧಾರಣೆಗಳಾದುವು.

ಬಂಡಾಯಗಳು

ಪ್ರಭುತ್ವದ ವಂಶದಲ್ಲಿ ಈಗ ಬಂಡಾಯದ ಆಶಂಕೆ ಇರುವ ಯಾವನೇ ಶತ್ರುವಿರಲಿ
ಒಬ್ಬೊಬ್ಬರಾಗಿ ಎಲ್ಲರೂ ದಾರಿಯಿಂದ ಸರಿಸಲ್ಪಟ್ಟರು. ಆದರೆ ಪೀಠಾರೋಹಣವಾಗುತ್ತ
ದೇಶದ ಕೆಲವು ದಿಕ್ಕುಗಳಲ್ಲಿ ಬಂಡಾಯ ನಡೆಯತೊಡಗಿದವು.

ಬುಂದೇಲರ ಬಂಡಾಯ

ಅಬುಲ್ ಫಝುಲ್‌ನ ಹಂತಕ ವೀರಸಿಂಗ್ ಬುಂದೇಲನಿಗೆ ಜಹಾಂಗೀರನು ಹು
ಮತ್ತು ಜಾಗೀರನ್ನು ನೀಡಿದ. ವೀರಸಿಂಗನು ಅವಕಾಶದಿಂದ ತನ್ನ ಶಕ್ತಿಯನ್ನು ಭ
ವೃದ್ಧಿಸಿಕೊಂಡಿದ್ದ. ಆದರೆ ಆತ ಜೀವನದಾದ್ಯಂತ ಮೊಗಲರಿಗೆ ವಿಧೇಯನಾಗಿದ್ದ. ಅ
ನಿಧನಾನಂತರ ಆತನ ಪುತ್ರ ಜೊಜಾರ್‌ಸಿಂಗ್ ಉತ್ತರಾಧಿಕಾರಿಯಾದಾಗ ಆತ ಶಾಹಜಹಾ
ವಿರುದ್ಧ ಬಂಡಾಯವೆದ್ದ. ಬಾದಶಾಹನ ಅನುಮತಿಯ ಹೊರತು ರಾಜಧಾನಿಯಿ
ಓಡಿಹೋಗಿ ಔರ್‌ಚಾ(ಬುಂದೇಲ್‌ಖಂಡ್) ತಲುಪಿದ. ಅಲ್ಲಿ ಕೋಟೆಯಲ್ಲಿ ಅವಿತು ಯು

ಸ್ಥಿತೆ ನಡೆಸತೊಡಗಿದ. ಶಾಹಜಹಾನನು ಅತ್ಯಂತ ಚಾಣಾಕ್ಷತನದಿಂದ ಸುತ್ತಮುತ್ತಲ ಾಗಲ್ ಸೇನೆಗಳಿಗೆ ಒಟ್ಟಿಗೆ ದಾಳಿ ನಡೆಸುವಂತೆ ಆದೇಶಿಸಿದ. ಮೊಗಲರು ನಾಲ್ದೆಸೆಯಿಂದ ತ್ತುವರಿದರು. ಯುದ್ಧದ ಸಾವು ನೋವುಗಳ ನಂತರ ಜೊಜಾರ್‌ಸಿಂಗ್ ಆಯುಧ ಗಿಡುವಂತೆ ನಿರ್ಬಂಧಿತನಾದ. ಆತ ಹಾಜರಾಗಿ ಕ್ಷಮೆ ಕೋರಿದ. ಬಾದಶಾಹನು ಪ್ರಾಣದ ನಯ ನೀಡಿದ. ಆದರೆ ಆಸ್ತಿ ಮತ್ತು ಹುದ್ದೆಯನ್ನು ಕಡಿತಗೊಳಿಸಿದ. ಕ್ರಿ.ಶ. 1635ರಲ್ಲಿ ಕ ಮತ್ತೆ ಬಂಡಾಯವೆದ್ದ. ಕೊನೆಗೆ ಕೆಟ್ಟ ರೀತಿಯಲ್ಲಿ ಪರಾಜಯ ಕಂಡ. ಪರಿಣಾಮವಾಗಿ ಯುಂ ಕೊಲ್ಲಲ್ಪಟ್ಟ. ಇಡೀ ವಂಶ ನಾಶಗೊಂಡಿತು.

ಾನ್ ಜಹಾನ್ ಲೋದಿಯ ಬಂಡಾಯ (ಕ್ರಿ. ಶ. 1629)

ಪಟ್ಟಾಭಿಷೇಕದ ದ್ವಿತೀಯ ವರ್ಷ ಆಸ್ಥಾನದ ಪ್ರಮುಖ ಅಧಿಕಾರಿ ಖಾನ್ ಜಹಾನ್ ಾದಿ ಬಂಡಾಯವೆದ್ದ. ಆತನ ಬಂಡಾಯದ ನೈಜ ಕಾರಣ ಪ್ರಭುತ್ವ ಕ್ರೋಧದ ನಿರಾಧಾರ ದೇಹವಾಗಿತ್ತು. ವಿಷಯವೇನೆಂದರೆ ಜಹಾಂಗೀರನ ನಿಧನದಿಂದಾಗಿ ಉತ್ತರಾಧಿಕಾರಿಯ ುಸ್ಯೆ ಉದ್ಭವಿಸಿದಾಗ ಈ ಅನಿಶ್ಚಿತ ಪರಿಸ್ಥಿತಿಯಿಂದ ಖಾನ್ ಜಹಾನನು ಲಾಭ ಪಡೆದು ಫಘಾನರ ಕಳೆದು ಹೋದ ಅಧಿಕಾರವನ್ನು ಮರಳಿ ಪಡೆಯಲಿಚ್ಛಿಸಿದ. ಏಕೆಂದರೆ ಆತ ುಭವಿ ಮಹಾದಂಡನಾಯಕ ಮತ್ತು ಅಧಿಕಾರಿಯಾಗಿದ್ದ. ಅದರೊಂದಿಗೆ ಅಫಘಾನ್ ಶಜನಾಗಿದ್ದರಿಂದ ಅಫಘಾನರೆಲ್ಲರ ಬೆಂಬಲ ಕೂಡಾ ಅವನಿಗೆ ಪ್ರಾಪ್ತವಾಗಿತ್ತು. ಆದ್ದರಿಂದ ಕನ ಇರಾದೆ ಇನ್ನೂ ಹೆಚ್ಚು ಕೆಟ್ಟಿತು. ಮತ್ತೆ ಶಾಹಜಹಾನನ ಚಾಣಾಕ್ಷತನ ಮತ್ತು ಫ್‌ಖಾನನ ಬೆಂಬಲದಿಂದಾಗಿ ವಿಜಯದ ಭರವಸೆ ಇಲ್ಲದಾದಾಗ ಶಾಹಜಹಾನನಿಂದ ಮೆ ಯಾಚಿಸಿದ. ಶಾಹಜಹಾನನು ಕ್ಷಮಿಸಿದನಾದರೂ ಖಾನ್ ಜಹಾನ್ ಲೋದಿಗೆ ಮಾಧಾನವಾಗಲಿಲ್ಲ. ಕೊನೆಗೆ ಆತ ದರಬಾರಿನಿಂದ ಓಡಿಹೋಗಿ ದಕ್ಷಿಣ ತಲುಪಿದ. ಸೈನ್ಯ ಟ್ಗೂಡಿಸಿ ಗಲಾಟೆಯೆಬ್ಬಿಸ ತೊಡಗಿದ. ಖಾನ್ ಜಹಾನನ ವಿಶಿಷ್ಟ ವ್ಯಕ್ತಿತ್ವದ ಬಗ್ಗೆ ಹಜಹಾನನಿಗೆ ಅರಿವಿತ್ತು. ಇತ್ತ ದಕ್ಷಿಣದ ಆಡಳಿತಗಾರರು ಆತನಿಗೆ ಸಹಕರಿಸಿ ಸ್ಥಿತಿಯನ್ನು ಇನ್ನೂ ಸಂಕೀರ್ಣ ಗೊಳಿಸಿದ್ದರು. ಆದ್ದರಿಂದ ಅವರನ್ನು ಎದುರಿಸಲು ಸ್ವತಃ ಹಜಹಾನನೇ ಮುಂದುವರಿದ. ಮೊಗಲ ಸೈನ್ಯವು ಮುಂದುವರಿಯುತ್ತಿರು ವುದನ್ನು ಕಂಡು ಣದ ಜನರು ಬೆಂಬಲದಿಂದ ಹಿಂದೆ ಸರಿದರು. ಖಾನ್ ಜಹಾನನು ಅಲ್ಲಿಂದ ಓಡಿಹೋಗಿ ಪೂತಾನದಲ್ಲಿ ಅಲೆದಾಡತೊಡಗಿದ. ಆದರೆ ಎಲ್ಲೂ ಸಹಾಯ ಸಹಕಾರ ದೊರೆಯಲಿಲ್ಲ. ನೆಗೆ ಕಳಿಂಗದಲ್ಲಿ ಸುತ್ತುವರಿಯಲ್ಪಟ್ಟು ಕೊಲೆಯಾದ.

ಕ್ಷಿಣ ಮತ್ತು ಗುಜರಾತ್‌ನ ಕ್ಷಾಮ (ಕ್ರಿ. ಶ. 1630)

ಬಾದಶಾಹ ಇನ್ನೂ ಖಾನ್ ಜಹಾನನನ್ನು ಬೆನ್ನಟ್ಟುತ್ತಿದ್ದ. ಆ ದಿನಗಳಲ್ಲಿ ದಕ್ಷಿಣ ತ್ತು ಗುಜರಾತ್‌ನಲ್ಲಿ ಭೀಕರ ಕ್ಷಾಮ ತಲೆದೋರಿತು. ಸಾವಿರಾರು ಜನರು ಹಸಿವು ಯಾರಿಕೆಯಿಂದ ಅಸುನೀಗತೊಡಗಿದರು. ಶಾಹಜಹಾನಿಗೆ ಅವರ ಮೇಲೆ ಬಹಳ

ಕರುಣೆಯುಕ್ಕಿತು. ಆತ ತನ್ನ ಸಾಮ್ರಾಜ್ಯದ ಕ್ಷಾಮ ಪೀಡಿತ ಎಲ್ಲ ಪ್ರದೇಶಗಳಲ್ಲಿ ಛತ್ರಗಳ ತೆರಸಿದ. ಅಲ್ಲಿ ಬಡವರಿಗೆ ಉಚಿತ ಊಟ ದೊರೆಯತೊಡಗಿತು. ಸರಕಾರಿ ಖಜಾನೆಯಿ ಬಡವರಿಗೆ ಧಾರಾಳ ನೆರವು ನೀಡಲಾಯಿತು. ಈ ಒಂದು ವರ್ಷದ ಕ್ಷಾಮದ ವಿ ಶಾಹಜಹಾನನ ಮಿಕ್ಕುಳಿದ ಪೂರ್ಣ ಕಾಲವು ಎಷ್ಟು ಶಾಂತಿ, ಸುಭಿಕ್ಷೆ ಮತ್ತು ಸಂತುಷ್ಟಿಯಿ ಕಳೆಯಿತೆಂದರೆ ಇಡೀ ಇತಿಹಾಸದಲ್ಲಿ ಇದಕ್ಕೆ ನಿದರ್ಶನ ದೊರೆಯುವುದಿಲ್ಲ.

ಮಮ್ತಾಝ್ ಮಹಲಳ ನಿಧನ(ಕ್ರಿ.ಶ. 1631)

ಬಾದಶಾಹ ಇನ್ನೂ ದಕ್ಷಿಣದ ಯುದ್ಧಗಳಿಂದ ಬಿಡುಗಡೆ ಹೊಂದಿರಲಿಲ್ಲ. ಆಗ ಮುದ್ದಿನ ರಾಣಿ ಮಮ್ತಾಝ್ ಮಹಲಳ ಮರಣ ಸಂಭವಿಸಿತು. ಮಮ್ತಾಝ್ ಮಹ ನಿಜನಾಮ ಅರ್ಜುಮಂದ್ ಬಾನು. ಆಕೆ ನೂರ್‌ಜಹಾನಳ ಸೋದರ ಪುತ್ರಿ ಮತ್ತು ಆಸಿ ಖಾನನ ಮಗಳು. ಎಳೆಯ ಪ್ರಾಯದಲ್ಲೇ ಶಾಹಜಹಾನನೊಂದಿಗೆ ವಿವಾಹವಾಗಿತ್ತು. ಜೀ ಪೂರ್ತಿ ಅತ್ಯಂತ ಪ್ರಾಮಾಣಿಕತೆ ಮತ್ತು ಸುಖ ದುಃಖಗಳಲ್ಲಿ ಸಮಾನ ಭಾಗಿಯಾಗಿದ್ದ ಆಕೆಯ ಶ್ಲಾಘನೀಯ ಸದ್ಗುಣಗಳಿಂದ ಬಾದಶಾಹ ಆಕೆಯನ್ನು ಅತೀ ಹೆಚ್ಚು ಪ್ರೀತಿಸುತ್ತಿ ದಕ್ಷಿಣದ ಯುದ್ಧದಲ್ಲಿ ರಾಣಿಯೂ ಜತೆಯಾಗಿದ್ದಳು. ಅಲ್ಲೇ ಓರ್ವ ಪುತ್ರಿಯ ಜನ ವೇಳೆ ಅನಾರೋಗ್ಯ ಪೀಡಿತಳಾದಳು. ಮತ್ತೆ ಮೃತ್ಯು ದವಡೆಯಿಂದ ಪಾರಾಗಲು ಸಾ ವಾಗಲಿಲ್ಲ. ಬಾದಶಾಹನಿಗೆ ಅವಳ ನಿಧನದಿಂದ ಅತ್ಯಂತ ವ್ಯಥೆಯಾಯಿತು. ಮೃತದೇಹವ ಆಗ್ರಾಕ್ಕೆ ತರಲಾಯಿತು. ಮತ್ತೆ ಅವಳ ಗೋರಿಯ ಮೇಲೆ ಶಾಹಜಹಾನನು ಜಗತ್ಪ್ರ ಗುಮ್ಮಟವನ್ನು ನಿರ್ಮಿಸಿದನು. ಅದಕ್ಕೆ ತಾಜ್‌ಮಹಲ್ ಎಂದು ಹೆಸರಿಸಲಾಯಿತು.

ಪೋರ್ಚುಗೀಸರ ದಮನ

ಅಕ್ಬರನು ತನ್ನ ಕಾಲದಲ್ಲಿ ಪೋರ್ಚುಗೀಸ್ ಪಾದ್ರಿಗಳನ್ನು ಬಹಳ ಹಚ್ಚಿಕೊಂಡಿ ಇಸ್ಲಾಮ್ ಮತ್ತು ಇಸ್ಲಾಮೀ ಚಿಹ್ನೆಗಳ ಅವಹೇಳನ ಅವರಿಗಂತು ಸಾಮಾನ್ಯ ವಿಷ ವಾಗಿತ್ತು. ಜಹಾಂಗೀರನು ದೇಶದೊಳಗೆ ಅವರ ಚಟುವಟಿಕೆಗಳಿಗೆ ನಿಷೇಧ ಹೇ ಆದರೆ ಕರಾವಳಿಯಲ್ಲಿ ಅವರು ನಿರಂತರ ತಮ್ಮ ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಿದ್ದ ಕಿಡಿಗೇಡಿ ವರ್ತನೆ ತೋರುತ್ತಲಿದ್ದರು. ಅವರ ದರೋಡೆಯಿಂದ ಸಮುದ್ರ ಮಾಗ ಅತ್ಯಂತ ಸುರಕ್ಷಿತ ಗೊಂಡಿತ್ತು. ಎಲ್ಲ ಸಮುದ್ರ ತೀರಗಳಲ್ಲಿ ಅವರು ತ ಬಂಗಲೆಗಳನ್ನು ನಿರ್ಮಿಸಿದ್ದರು. ಸುತ್ತಮುತ್ತಲ ಭಾರತೀಯರನ್ನು ಅತ್ಯ ಪೀಡಿಸತೊಡಗಿದ್ದರು. ಅನಾಥರು ಮತ್ತು ವಿಧವೆಯರನ್ನು ಮೋಸದ ಜಾಲದ ಮೂ ಕ್ರೈಸ್ತರನ್ನಾಗಿಸುತ್ತಿದ್ದರು ಅಥವಾ ಬಲಾತ್ಕಾರವಾಗಿ ಗುಲಾಮರನ್ನಾಗಿಸಿ ಮಾ ಮಾಡುತ್ತಿದ್ದರು. ಹೂಗ್ಲಿ ನದಿಯ ಬಳಿ ಅವರು ಬಹಳ ಶಕ್ತಿಯನ್ನು ಗಳಿಸಿಕೊಂಡಿದ್ದ ಕ್ರಮೇಣ ಎಷ್ಟು ನಿರ್ಭೀತರಾಗಿ ಬಿಟ್ಟಿದ್ದರೆಂದರೆ ಮೊಗಲ್ ಪ್ರಜೆಗಳ ಮೇಲೂ ಮಾಡ ತೊಡಗಿದರು. ಅವರಿಗೆ ತಮ್ಮ ಸೇನಾಬಲದ ಮೇಲೆ ಬಹಳ ಅಭಿಮ

ಣಡಿತ್ತು. ಕೊನೆಗೆ ಅವರ ಉದ್ಧಟತನ ಎಷ್ಟು ಹೆಚ್ಚಿತೆಂದರೆ ಮಮ್ತಾಝ್ ಮಹಲಳ
್ಚರು ಸೇವಕಿಯರನ್ನು ಹೊತ್ತೊಯ್ದರು. ಬಾದಶಾಹನು ಅವರ ಹೆಚ್ಚುತ್ತಿದ್ದ
ಃಭೆಯನ್ನು ತಿಳಿದಾಗ ಕಠಿಣ ಸೇನಾ ಕಾರ್ಯಾಚರಣೆಗೆ ಆದೇಶಿಸಿದ. ಕೊನೆಗೆ ಕ್ರಿ.ಶ.
32ರಲ್ಲಿ ಬಂಗಾಳದ ಆಡಳಿತಗಾರ ದಾಳಿ ನಡೆಸಿ ಅವರನ್ನು ದಮನಿಸಿದ. ಅದರಿಂದಾಗಿ
ಸರದ ಪ್ರಜೆಗಳಿಗೆ ಅವರ ಕಿಡಿಗೇಡಿತನದಿಂದ ಮುಕ್ತಿ ದೊರೆಯಿತು.

ಕ್ಷಿಣದ ದಿಗ್ವಿಜಯಗಳು

